ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 28, 2007 ರೂ.10/-





ಮನೆ ಮಠ ಸುತ್ತ ಹಠ




ಬೆಂಗಳೂರು: ಪಾಲಿಕೆ ಆಸ್ತಿ ದೋಚಿದ ಬಿಜೆಪಿ



ಗುಲ್ಬರ್ಗಾ : ಚಂದ್ರಭಟ್ಟನ ನಕಲಿ ಯಾಗ

ಸೈಕಲ್ ರವಿಯ ಸರೆಂಡರ್ ಮರ್ಮ





ಚಿದರಿಗೆ ಹೆದರಿದ ಗೌಡ

ಗುಜರಾತ್ ಮಾದರಿ ಅಭಿವೃದ್ಧಿ-ನಂದಿಗ್ರಾಮ ಮಾದರಿ ದಮನ!

ಕೊನೆಗೂ ಯಡ್ಯೂರಪ್ಪನವರ ನೇತೃತ್ವದಲ್ಲಿ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಅಧಿಕಾರ ವಹಿಸಿಕೊಂಡ ತರುಣದಲ್ಲಿಯೇ ಯಡ್ಯೂರಪ್ಪನವರು ಮತ್ತು ಅವರ ಕ್ಯಾಬಿನೆಟ್ ಸಹವರ್ತಿಗಳು ಮೋದಿಯೇ ತಮಗೆ ಆದರ್ಶವೆಂದೂ, ಕರ್ನಾಟಕದಲ್ಲಿ ಗುಜರಾತ್ ಮಾದರಿ ಆಡಳಿತ ಕೊಡುವುದಾಗಿಯೂ ಬೆದರಿಸಿದ್ದಾರೆ!

2002ರ ಗುಜರಾತ್ ಹತ್ಯಾಕಾಂಡದ ಬಗ್ಗೆ ತಿಳಿದಿರುವ ಯಾರಿಗೇ ಆದರೂ ಗುಜರಾತ್ ಮಾದರಿ ಆಡಳಿತ ಮತ್ತು ಮೋದಿ ಮಾದರಿ ಮುಖ್ಯಮಂತ್ರಿತ್ವ ಎಂದರೆ ಗಾಬರಿ ಆಗುವುದು ಸಹಜ. ಆದರೆ ಅಭಿವೃದ್ಧಿ ಮಾದರಿಯ ಪ್ರಶ್ನೆ ಬಂದಾಗ ವಾಸ್ತವವಾಗಿ ಭಾರತದಾದ್ಯಂತ ಇರುವುದು ಒಂದೇ ಅಭಿವೃದ್ಧಿ ಮಾದರಿ! ಅದನ್ನು ಗುಜರಾತ್ ಮಾದರಿ ಎಂದಾದರೂ ಕರೆಯಬಹುದು. ನಂದಿಗ್ರಾಮ ಮಾದರಿ ಎಂದೂ ಕರೆಯಬಹುದು. ಅಥವಾ ಕಳಿಂಗನಗರ ಮಾದರಿ, ಕಲ್ಬುಂದಿ ಮಾದರಿ, ರೈತರ ಆತ್ಮಹತ್ಯೆ ಮಾದರಿ, ಆದಿವಾಸಿಗಳ ಎತ್ತಂಗಡಿ ಮಾದರಿ ಎಂದು ಬೇಕಾದರೂ ಕರೆಯಬಹುದು.

ಈ ಅಭಿವೃದ್ಧಿ ಮಾದರಿಯಲ್ಲಿ ಸಮಾನವಾದ ಅಂಶವೆಂದರೆ ಜಾಗತೀಕರಣ ನೀತಿಯನ್ನು ಚಾಚೂತಪ್ಪದೇ ಪಾಲಿಸುವುದು. ವಿದೇಶಿ ಬಂಡವಾಳಕ್ಕೆ ಉತ್ತೇಜನ ಕೊಡುವ ಹೆಸರಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಖಾಸಗೀಕರಿಸುವುದು. ಕೃಷಿಯನ್ನು ರಫ್ತು ಮಾರುಕಟ್ಟೆಗೆ ತಕ್ಕಂತೆ ಪುನರ್ ರಚಿಸುವುದು. ಸಣ್ಣಹಿಡುವಳಿಯನ್ನು ಒಕ್ಕಲೆಬ್ಬಿಸಲು ಕಾಂಟ್ರಾಕ್ಟ್ ಫಾರ್ಮಿಂಗ್ ಪದ್ಧತಿಯನ್ನೂ, ದೊಡ್ಡ ಮಟ್ಟದ ಕೃಷಿ ಸರಕು ರಫ್ತಿಗಾಗಿ ದೊಡ್ಡ ಕಾರ್ಪೊರೇಟ್ ಹಿಡುವಳಿಯನ್ನೂ ಉತ್ತೇಜಿಸುವುದು.

ಆದ್ದರಿಂದಲೇ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಕೃಷಿಯಲ್ಲಿ ಕಾರ್ಪೊರೇಟ್ ಮತ್ತು ಕಾಂಟ್ರಾಕ್ಟ್ ಫಾರ್ಮಿಂಗ್ ಅನ್ನು ಪರಿಚಯಿಸುವ ಎರಡನೇ ರಾಷ್ಟ್ರೀಯ ಕೃಷಿ ನೀತಿಯನ್ನು ಜಾರಿಗೆ ತಂದರೆ, ಯುಪಿಎ ಸರ್ಕಾರದ ಪ್ರಧಾನಿ ಮನಮೋಹನ್ ಸಿಂಗ್‌ರವರು ಸಣ್ಣ ರೈತರು ಕೃಷಿ ಬಿಟ್ಟು ಹೊರಬರಬೇಕೆಂದು ಕಳೆದ ಎರಡು ಸ್ವಾತಂತ್ರ್ಯ ದಿನೋತ್ಸವದ ಭಾಷಣಗಳು ಸೇರಿದಂತೆ ಅವಕಾಶ ಸಿಕ್ಕಾಗಲೆಲ್ಲ ಕರೆ ಕೊಡುತ್ತಲೇ ಇದ್ದಾರೆ. ಅಷ್ಟೇ ಅಲ್ಲದೆ, ಸಾವಿರಾರು ಎಕರೆ ಭೂಮಿಯನ್ನು ಬಹುರಾಷ್ಟ್ರೀಯ ಕೃಷಿ ಕಂಪನಿಗಳ ವಶಕ್ಕೆ ನೀಡುವ ವಿಶೇಷ ಕೃಷಿ ವಲಯಗಳನ್ನು (SAZ) ಜಾರಿಗೆ ತರುತ್ತಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಕೃಷಿ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸಿ ಅಲ್ಲಿ ವಿಶೇಷ ಆರ್ಥಿಕ ವಲಯದ ಹೆಸರಲ್ಲಿ ದೇಶದ ಸಂಪನ್ಮೂಲವನ್ನು ವಿದೇಶಿ ಕಂಪನಿಗಳಿಗೆ ಕಡಿಮೆ ದರದಲ್ಲಿ ಪರಭಾರೆ ಮಾಡುವ ನೀತಿಗಳನ್ನು ಗುಜರಾತ್‌ನ ಮೋದಿಯಿಂದ ಹಿಡಿದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದವರೆಗೆ ಎಲ್ಲಾ ಸರ್ಕಾರಗಳು ಜಾರಿಗೆ ತರುತ್ತಿವೆ. ಏಕೆಂದರೆ ಈ ಎಲ್ಲಾ ರಾಜ್ಯಗಳಿಗೂ ಅಮೆರಿಕದ ಮೆಕನ್ಸಿ ಸಂಸ್ಥೆಯೇ ಅಧಿಕೃತ ಸಲಹೆಗಾರನಾಗಿದೆ. ಕೇಂದ್ರದ ಕೃಷಿ ನೀತಿಯಾಗಲೀ ಅಥವಾ ವಿವಿಧ ಪಕ್ಷಗಳು ಆಳುತ್ತಿರುವ ವಿವಿಧ ರಾಜ್ಯ ಸರ್ಕಾರಗಳ ಕೃಷಿ ನೀತಿಯಾಗಲೀ ಹೇಳುವುದು ಒಂದೇ. ಅದೇನೆಂದರೆ, ರೈತರಿಗೆ ದಕ್ಕುತ್ತಿದ್ದ ಸರ್ಕಾರಿ ಸವಲತ್ತನ್ನು ಹಿಂತೆಗೆದುಕೊಂಡು ಅದನ್ನು ವಿದೇಶಿ ಕಂಪನಿಗಳಿಗೆ ಕೊಟ್ಟು ದೊಡ್ಡ ಮಟ್ಟದಲ್ಲಿ ವಿದೇಶಿ ಬಂಡವಾಳವನ್ನು ಬರಮಾಡಿಕೊಳ್ಳಬೇಕು ಎಂಬುದು.

ಆದ್ದರಿಂದಲೇ ಜೆಡಿಎಸ್-ಬಿಜೆಪಿ ಸಮಿಶ್ರ ಮಾದರಿ ಸರ್ಕಾರದಲ್ಲೂ ಕರ್ನಾಟಕದಲ್ಲಿ 100ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಮಾದರಿ ಮಹಾರಾಷ್ಟ್ರ ಸರ್ಕಾರದಲ್ಲಿ 4000ಕ್ಕೂ ಹೆಚ್ಚು ವಿದರ್ಭದ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ. ಬಂಗಾಳದಲ್ಲಿ ಹಸಿವಿನಿಂದಲೇ ಹತ್ತಾರು ಜನ ಸಾವಿಗೀಡಾಗಿರುವುದರ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗವೇ ಆ ಸರ್ಕಾರಕ್ಕೆ ನೋಟೀಸು ಕೊಟ್ಟಿದೆ.

ಬಿಜೆಪಿ ಮುಖ್ಯಮಂತ್ರಿ ಯಡಿಯೂರಪ್ಪನವರು ಪಠಿಸುತ್ತಿರುವ ಗುಜರಾತ್ ಮಾದರಿ ಅಭಿವೃದ್ಧಿ ಇದಕ್ಕಿಂತ ಏನೂ ಭಿನ್ನವಿಲ್ಲ. ಇತ್ತೀಚೆಗೆ ಸ್ವಯಂಸೇವಾ ಸಂಸ್ಥೆಯೊಂದು ಮಾಹಿತಿ ಹಕ್ಕು ಕಾಯ್ದೆಯಡಿ ಗುಜರಾತ್ ಸರ್ಕಾರದಿಂದ ಕಷ್ಟಪಟ್ಟು ಪಡೆದುಕೊಂಡ ಅಂಕಿಅಂಶಗಳ ಪ್ರಕಾರ ಗುಜರಾತ್‌ನ ಕೇವಲ ನಾಲ್ಕು ಜಿಲ್ಲೆಗಳಲ್ಲೇ ಕಳೆದ ಮೂರು ವರ್ಷಗಳಲ್ಲಿ 500ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗುಜರಾತ್‌ನ ಅಳಂಗ್ ಬಂದರಿನಲ್ಲಿ ಪ್ರಾರಂಭಿಸಲಾಗಿರುವ ಹಡಗು ಒಡೆಯುವ ವಲಯದಲ್ಲಿ ಲಕ್ಷಾಂತರ ಕಾರ್ಮಿಕರು ಕಾಯಿಲೆಗೀಡಾಗಿದ್ದಾರೆ. ಇತ್ತೀಚೆಗೆ ವಿಷಯುಕ್ತ ವಸ್ತುಗಳನ್ನು ಹೊಂದಿರುವ ಬ್ಲೂ ಲೇಡಿ ಎಂಬ ಹಡಗನ್ನು ಒಡೆಯಲು ಬಾಂಗ್ಲಾ ದೇಶವೇ ನಿರಾಕರಿಸಿದ್ದರೂ ಗುಜರಾತ್‌ನ ಮೋದಿ ಸರ್ಕಾರ ಅದನ್ನು ಬರಮಾಡಿಕೊಂಡಿದೆ. ಬರಲಿರುವ ದಿನಗಳಲ್ಲಿ ಇದರಿಂದ ಸಮುದ್ರತಟದ ನೀರೂ ವಿಷಯುಕ್ತವಾಗಿ ಮೀನುಗಾರರೂ ಸಂಕಷ್ಟಕ್ಕೀಡಾಗಲಿದ್ದಾರೆ.

ಗುಜರಾತ್ ಮಾದರಿ ಅಭಿವೃದ್ಧಿಯ ಪ್ರಧಾನ ಹೆಗ್ಗಳಿಕೆ ಅಲ್ಲಿನ ಕೆಮಿಕಲ್ ಕಾರ್ಖಾನೆಗಳು. "ಬೇಕಿದ್ದಲ್ಲಿ ನಮ್ಮ



ಗುಜರಾತ್

ಇಡೀ ಕರಾವಳಿಯನ್ನೇ ಎಸ್‌ಇಜೆಡ್ ಮಾಡಲು ಬಿಟ್ಟುಕೊಡುತ್ತೇವೆ" ಎಂದು ಮೋದಿ ಹೇಳಿದ್ದಾರೆ. ಹೀಗಾಗಿಯೇ ಅಲ್ಲಿ ತಲೆ ಎತ್ತಿರುವ ಹಲವಾರು ಎಸ್‌ಇಜೆಡ್‌ಗಳು ಪ್ರಧಾನವಾಗಿ ರಾಸಾಯನಿಕ ಕಾರ್ಖಾನೆಯ ಹಬ್‌ಗಳೇ ಆಗಿವೆ.

2001ರಲ್ಲಿ ಅಪಾಯಕಾರಿ ರಾಸಾಯನಿಕಗಳ ನಿಷೇಧದ ಬಗ್ಗೆ ಸ್ಟಾಕ್‌ಹೋಮ್ ಘೋಷಣೆಯಾದ ನಂತರ ಕನಿಷ್ಠ ಹನ್ನೆರಡು ರಾಸಾಯನಿಕಗಳನ್ನು ಅಪಾಯಕಾರಿ ಪಟ್ಟಿಯಲ್ಲಿ ಸೇರಿಸಲಾಗಿದೆ. ನಂತರ ಆ ಪಟ್ಟಿಗೆ ಇನ್ನೂ ಸಾಕಷ್ಟು ರಾಸಾಯನಿಕಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಬಹುಪಾಲು ಡಯಾಕ್ಸಿನ್, ಫರೇ, ಡಿಡಿಟಿ, ಆಲ್ಡ್ರಿನ್‌ಗಳಂತ POP, CMR ಮತ್ತು PBT ಪಟ್ಟಿಯಲ್ಲಿ ಸೇರಿಸಲ್ಪಟ್ಟ ಜೀವನಾಶಕ ರಾಸಾಯನಿಕಗಳೇ ಆಗಿವೆ. ಇದರಲ್ಲಿ ಗುಜರಾತಿನಲ್ಲಿ ಒಡೆಯಲು ಕ್ಯೂ ಗಟ್ಟಿ ನಿಂತಿರುವ ಹಡಗುಗಳ ನಿರ್ಮಾಣಕ್ಕೆ ಬಳಸುತ್ತಿದ್ದ ಆಸ್ಬೆಸ್ಟಾಸ್ ಸಹ ಸೇರಿದೆ. ಯುರೋಪಿನಲ್ಲಿ ಇಂತಹ ರಾಸಾಯನಿಕ ಘಟಕಗಳನ್ನು ಈಗ ನಿಷೇಧಿಸಿರುವುದರಿಂದ ಅವುಗಳ ಲಾಭವನ್ನು ಭಾರತ ಪಡೆಯಬೇಕೆಂದು ಹೇಳಿರುವ ಮೋದಿ ಗುಜರಾತಿನ ಎಸ್‌ಇಜೆಡ್‌ಗಳು ಪರಿಸರ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಿಲ್ಲವಾದ್ದರಿಂದ ಎಲ್ಲೆಡೆ ನಿಷೇಧಿಸಲ್ಪಟ್ಟಿರುವ ಹಲವು ಬಗೆಯ ರಾಸಾಯನಿಕಗಳು ಅಲ್ಲಿ ಉತ್ಪಾದನೆಗೊಂಡು ಗುಜರಾತಿನ ಪರಿಸರವನ್ನು ಮತ್ತು ಅಲ್ಲಿನ ಜನತೆಯ ಆರೋಗ್ಯವನ್ನು ಶಾಶ್ವತವಾಗಿ ಹಾಳುಗೆಡವುತ್ತದೆ. ಮೋದಿ

ಚಾರ್ವಾಕ

ಶಿವಸುಂದರ್

ಹೇಳಿದ ಲಾಭವೂ ಇದೇ. ಗುಜರಾತ್ ಮಾದರಿ ಅಭಿವೃದ್ಧಿಯೆಂದರೂ ಇದೇ ಆಗಿದೆ.

ವಿಪರ್ಯಾಸವೆಂದರೆ ಈ ಬಗೆಯ ಜೀವನಾಶಕ ಕೆಮಿಕಲ್ ಹಬ್‌ಗಳನ್ನು ಪಡೆಯಲು ಪ.ಬಂಗಾಳದ ಸರ್ಕಾರ ಮತ್ತು ಗುಜರಾತ್ ಸರ್ಕಾರದ ನಡುವೆ ಪೈಪೋಟಿ ನಡೆಯುತ್ತಿದೆ. ಈಗ ಅತಿ ಹೆಚ್ಚು ಚರ್ಚೆಗೆ ಒಳಪಟ್ಟಿರುವ ನಂದಿಗ್ರಾಮದಲ್ಲೂ ಇಂಡೋನೇಷಿಯಾದ ಸಲಿಂ ಗ್ರೂಪ್ ಕಂಪನಿಯು ಅಪಾಯಕಾರಿ ರಾಸಾಯನಿಕಗಳನ್ನು ತಯಾರಿಸುವ ಎಸ್‌ಇಜೆಡ್‌ಅನ್ನು ಸ್ಥಾಪಿಸಲು ಮುಂದಾಗಿತ್ತು. ಗುಜರಾತ್ ಮತ್ತು ಪ.ಬಂಗಾಳದಲ್ಲಿ ತಲೆ ಎತ್ತುತ್ತಿರುವ ಈ ಎರಡೂ ಬಗೆಯ ಎಸ್‌ಇಜೆಡ್‌ಗಳ ನಡುವೆ ಮತ್ತೊಂದು ಸಾಮಾನ್ಯ ಅಂಶವೆಂದರೆ: ಜನಸಾಮಾನ್ಯರ ಜೀವನದ ಮೇಲೆ ಅತಿ ಹೆಚ್ಚು ಅಪಾಯ ಮಾಡುವ ಈ ಯೋಜನೆಗಳನ್ನು ಜನರಿಂದಲೇ ಅತಿ ಗೋಪ್ಯವಾಗಿ ಮುಚ್ಚಿಡಲ್ಪಟ್ಟಿದ್ದು.

ಆದರೆ ಈ ವಿಷಯ ಜನರಿಗೆ ತಿಳಿದ ನಂತರ ಬಂದ ಪ್ರತಿರೋಧವನ್ನು ಹಿಮ್ಮೆಟ್ಟಿಸುವಲ್ಲಿ ಮಾತ್ರ ಕೆಲವು ವ್ಯತ್ಯಾಸಗಳಿತ್ತು. ಒಂದೆಡೆ ಗುಜರಾತ್ ಸರ್ಕಾರ ಇದರ ಬಗ್ಗೆ ಜನ ತಲೆಕೆಡಿಸಿಕೊಳ್ಳಬಾರದೆಂದು ಜನರನ್ನೇ ಒಡೆದು ಆಳುವ ಕೋಮುವಾದಿ ಸಿದ್ಧಾಂತವನ್ನು ಬಳಸಿ ಬಾಧೆಗೊಳಗಾಗಿರುವ ಜನರ ಒಗ್ಗಟ್ಟು ಮತ್ತು ಸೌಹಾರ್ದತೆಯನ್ನೇ ಹಾಳುಗೆಡವಿತು. ಮತ್ತೊಂದೆಡೆ ಪ. ಬಂಗಾಳದ ಎಡರಂಗ ಸರ್ಕಾರ ಪೊಲೀಸ್ ಗೋಲೀಬಾರ್‌ನಂತ ದಮನವನ್ನು ಮತ್ತು ಸಿಪಿಎಂ



ನಂದಿಗ್ರಾಮ

ಪಕ್ಷದ ಯುವ ಗೂಂಡಾಗಳನ್ನು ಬಳಸಿ ಹತ್ತಿಕ್ಕುವ ಪ್ರಯತ್ನವನ್ನು ಮಾಡಿತು.

ಹೀಗಾಗಿ ಈ ಅಭಿವೃದ್ಧಿ ಮಾದರಿಗಳಲ್ಲಿ ಜಾಗತೀಕರಣ ಹಾಗು ಮಾರುಕಟ್ಟೆ ನೀತಿಯಷ್ಟೇ ಅತ್ಯಂತ ಪ್ರಮುಖವಾದ ಮತ್ತೊಂದು ಸಾಮ್ಯತೆಯೆಂದರೆ ಬರ್ಬರ ಪ್ರಭುತ್ವ ದಮನ. ತುರ್ತು ಪರಿಸ್ಥಿತಿಯಿಲ್ಲದೇ ತುರ್ತು ಪರಿಸ್ಥಿತಿಯಂತಹ ದಮನವನ್ನು ಹೇರಲು. ಈ ನೀತಿಗಳನ್ನು ಜಾರಿಗೆ ತರುತ್ತಿರುವ ಎಲ್ಲಾ ಪಕ್ಷಗಳು ಯತ್ನಿಸುತ್ತಿವೆ. ತಮ್ಮ ಈ ನೀತಿಗಳ ವಿರುದ್ಧ ಹುಟ್ಟಬರುತ್ತಿರುವ ಜನಪ್ರತಿರೋಧವನ್ನು ಹತ್ತಿಕ್ಕಲು ಅದರ ಹಿಂದೆ 'ಮಾವೋವಾದಿ ಉಗ್ರರ' ಕೈವಾಡವಿದೆಯೆಂದು ಪ್ರಚಾರ ಮಾಡುತ್ತಿವೆ. ಜನರ ಪ್ರತಿರೋಧದ ಮೇಲೆ ಕ್ರೂರ ದಮನವನ್ನು ಹರಿಬಿಡಲು ಅದನ್ನು ನೆಪವಾಗಿ ಬಳಸಿಕೊಳ್ಳುತ್ತಿವೆ. ಇರಾಕ್ ಮೇಲೆ ದಾಳಿ ಮಾಡಲು ಅಮೆರಿಕದ ಬುಷ್ ಸರ್ಕಾರ ಇಲ್ಲದ ಸಮೂಹ ನಾಶಕ ಶಸ್ತ್ರಾಸ್ತ್ರದ ನೆಪವನ್ನು ಬಳಸಿಕೊಂಡಂತೆ!!

ಇವೆಲ್ಲವೂ ಸಿದ್ಧಾಂತರಹಿತ ಆಡಳಿತ ಮತ್ತು ಅಭಿವೃದ್ಧಿಯೆಂಬ ವಿಶ್ವಬ್ಯಾಂಕ್ ನಿರ್ದೇಶಿತ ಅಭಿವೃದ್ಧಿ ಮಾದರಿಗಳೇ ಆಗಿವೆ. ಈ ಅಭಿವೃದ್ಧಿ ಎಂಬುದು ರಾಜಕೀಯ ರಹಿತವಾಗಿ ಸಂಭವಿಸಲು ಸಾಧ್ಯವೇ? ಅಥವಾ ಅಭಿವೃದ್ಧಿಯಾಗದಿರುವುದಕ್ಕೆ ಸಂಪನ್ಮೂಲದ ಕೊರತೆ ಮಾತ್ರ ಕಾರಣವೇ?

ಅಭಿವೃದ್ಧಿಯೆಂಬುದು ರಾಜಕೀಯರಹಿತವಾಗಿರುವುದಿಲ್ಲ. ಬಡತನಕ್ಕೆ ಸಂಪನ್ಮೂಲದ ಕೊರತೆ ಅಥವಾ ಪ್ರತಿಭೆಯ ಕೊರತೆ ಕಾರಣವಲ್ಲ. ಲಭ್ಯವಿರುವ ಸಂಪನ್ಮೂಲಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವ ಅಧಿಕಾರ ಹಾಗೂ ಹಕ್ಕು ಇಲ್ಲದಿರುವುದೇ ಶಾಶ್ವತವಾಗಿ ಬಡತನ ಮುಂದುವರೆಯುವುದಕ್ಕೆ ಮೂಲ ಕಾರಣ. ಈ ಅಧಿಕಾರ ಮತ್ತು ಸಂಪನ್ನತೆ ನಮ್ಮ ಸಮಾಜದಲ್ಲಿ ಉಳ್ಳವರ ಬಳಿ ಮತ್ತು ಜಾಗತಿಕವಾಗಿ ಅಮೆರಿಕದ ಬಳಿ ಕೇಂದ್ರೀಕರಣಗೊಂಡಿರಲು ಯುದ್ಧದಂತ ರಾಜಕೀಯ ನೀತಿಗಳು ಮತ್ತು ಅದನ್ನು ಮಾಡಲು ಬಳಸುತ್ತಿರುವ ಇಸ್ಲಾಮ್ ವಿರೋಧಿ, ವರ್ಣಭೇದ, ಜನಾಂಗೀಯವಾದಿ ರಾಜಕೀಯ ಸಿದ್ಧಾಂತಗಳೇ ಕಾರಣ. ಹೀಗಾಗಿ ಅಭಿವೃದ್ಧಿ ರಾಜಕೀಯ ರಹಿತ ಅಭಿವೃದ್ಧಿಯೇನಲ್ಲ.

ಆದ್ದರಿಂದಲೇ ಇಂದು ಜಗತ್ತಿನಾದ್ಯಂತ ತಾರತಮ್ಯ ಪೋಷಿಸುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿ ಹಾಗೂ ಸಾವಿರಾರು ವರ್ಷಗಳಿಂದ ತಾರತಮ್ಯವನ್ನೇ ಧಾರ್ಮಿಕ ಸಿದ್ಧಾಂತವನ್ನಾಗಿಸಿಕೊಂಡಿರುವ ಹಿಂದೂ ಕೋಮುವಾದಿಗಳೊಂದಿಗೆ ಸಹಜ ಬಾಂಧವ್ಯವನ್ನು ಏರ್ಪಡಿಸಿಕೊಂಡಿರುವುದೂ ಆಶ್ಚರ್ಯವಲ್ಲ. ಒಂದು ತಾರತಮ್ಯವಿರುವ ಸಮಾಜವನ್ನು ಕಾಪಾಡಿಕೊಂಡು ಬರಲು ತಾರತಮ್ಯವಾದಿ ಸಿದ್ಧಾಂತದ ಅಗತ್ಯವಿದೆ.

ಸಕಲರ ಅಭಿವೃದ್ಧಿಯೆಂಬ ಬದಲಿಗೆ ಬಲವಿದ್ದವನು ಮಾತ್ರ ಬದುಕಬೇಕೆಂಬುದು ಇಂದು ವಿಶ್ವ ಮಟ್ಟದಲ್ಲಿ ಜಾರಿಯಲ್ಲಿರುವ ನವ ಉದಾರವಾದಿ ಆರ್ಥಿಕ ಸಿದ್ಧಾಂತದ ಹೂರಣವಾದರೆ, ಕೆಲವರು ತಮ್ಮ ಜನ್ಮಜಾತ ಹಕ್ಕಿನಂತೆ ಹೆಚ್ಚು ಅಭಿವೃದ್ಧಿ ಹೊಂದುವುದೂ ಕೆಲವರು ಅವರ ಗುಲಾಮರಾಗಿರುವುದೂ ಸಹಜವಾದದ್ದೇ ಎಂದು ಹಿಂದೂ ಆರ್ಥಿಕ ಚಿಂತನೆ ಪ್ರತಿಪಾದಿಸುತ್ತದೆ. ಅದರೊಡನೆ ಅದರ ತೀವ್ರ ದಲಿತ ಹಾಗೂ ಮುಸ್ಲಿಂ ವಿರೋಧಿ ಚಿಂತನೆಗಳು ಇದಕ್ಕೆ ಪೂರಕವಾಗಿ ಬರುತ್ತದೆ. ಆದ್ದರಿಂದಲೇ ಗುಜರಾತಿನಲ್ಲಿ ಭೂಕಂಪ ಸಂಭವಿಸಿದಾಗ ಸಾವಿರಾರು ಕೋಟಿ ಹಣ ಹರಿದು ಬಂದರೂ ಅದು ಸವರ್ಣೀಯ ಹಿಂದೂಗಳ ಪಾಲಾಯಿತೇ ವಿನಃ ದಲಿತರಿಗಾಗಲೀ , ಮುಸ್ಲಿಮರಿಗಾಗಲೀ ಸಿಗಲಿಲ್ಲ. ಅದೇ ರೀತಿ ಸ್ವದೇಶಿ ಎಂಬ ಹೆಸರಿನಲ್ಲಿ, ಗುಜರಾತಿ ಅಸ್ಮಿತೆಯ ಹೆಸರಿನಲ್ಲಿ ಗುಜರಾತಿಗಳನ್ನು ವಂಚಿಸಿಕೊಂಡು ಬರುತ್ತಿರುವ ಮೋದಿ ಸರ್ಕಾರ ಇಡೀ ದೇಶದ ಹಾಗೂ ಗುಜರಾತಿನ ಸ್ವಾಭಿಮಾನಕ್ಕೆ ಧಕ್ಕೆ ತರುವಂತೆ ಫ್ರಾನ್ಸಿನ ಅತ್ಯಂತ ಅಪಾಯಕಾರಿ ಕಲ್ನಾರಿನ ವಿಷಯುಕ್ತ ಕ್ಲೆಮೆಂಚು ಹಡಗನ್ನು ಗುಜರಾತಿನ ಬಂದರಿಗೆ ಬರಮಾಡಿಕೊಳ್ಳಲು ಸಿದ್ಧವಾಗಿತ್ತು. ಅದನ್ನು ವಿರೋಧಿಸಿದ ಕಾರ್ಮಿಕರನ್ನು ಹಾಗೂ ಪರಿಸರವಾದಿಗಳನ್ನೇ ದೇಶದ್ರೋಹಿಗಳೆಂದು ಕರೆಯಿತು. ವಿಪರ್ಯಾಸವೆಂದರೆ ಪ.ಬಂಗಾಳದ ಮುಖ್ಯಮಂತ್ರಿ ಬುದ್ಧದೇವರೂ ನಂದಿಗ್ರಾಮದಲ್ಲಿ ಹೋರಾಡುತ್ತಿರುವವರನ್ನು ಮತ್ತು ಅವರಿಗೆ ಬೆಂಬಲವಾಗಿರುವ ಪರಿಸರವಾದಿಗಳನ್ನು ದೇಶದ್ರೋಹಿಗಳೆಂದೇ ಕರೆಯುತ್ತಾರೆ.

ಸ್ವತಂತ್ರ ಭಾರತದಲ್ಲಿ ವಿದೇಶಿ ಬಂಡವಾಳದ ಮತ್ತು ಬಂಡವಾಳಿಗರ ವಿರುದ್ಧ ಮಾತಾಡುವವರೆಲ್ಲಾ ದೇಶದ್ರೋಹಿಗಳಾಗಿ ಬಿಡುವುದು ನಮ್ಮ ಸ್ವಾತಂತ್ರ್ಯದ ಬಗ್ಗೆಯೂ, ಒಂದೇ ಬಗೆಯ ಅಭಿವೃದ್ಧಿ ಮಾದರಿಯನ್ನು ವಿವಿಧ ಪಕ್ಷಗಳ ಹೆಸರಿನಲ್ಲಿ ಜಾರಿಗೆ ತರುತ್ತಿರುವುದು ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆಯೂ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಎರಡನೇ ಮಹಾಯುದ್ಧದ ಹಿಟ್ಲರ್ 'ಫ್ಯಾಸಿಸಮ್ ಎಂದರೆ ಕಾರ್ಪೊರೇಟ್ ಶಕ್ತಿಗಳ ಹಾಗೂ ಪ್ರಭುತ್ವದ ಮೈತ್ರಿ' ಎಂದನಂತೆ. ಭಾರತದಲ್ಲಿ ಆಳುವ ಪಕ್ಷಗಳ ಮೈತ್ರಿಯಿಂದಾಚೆಗೆ ಮೇಲಿನ ಫ್ಯಾಸಿಸ್ಟ್ ಮೈತ್ರಿಯ ಬಗ್ಗೆ ಯೋಚಿಸುವ ಸಂದರ್ಭ ಬಂದಿದೆ. ■

No Comments



"ವಿಧಾನ ಸಭೆಯಲ್ಲಿ ಬಹುಮತ ಸಾಬೀತುಪಡಿಸುವ ಮುನ್ನ ನಮ್ಮ ಷರತ್ತುಗಳನ್ನು ಒಪ್ಪಿ ಇಲ್ಲದಿದ್ದರೆ ನಮ್ಮ ಶಾಸಕರಿಂದ ಬೆಂಬಲವನ್ನು ನಿರೀಕ್ಷಿಸಲೇಬೇಡಿ."

-ದೇವೇಗೌಡ



"ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಜನತೆಯ ಮೇಲೆ ವಿಶ್ವಾಸವಿಲ್ಲ, ಇದ್ದಿದ್ದರೆ ಚುನಾವಣೆಗೆ ಮುಂದಾಗುತ್ತಿದ್ದರು."

-ಡಿ.ಕೆ.ಶಿವಕುಮಾರ್

"ಎಲ್ಲಾ ಧರ್ಮಗುರುಗಳೂ ಧರ್ಮಸ್ಥಳದ ಧರ್ಮಾಧಿಕಾರಿಯನ್ನು ಅನುಸರಿಸಬೇಕು."

-ಗೊ.ರು.ಚನ್ನಬಸ[ಪ್ಪ]

"ನಾವು ಎಡಪಂಥೀಯ ಚಿಂತನೆಗಳಿಂದ ದಾರಿತ[ಪ್ಪಿಲ್ಲ.] ದಾರಿ ತಪ್ಪಿರುವುದು ಫ್ಯಾಸಿಸ್ಟಾಗಿರುವ ಬುದ್ಧದೇ[ವ] ಸರ್ಕಾರ."

-ನಾಟಕಕಾರ ಬಿಪಾಶ್ ಚಕ್ರವ[ರ್ತಿ]


ನಂಬಿದ್ರೆನಂಬಿ ಬಿಟ್ರೆಬಿಡಿ

"ಇನ್ನೂ ಇಪ್ಪತ್ತು ವರ್ಷ ಯಡ್ಯೂರಪ್ಪನವರೇ ಮುಖ್ಯಮಂ[ತ್ರಿ] ಆಗಿರುವಂತೆ ಹೋಮ ಹವನ ಮಾಡಿದ್ದೇವೆ."

-ಯಡ್ಯೂರಪ್ಪನವರು ಮುಖ್ಯಮಂತ್ರಿ ಆದಾ[ಗ] ವಿಧಾನ ಸೌಧದಲ್ಲಿ ಹೋಮ ಮಾಡಿದ ಅರ್ಚಕ[ರು]

"ಯಡ್ಯೂರಪ್ಪನವರು ದೇವರ ಪೂಜೆ ಮಾಡಿದ್ದಾರೆಯೇ ವಿನಃ ಹೋಮ ಹವನಗಳನ್ನಲ್ಲ."


-ನ್ಯಾಯಮೂರ್ತಿ ರಾಮಾ ಜೋಯಿಸ್



"ಕಣ್ಣುಮುಚ್ಚಿ ಧ್ಯಾನ ಮಾಡಿರಿ. ಸುವರ್ಣಯುಗ ಕಾಣುವುದು."

-ಸುವರ್ಣಯುಗ ಪಕ್ಷದ ಸಂಸ್ಥಾಪಕ ಮಹಿಮಾ ಪಟೇಲ್

ಆಧುನಿಕ ಸಾವರ್ಕರ್!



"ಹೋಮ ಹವನ ಭಾರತದ ಸಂಪ್ರದಾಯ. ಭಾರತದ ಹಾಗೂ ಕರ್ನಾಟಕದ ಸಂಪ್ರದಾಯಗಳನ್ನು ವಿರೋಧಿಸುವವರು ಈ ದೇಶದಲ್ಲಿ ಇರಲು ನಾಲಾಯಕ್."


-ಸದಾನಂದ ಗೌಡ

ವಾಟ್ ಎ ಪಿಟಿ!

"ಜೆಡಿಎಸ್ ಪಕ್ಷದ ಚಿಂತಕರ ಚಾವಡಿಯ ಏಕೈಕ ಚಿಂ[ತಕ] ವೈ.ಎಸ್.ವಿ.ದತ್ತ."

-ಪತ್ರಿಕಾ ವರ[ದಿ]


ಸಂವೇದನೆಗಳನ್ನು ಸರಕುಗಳೆಂದು ಭಾವಿಸುವವರು!



"ಕಾವ್ಯ ಮತ್ತು ಕಥೆಗಳನ್ನು ಬರೆಯಲು ಕೋರ್ಸ್‌ಗಳನ್ನು ಪ್ರಾರಂಭಿಸಬೇಕು."

-ಬಿ.ಕೆ.ಚಂದ್ರಶೇಖರ್


ವಿಕೇಂದ್ರಿಕರಣದ ದುರ್ಬಳಕೆ!



"ನಂದಿಗ್ರಾಮದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಅದನ್ನು ಪಾರ್ಲಿಮೆಂಟನಲ್ಲಿ ಹೇಗೆ ಚರ್ಚಿಸಲು ಸಾಧ್ಯ?"

-ಸೀತಾರಾಂ ಯೆಚೂ[ರಿ]

ವಿವೇಕ



"ಒಂದು ಸಂಕೀರ್ಣ, ಸೂಕ್ಷ್ಮ ಮತ್ತು ಬಹುಮುಖೀ ಸಂಸ್ಕೃತಿಗಳುಳ್ಳ ಸಮಾಜವನ್ನು ಹೊಂದಿರುವ ಭಾರತದಂತ ದೇಶಗಳ ಮಾಧ್ಯಮ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಒಳ್ಳೆಯದನ್ನು ಮಾಡುವುದಿಲ್ಲ, ಏಕೆಂದರೆ ಅದು ಸೂಕ್ಷ್ಮ ಸಾಂಸ್ಕೃತಿಕ ವಿಷಯಗಳಿಗೆ ಕುರುಡಾಗಿರುತ್ತದೆ. ಮತ್ತು ಅದು ಸಂಸ್ಕೃತಿಯನ್ನು ಬಿಕರಿಗೆ ಸಿದ್ಧವಾಗಿರುವ ಮಾರುಕಟ್ಟೆಯನ್ನಾಗಿ ಮಾತ್ರ ಭಾವಿಸುತ್ತದೆ."

-ಸರ್ ಹೆರಾಲ್ಡ್ ಎವಾನ್[ಸ್]
ಹಿರಿಯ ಬ್ರಿಟಿಷ್ ಪತ್ರಕರ್ತ

ಅನಿಷ್ಟರ ಆರ್ಭಟ, ದುರ್ಬಲರ ಸಂಕಟ

ನಿವಾರ ರಾತ್ರಿ ಕೆಲಸ ಮುಗಿಸಿಕೊಂಡು ಇನ್ನೇನು ನೆಗೆ ಹೊರಡಬೇಕು. ಆಗ ಮಿತ್ರರೊಬ್ಬರು ಲೇಟೆಸ್ಟ್ ದ್ದಿಗಾಗಿ ಟಿವಿ ಚಾನೆಲ್‌ಗಳನ್ನು ಸರ್ಫ್ ಮಾಡುತ್ತಿದ್ದರು. ನೆಲ್ ಒಂದರಲ್ಲಿ ಯಡಿಯೂರಪ್ಪ "ವೈಷ್ಣೋದೇವಿಯ ರ್ಶನಕ್ಕೆ ಹೋಗಿದ್ದಾಗ ಕರ್ನಾಟಕದಲ್ಲಿ ರಾಷ್ಟ್ರಪತಿ ಳಿತವನ್ನು ರದ್ದುಗೊಳಿಸಲಾಯಿತು. ಆಗ ನಾನು ಖ್ಯಮಂತ್ರಿ ಆದನಂತರ ಮತ್ತೆ ಬಂದು ಪೂಜೆ ಸಲ್ಲಿಸುವೆ ಂದು ಆ ಮಾತೆಗೆ ಮಾತು ಕೊಟ್ಟಿದ್ದೆ. ಆದ್ದರಿಂದ ತ್ತೆ ವೈಷ್ಣೋದೇವಿ ದರ್ಶನ ದೆನು ಬಂದೆ" ಎಂದು ಹೇಳು ದ್ದರು.

ಇನ್ನೊಂದು ಚಾನೆಲ್‌ನಲ್ಲಿ ಮೋದ್ ಮುತಾಲಿಕ್ ಎಂಬ ಲೆ ಕೆಟ್ಟ ಹಿಂದೂತ್ವವಾದಿ ಂದೂ ಮಹಿಳೆಯರೆಲ್ಲ ಜನ್‌ಗಟ್ಟಲೆ ಮಕ್ಕಳನ್ನು ಹಡೆಯ ಕು" ಎಂದು ಮುಖ ಸಿಂಡರಿಸಿ ೂಂಡು ಆಜ್ಞೆ ನೀಡುತ್ತಿದ್ದ. ುಸ್ಲಿಮರೆಂದರೆ, ಪಾಕಿಸ್ತಾನ ಂದರೆ ಉರಿದುಬೀಳುವ ಈತ ುಂದೊಂದು ದಿನ ಪಾಕಿಸ್ತಾನ ಾತ್ರವಲ್ಲ ಅಫಘಾನಿಸ್ತಾನವನ್ನು ಶಪಡಿಸಿಕೊಂಡು ಅಖಂಡ ಾರತವನ್ನು ಸ್ಥಾಪಿಸಲಾಗು ುದೆಂದು ಬೊಗಳೆ ಬಿಡುತ್ತಿದ್ದ.



ಎಂದಿನಂತೆ ಶನಿವಾರದ ಸಂಜೆ ತ್ರಿಕೆಗಳಲ್ಲಿ ಬಿಜೆಪಿ ತಳಮಳ, ೆಡಿಎಸ್ ಪರತ್ತು, ಸರ್ಕಾರಕ್ಕೆ ದಂತಭಗ್ನ ಎಂದೆಲ್ಲ ುದ್ದಿಗಳಿದ್ದವು. ರಾಜ್ಯದ ರಾಜಕೀಯ ಇವತ್ತು ದೇವೇಗೌಡರ ುಟುಂಬ ಕಲ್ಯಾಣ, ಯಡಿಯೂರಪ್ಪನ ಅಧಿಕಾರ ದಾಹ, ೆಡಿಎಸ್‌ನವರ ಹುಂಬತನ, ಬಿಜೆಪಿಗಳ ಭಂಡತನ, ಾಂಗ್ರೆಸ್‌ರವರ ನಿಷ್ಕ್ರಿಯತೆ..... ಇವುಗಳ ಸುತ್ತ ಗಿರಕಿ ೊಡೆಯುತ್ತಿದೆ. ಜನಸಾಮಾನ್ಯರು ಮಾತ್ರ ಆತಂಕದಲ್ಲಿ ಲುಕಿಕೊಂಡಿದ್ದಾರೆ.

ರಾಜಕೀಯ ನಾಯಕರು ಯಾವ ಇಲಾಖೆ ಯಾರಿಗೆ, ಾವ ಹುದ್ದೆ ಯಾರ ಪಾಲು ಎಂದು ಬೀದಿ ಜಗಳ ಾಡಿಕೊಳ್ಳುತ್ತಿರುವಾಗ ಸಾಮಾನ್ಯ ಜನರು ತಲೆ ೇಲೊಂದು ಸೂರಿಗಾಗಿ, ಸ್ವಾಭಿಮಾನದ ಬದುಕಿಗೊಂದು ೌಕರಿಗಾಗಿ, ನೆಮ್ಮದಿಯ ಜೀವನಕ್ಕಾಗಿ ಇವತ್ತು ಪಪಡಿಸುತ್ತಿದ್ದಾರೆ. ಇದನ್ನೆಲ್ಲಾ ಯೋಚಿಸುತ್ತಿದ್ದಾಗಲೇ ನಗೆ ಶಿವಲಿಂಗಮ್ ನೆನಪಾದರು. ಕೋಲಾರದಲ್ಲಿ ತಮಿಳು ಲೆಕ್ಚರರ್ ಆಗಿದ್ದ ಶಿವಲಿಂಗಮ್‌ರವರ ಮಗಳು ಆಂಗ್ಲ ಪತ್ರಿಕೆಯೊಂದರಲ್ಲಿ ವರದಿಗಾರ್ತಿ ಆಗಿದ್ದಾಳೆ ಮತ್ತು ಅವರ ುಗ ಲಾ ಓದುತ್ತಿದ್ದಾನೆ. ಮಕ್ಕಳಿಗೆ ಅನುಕೂಲವಾಗಲೆಂದು ಶಿವಲಿಂಗಮ್ ಬೆಂಗಳೂರಿನಲ್ಲೇ ಬಾಡಿಗೆ ಮನೆ ಪಡೆದು ವಾಸಿಸಿದರೆ ಸರಿ ಎಂದು ತೀರ್ಮಾನಿಸಿದರು.

ಶಿವಲಿಂಗಮ್‌ರವರ ದೇಹ ಬಣ್ಣ ಅಪ್ಪಟ ಕಪ್ಪು, ಅವರು ಜನಿಸಿದ್ದು ದಲಿತ ಸಮುದಾಯದಲ್ಲಿ, ಇಂತಹ ಶಿವಲಿಂಗಮ್ ಬಸವನಗುಡಿ, ಶ್ರೀನಿವಾಸನಗರ, ಶ್ರೀನಗರ ಮತ್ತು ಹನುಮಂತನಗರಗಳಲ್ಲಿ ಬಾಡಿಗೆ ಮನೆಗಾಗಿ ಹುಡುಕಲಾರಂಭಿಸಿದರು. ಬ್ರೋಕರ್ ಒಬ್ಬ ಇವರನ್ನು ತನ್ನ ಮೋಟರ್ ಬೈಕ್ ಮೇಲೆ ಕೂರಿಸಿಕೊಂಡು ವಿದ್ಯಾಪೀಠದ ಹತ್ತಿರವಿರುವ ಮನೆಯೊಂದನ್ನು ತೋರಿಸಿದ.

ಇವರನ್ನು ನೋಡುತ್ತಿದ್ದಂತೆ ಮನೆ ಮಾಲೀಕ "ನೀವ್ಯಾವ ಜಾತಿ?" ಅಂತ ಕೇಳಿದ.

"ದಲಿತ" ಎಂದು ಶಿವಲಿಂಗಮ್ ಉತ್ತರಿಸಿದರು.

"ದಲಿತ ಅಂದ್ರೆ?"


"ಎಸ್.ಸಿ."

ಶಿವಲಿಂಗಮ್‌ರವರ ಉತ್ತರದಿಂದ ಮನೆ ಮಾಲೀಕನ ಮುಖದಲ್ಲಾದ ಬದಲಾವಣೆಯಿಂದಲೇ ಆತ ಮನೆ ಕೊಡುವುದಿಲ್ಲ ಎಂದು ಸ್ಪಷ್ಟವಾಯಿತು. "ನಾವು ನಾಯ್ಡುಗಳು. ಈ ರಸ್ತೆಯಲ್ಲಿರುವವರೆಲ್ಲ ನಮ್ಮ ಜಾತಿಯವರೇ. ನನಗೇನೂ ಅಭ್ಯಂತರವಿಲ್ಲ, ಆದರೆ ನೀವು ಇಲ್ಲಿ ಸಂತೋಷವಾಗಿರಲ್ಲ ಅನ್ನಿಸುತ್ತೆ" ಎಂದೆಲ್ಲ ಹೇಳಿ ಶಿವಲಿಂಗಮ್‌ರವರನ್ನು ಸಾಗ ಹಾಕಿದ.

ಬ್ರೋಕರ್‌ಗೆ ನಿರಾಶೆಯಾಗಿತ್ತು. "ನೀವು ಹೀಗೆ ನಿಮ್ಮ ಜಾತಿ ಬಗ್ಗೆ ಸತ್ಯ ಹೇಳಿದ್ರೆ ನಿಮಗೆ ಮನೆ ಸಿಗಲ್ಲ" ಎಂದು ಗೊಣಗಿದ. ಆದರೆ ಶಿವಲಿಂಗಮ್ ಸುಳ್ಳು ಹೇಳಲು ಸಿದ್ಧರಿರಲಿಲ್ಲ. "ನಾನೊಬ್ಬ ಲೆಕ್ಚರರ್, ಮಕ್ಕಳಿಗೆ ಪಾಠ ಮಾಡುವವನು. ನಾನು ಹೇಗೆ ಸುಳ್ಳು ಹೇಳಲಿ?" ಎಂದರು. "ಈ ಏರಿಯಾದಲ್ಲಿ ನಿಮಗೆ ಮನೆ ಕೊಡಿಸುವುದು ನನ್ನಿಂದ ಸಾಧ್ಯವಿಲ್ಲ. ಪಕ್ಕದ ಏರಿಯಾದ ಬ್ರೋಕರ್‌ನನ್ನು ಪರಿಚಯಿಸುತ್ತೇನೆ" ಎಂದ ಆತ.

ಶಿವಲಿಂಗಮ್‌ರವರ ಮುಖ ನೋಡುತ್ತಿದ್ದಂತೆ ಹೊಸ ಬ್ರೋಕರ್ "ನೀವು ವೆಜ್ಜಾ, ನಾನ್‌ವೆಜ್ಜಾ?" ಅಂತ ಕೇಳಿದ. ಆ ಪ್ರಶ್ನೆಯಲ್ಲೇ ಶಿವಲಿಂಗಮ್‌ರವರ ಜಾತಿ ಪತ್ತೆಹಚ್ಚುವ ಉದ್ದೇಶ ಅಡಗಿತ್ತು. "ನಾನ್ ವೆಜ್ಜು" ಎಂದು ಉತ್ತರಿಸಿದ ಕೂಡಲೇ "ಈ ಏರಿಯಾದಲ್ಲಿ ನಿಮಗೆ ಮನೆ ಸಿಗಲ್ಲ" ಎಂದು ಹೇಳಿ ಸುಮ್ಮನಾದ.

ಶಿವಲಿಂಗಮ್‌ರವರ ಮಿತ್ರರಾದ ಸಾಫ್ಟ್‌ವೇರ್ ಇಂಜಿನಿಯರ್‌ರೊಬ್ಬರು ಇವರಿಗಾಗಿ ಬಾಡಿಗೆ ಮನೆ ಹುಡುಕುತ್ತಿದ್ದರು. ಮಾಲೀಕನೂ ಬಾಡಿಗೆಗೆ ನೀಡಲು ಒಪ್ಪಿ ಅಡ್ವಾನ್ಸ್ ಹಣ ತರಲು ಹೇಳಿದ. ವಿಷಯ ತಿಳಿದು ಶಿವಲಿಂಗಮ್ ಆ ಮನೆ ನೋಡಲು ಹೋದರು. ಅವರ ಅಗತ್ಯಗಳಿಗೆ ಆ ಮನೆ ತಕ್ಕದಾಗಿತ್ತಾದ್ದರಿಂದ ಅವರಿಗೂ ಸಂತೋಷವಾಯಿತು. ಆದರೆ ಮನೆ ಮಾಲೀಕನಿಗೆ ಶಿವಲಿ...ಮ್'ರವರನ್ನು ನೋಡಿ ಶಾಕ್ ಆಗಿತ್ತು. ಬೆಳ್ಳಗೆ, ಮೇಲುಜಾತಿಯವನಂತಿದ್ದ ಸಾಫ್ಟ್‌ವೇರ್ ಇಂಜಿನಿಯರ್ ಇಂತಹ ಕಪ್ಪಗಿನ, ಕೆಳಜಾತಿಯವನಿಗೆ ಮನೆ ನೋಡಲು ಬಂದಿದ್ದು ಅವನಿಗೆ ಮೋಸ ಬಗೆದಂತೆ ಅನ್ನಿಸಿರಬೇಕು.



"ಇನ್ನು ಅರ್ಧ ಗಂಟೆ ಬಿಟ್ಟು ಬನ್ನಿ" ಎಂದು ಹೇಳಿ ಇಬ್ಬರನ್ನೂ ಹೊರಕಳುಹಿಸಿದ. ಅರ್ಧ ಗಂಟೆಯ ನಂತರ ವಾಪಸ್ಸು ಬಂದುನೋಡಿದರೆ ಮನೆ ಬಾಗಿಲಿಗೆ ಬೀಗ ಬಿದ್ದಿತ್ತು. ಅಲ್ಲೇ ಒಂದು ಗಂಟೆ ಕಾದರೂ ಮನೆ ಮಾಲೀಕನ ಪತ್ತೆ ಇಲ್ಲ, ಶಿವಲಿಂಗಮ್‌ರವರಿಗೆ ಅರ್ಥವಾಯಿತು. ತನ್ನ ಮೈಬಣ್ಣ ನೋಡುತ್ತಿದ್ದಂತೆ ಮನೆ ಮಾಲೀಕ ಮನೆ ನೀಡಬಾರದೆಂದು ನಿರ್ಧರಿಸಿದ್ದನೆಂದು. ಅಷ್ಟೊತ್ತಿಗೆ ಅಲ್ಲಿಗೆ ಬಂದ ಬ್ರೋಕರ್ ಮಾಲೀಕನಿಂದ ಒಂದು ಸಂದೇಶವನ್ನು ತಂದಿದ್ದ. "ಲಿಂಗಾಯತರು ಮತ್ತು ಬ್ರಾಹ್ಮಣರ ಹೊರತಾಗಿ ಬೇರೆಯವರಿಗೆ ಮನೆ ಬಾಡಿಗೆ ನೀಡುವುದಿಲ್ಲವಂತೆ. ನೀವ್ಯಾಕೆ ಕಾಯುತ್ತಿರಿ? ಬೇರೆ ಕಡೆ ಹುಡುಕಿ" ಎಂದ ಬ್ರೋಕರ್.

ಇಂತಹದ್ದೇ ನಾಲ್ಕಾರು ಪ್ರಕರಣಗಳು ನಡೆದವು. ಇವತ್ತಿಗೂ ಶಿವಲಿಂಗಮ್ ಬಾಡಿಗೆ ಮನೆಗಾಗಿ ತಮ್ಮ ಹುಡುಕಾಟವನ್ನು ಮುಂದುವರೆಸಿದ್ದಾರೆ. ಯಡಿಯೂರಪ್ಪ ವೈಷ್ಣೋದೇವಿಯ ದರ್ಶನದಿಂದ ವಾಪಸ್ಸು ಬರುವ ಮುನ್ನ ನಮ್ಮ ಆಫೀಸಿಗೆ ಬಂದಿದ್ದ ಶಿವಲಿಂಗಮ್ ಇದನ್ನೆಲ್ಲ ವಿವರಿಸಿ ನಗಲಾರಂಭಿಸಿದರು. "ನನ್ನ ಮೈ ಬಣ್ಣ ಕಪ್ಪಾಗಿರುವುದರಿಂದ, ದಲಿತ ಎಂದು ಸುಲಭವಾಗಿ ಗುರುತಿಸಲು ಸಾಧ್ಯವಾದ್ದರಿಂದ, ಈ ಕಾರಣಕ್ಕೆ ನನಗೆ ಬಾಡಿಗೆ ಮನೆ ಸಿಗುತ್ತಿಲ್ಲವಾದ್ದರಿಂದ ನಾನೇನು ಮಾಡಬೇಕು? ಪ್ಲಾಸ್ಟಿಕ್ ಸರ್ಜರಿನೋ, ಮತ್ತಿನೇನನ್ನೋ ಮಾಡಿಸಿಕೊಂಡು ಕಪ್ಪಾಗಿರುವ ನನ್ನ ಮುಖ ಬೆಳ್ಳಗಾದರೆ, ಅದನ್ನು ನೋಡಿ ನಾನು ಮೇಲ್ಜಾತಿಯವನೆಂದು ನಂಬಿದರೆ, ಅದಕ್ಕೆಂದೇ ನನಗೆ ಬಾಡಿಗೆ ಮನೆ ಸಿಕ್ಕರೆ ಚೆನ್ನಾಗಿರುತ್ತಲ್ಲವಾ? ಆದರೆ ಪ್ಲಾಸ್ಟಿಕ್ ಸರ್ಜರಿಗೆ ಎಲ್ಲಿಂದ ಹಣ ತರಲಿ? ಬೆಳ್ಳಗಾದರೆ ನಾನು ದಲಿತ ಎಂಬುದು ಮಾಯವಾಗುತ್ತದಾ?" ಎಂದು ಅವರು ನಗುತ್ತಲೇ ಹೇಳುತ್ತಿದ್ದರೂ ಅವರ ಅಸಹಾಯಕತೆ ಎದ್ದು ಕಾಣುತ್ತಿತ್ತು. ಅವರ ಪ್ರಶ್ನೆಗಳಿಗೆ ನನ್ನಲ್ಲಿ ಯಾವ ಉತ್ತರವೂ ಇರಲಿಲ್ಲ. ನೆನಪಿಡಿ, ಇದು 2007ನೇ ಇಸವಿಯ ಬೆಂಗಳೂರಿನ ಕತೆ. ಆಧುನಿಕತೆ, ಶಿಕ್ಷಣ, ಸಂಸ್ಕೃತಿ, ನಾಗರಿಕತೆಗಳು ಮೇಳೈಸಿರುವ ಜನರಿರುವ ನಗರ ಎಂದು ಬಿಂಬಿಸಲ್ಪಡುತ್ತಿರುವ ನಗರದ ವಿದ್ಯಮಾನ.

ಇದು ದಲಿತ ಶಿವಲಿಂಗಮ್‌ರವರ ಕತೆಯಾದರೆ, ಅಬ್ದುಲ್ ಖಾದರ್ ಹುಸೇನರದ್ದು ಇನ್ನೊಂದು ಕತೆ. ಪಡುಬಿದರಿಯ ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಹುಸೇನರನ್ನು ಯಾವುದೇ ಸಾಕ್ಷ್ಯಾಧಾರಗಳಿಲ್ಲದಿದ್ದರೂ, ಚೆಡ್ಡಿಗಳ ಒತ್ತಡಕ್ಕೆ ಮಣಿದು ಅಲ್ಲಿನ ಪೊಲೀಸರು ಬಂಧಿಸಿದ್ದರ ಬಗ್ಗೆ ಎರಡು ವಾರಗಳ ಹಿಂದೆ ವರದಿ ಮಾಡಿದ್ದೆವು. ಒಂದು ದಿನದ ನಂತರ ಪೊಲೀಸರು ಹುಸೇನರನ್ನು ಬಿಡುಗಡೆ ಮಾಡಿದ್ದರು. ಅವರು ನಿರಪರಾಧಿ ಎಂದು ಗೊತ್ತಿದ್ದರೂ ಅವರು ಕೆಲಸ ಮಾಡುತ್ತಿದ್ದ ಕಾಲೇಜು ಯಾವುದೇ ಕಾರಣವನ್ನು ನೀಡದೆ ವಜಾ ಮಾಡಿದೆ. ಮೊದಲೇ ಪಡುಬಿದರಿಯಂತಹ ಸಣ್ಣ ಊರಿನಲ್ಲಿ ಪೊಲೀಸರ ಬಂಧನಕ್ಕೊಳಗಾಗಿದ್ದ ಸಂಗತಿ ಜೀವನ ಸಾಗಿಸುವುದನ್ನೇ ಕಷ್ಟವಾಗಿಸುತ್ತದೆ. ಅದರ ಜೊತೆಗೆ ಕೆಲಸ ಕಳೆದುಕೊಳ್ಳುವುದೂ ಸೇರಿದರೆ ಬದುಕೇ ದುಸ್ತರವಾಗುತ್ತದೆ. ಹುಸೇನರಂತಹ ವಿದ್ಯಾವಂತ ಯುವಕರು ಇಂತಹ ಸಮಾಜದಲ್ಲಿ ನೆಮ್ಮದಿಯ ಬದುಕನ್ನು ಸಾಗಿಸುವುದು ಹೇಗೆ?

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಶಿವಲಿಂಗಮ್ ಮತ್ತು ಹುಸೇನ್ ಇಬ್ಬರೂ ಸುಶಿಕ್ಷಿತರು, ಅಧ್ಯಾಪಕರು, ನಮ್ಮ ನಿಮ್ಮೆಲ್ಲರಂತೆ ಮಧ್ಯಮ ವರ್ಗದಿಂದ



ಕಂಡಹಾಗೆ

ಬಂದವರು, ನೆಮ್ಮದಿಯ ಬದುಕಿಗಾಗಿ ಆಶಿಸಿದವರು. ಆದರೆ ಶಿವಲಿಂಗಮ್ ದಲಿತರೆಂದೂ, ಹುಸೇನ್ ಮುಸಲ್ಮಾನರೆಂದೂ ನಮ್ಮ ಸಮಾಜ ಮತ್ತು ವ್ಯವಸ್ಥೆ ಅವರಿಗೆ ಮನೆ ಮತ್ತು ಕೆಲಸದಂತಹ ಮೂಲಭೂತ ಅಗತ್ಯಗಳನ್ನೇ ನಿರಾಕರಿಸುತ್ತದೆಂದರೆ ಏನು ಅರ್ಥ? ಎಲ್ಲರಂತೆ ಈ ದೇಶದ ಪ್ರಜೆಗಳಾದ ಅವರು ಇಲ್ಲಿ ಸ್ವಾಭಿಮಾನದ ಬದುಕನ್ನು ಸಾಗಿಸುವುದಾದರೂ ಹೇಗೆ? ಶಿವಲಿಂಗಮ್ ಮತ್ತು ಹುಸೇನರಂತಹ ಸುಶಿಕ್ಷಿತರಿಗೇ ಹೀಗಾದರೆ ಅನಕ್ಷರಸ್ಥ ಬಡವ, ಅಸಹಾಯಕ ದಲಿತರ ಮತ್ತು ಮುಸ್ಲಿಮರ ಜೀವನ ಇನ್ನೆಂಥ ನರಕವಾಗಿರಬಹುದು?

ದೌರ್ಜನ್ಯದಿಂದಾಗಿ, ಅನ್ಯಾಯಗಳಿಂದಾಗಿ ಎರಡನೆ ದರ್ಜೆಯ ನಾಗರಿಕರಂತಾಗಿರುವ ದಲಿತ ಮತ್ತು ಆದಿವಾಸಿ ಸಮುದಾಯದ ಕೆಲ ಯುವಕರು ತಮ್ಮ ಹಕ್ಕುಗಳಿಗಾಗಿ ಶಸ್ತ್ರಾಸ್ತ್ರಗಳನ್ನು ಹಿಡಿದರೆ ಸಮಾಜ ಮತ್ತು ಪ್ರಭುತ್ವ ಕೆಂಡ ಕಾರುತ್ತದೆ. ಅವರನ್ನು ಮುಗಿಸಲು ಪಣ ತೊಡುತ್ತದೆ. ಇನ್ನು ಈ ದೇಶದ ಮೂರನೇ ದರ್ಜೆಯ ಪ್ರಜೆಗಳಾಗಿರುವ ಮುಸಲ್ಮಾನರ ಕೆಲ ಯುವಕರು ತಮ್ಮ ಸಮುದಾಯದ ಮೇಲೆ ಹಿಂದೂತ್ವವಾದಿಗಳಿಂದ ನಡೆಯುತ್ತಿರುವ ದೌರ್ಜನ್ಯಗಳಿಗೆ ಪ್ರತಿರೋಧವನ್ನು ವ್ಯಕ್ತಪಡಿಸಲು ಬಾಂಬ್‌ಗಳನ್ನು ಸ್ಫೋಟಿಸಿದರೆ ಇಡೀ ದೇಶವೇ ಹೌಹಾರುತ್ತದೆ. ಅವರನ್ನು ಹಿಡಿದು ಗಲ್ಲಿಗೇರಿಸಬೇಕೆಂದು ಚೀರಾಡುತ್ತದೆ.

ಆದರೆ ಅವರನ್ನೆಲ್ಲ ಅಂತಹ ಹಿಂಸಾತ್ಮಕ ಮಾರ್ಗಗಳಿಗೆ ದೂಡುತ್ತಿರುವವರೇ ನಾವು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಯಾವಾಗ? ಹಾಗಾಗದಂತೆ ಮೊದಲು ನಮ್ಮನ್ನು ನಾವೇ ತಿದ್ದುಕೊಳ್ಳುವುದು ಎಂದು?

ಭಾನುವಾರದ ಬೆಳಗ್ಗೆ ಆಫೀಸಿಗೆ ಬಂದು ಸಂಚಿಕೆಯ ತಯಾರಿಯಲ್ಲಿದ್ದಾಗ ಮತ್ತದೇ ಸುದ್ದಿಗಳು ಟಿವಿ ಚಾನೆಲ್‌ಗಳಲ್ಲಿ ಪ್ರಸಾರಗೊಳ್ಳುತ್ತಿದ್ದವು. ಜೆಡಿಎಸ್ ಶಾಸಕರ ಸಭೆ, ಬಿಜೆಪಿ ನಾಯಕರ ಚರ್ಚೆ, ಪರತ್ತು, ಒಪ್ಪು, ಬಿಕ್ಕಟ್ಟು, ಬಿಕ್ಕಟ್ಟಿನ ಶಮನ, ಇತ್ಯಾದಿ. ಇವುಗಳ ನಡುವೆ ಚೆಲುವಾದ ಹುಡುಗ-ಹುಡುಗಿಯರು ಟಿವಿ ಪರದೆಯ ಮೇಲೆ ಪ್ರತ್ಯಕ್ಷರಾಗಿ ಸೋಪು, ಕಾರು, ಲಿಪ್‌ಸ್ಟಿಕ್, ಶಾಂಪೂ ಇತ್ಯಾದಿ ಕೊಳ್ಳುಬಾಕ ವಸ್ತುಗಳ ರೂಪದರ್ಶಿಗಳಾಗಿ ಹಲ್ಲು ಬೀರುತ್ತಿದ್ದರು.

ಒಂದಂತೂ ಸ್ಪಷ್ಟವಾಯಿತು. ರಾಜಕಾರಣಿಗಳ ತಲೆಯಲ್ಲಾಗಲಿ, ಈ ಸುಂದರ ಸುಂದರಿಯರ ಜಗತ್ತಿನಲ್ಲಾಗಲಿ ಶಿವಲಿಂಗಮ್ ಮತ್ತು ಹುಸೇನ್ ತರಹದ ಬಹುಸಂಖ್ಯಾತ ಜನರ ಬಗ್ಗೆ ಕಾಳಜಿ ಇರಲಿಲ್ಲ....

■ ಗೌರಿ ಲಂಕೇಶ್

ಸಂವಾದ ವೇದಿಕೆ

ನಂದಿಗ್ರಾಮ

ಕುರಿತು ಎಡಪಂಥೀಯರ
ನಡುವೆ ಒಂದು ಚರ್ಚೆ

ಭಾಗವಹಿಸುವವರು

ಜಿ.ಎನ್. ನಾಗರಾಜ್
ರಾಜ್ಯ ಕಾರ್ಯದರ್ಶಿ, ಸಿಪಿಐ(ಎಂ)

ಜಿ. ರಾಮಕೃಷ್ಣ
ಚಿಂತಕರು, ಬರಹಗಾರರು, ಸಿಪಿಐ

ಶಿವಸುಂದರ್
ಅಂಕಣಕಾರರು

ಸ್ಥಳ: ಲಂಕೇಶ್ ಕಟ್ಟಡ,
ಬಸವನಗುಡಿ,
ಬೆಂಗಳೂರು
ದಿನಾಂಕ: ಶುಕ್ರವಾರ,
ನವೆಂಬರ್ 23
ಸಮಯ:
ಸಂಜೆ 6.30 ರಿಂದ 8.00 ರ ತನಕ

■ ಎಲ್ಲರೂ ಬನ್ನಿ, ಸ್ನೇಹಿತರನ್ನೂ ಕರೆತನ್ನಿ

ಶ್ರೀನಿವಾಸಗೌಡ ಬಿದ್ದ, ವರ್ತೂರು ಪ್ರಕಾಶ್ ಎದ್ದ

ಕೋಲಾರ

ರಾಜಕಾರಣಿಯಾದವನೊಬ್ಬ ಬೇರೆ ಏನೇ ತಪ್ಪು ಮಾಡಿದರೂ ಬಚಾಯಿಸಿಕೊಂಡಾನು. ಆದರೆ ನಿದ್ದೆ ಶುರು ಮಾಡಿದರೆ ಕುರ್ಚಿ ಉಳಿಸಿಕೊಳ್ಳುವುದು ಮಾತ್ರ ಬಲುಕಷ್ಟ.


ಅದರಲ್ಲೂ ಕುಂಭಕರ್ಣ ನಿದ್ದೆಗೆ ಹೆಸರಾಗಿರುವ ಕೋಲಾರ ಶಾಸಕ ಶ್ರೀನಿವಾಸಗೌಡರ ವಿಷಯದಲ್ಲಂತೂ ಈ ಭವಿಷ್ಯ ನಿಜವಾಗುವಂತೆ ಕಾಣುತ್ತಿದೆ.

ಗೌಡರ ಪಾರ್ಟಿ ಕಾಂಗ್ರೆಸ್‌ನಿಂದಲೇ ಅವರಿಗೊಬ್ಬ ಛಾಲೆಂಜರ್ ಹುಟ್ಟಿಕೊಂಡಿದ್ದಾನೆ. ಆತ ವರ್ತೂರು ಪ್ರಕಾಶ್!

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮೆಂಬರ್ ಆಗಿರುವ ಈ ವರ್ತೂರ್ ಪ್ರಕಾಶ್ ಹೇಳಿಕೇಳಿ ರಿಯಲ್ ಎಸ್ಟೇಟ್ ಕುಳ. ಕೋಟಿಗಟ್ಟಲೆ ಹಣ ರಾಶಿ ಬಿದ್ದಿದೆ. ಹೆಸರು-ಅಧಿಕಾರದ ಮೇಲೆ ಕಣ್ಣೂ ಇದೆ. ಅದಕ್ಕೆ ತಕ್ಕಂತೆ ಕೋಲಾರ ಶಾಸಕ ಶ್ರೀನಿವಾಸಗೌಡರ ಬಗ್ಗೆ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಅಸಹನೆಯೂ ಬೆಳೆಯುತ್ತಿದೆ. ಇದನ್ನು ತನ್ನ ಇಮೇಜ್ ಬೆಳೆಸಿಕೊಳ್ಳಲು ಪ್ರಕಾಶ್ ಚೆನ್ನಾಗೇ ಬಳಸಿಕೊಳ್ಳುತ್ತಿದ್ದಾನೆ.

ಈ ವರ್ತೂರು ಪ್ರಕಾಶ್ ಮುಂದಿನ ಎಲೆಕ್ಷನ್ ಹೊತ್ತಿಗೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡು ಕೋಲಾರ ವಿಧಾನಸಭೆಗೆ ಸ್ಪರ್ಧಿಸಲು ಈಗಿನಿಂದಲೇ ತಾಲೀಮು ಶುರುವಿಟ್ಟುಕೊಂಡಿದ್ದಾನೆ. ಹಾಲಿ ರಾಜ್ಯ ಕಾಂಗ್ರೆಸ್ ಲೀಡರುಗಳ ಪೈಕಿ ಸಿದ್ಧರಾಮಯ್ಯನವರ ಸಾಲಿಡ್ ಸಪೋರ್ಟ್ ಈ ಪ್ರಕಾಶ್‌ಗಿದೆ. ಕುರುಬ ಜನಾಂಗದ ಪ್ರಕಾಶ್ ಜಾತ್ಯತೀತ ದಳದಿಂದ ಗೌಡರು ಸಿದ್ಧರಾಮಯ್ಯನವರನ್ನು ಹೊರಹಾಕಿದಾಗ ಸಿದ್ದು ಪರ ನಿಂತಿದ್ದ. ಚಾಮುಂಡೇಶ್ವರಿ ಬೈ ಎಲೆಕ್ಷನ್‌ನಲ್ಲಿ ಸಿದ್ದು ಗೆದ್ದಾಗ ಅವರಿಗೆ ಭಾರಿ ಸನ್ಮಾನ ಏರ್ಪಡಿಸಿ ತಾನೂ ಮಿಂಚಿದ್ದ. ಮುಖ್ಯವಾಗಿ ಸಂಜೆ ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹೀರಾತು ಕೊಟ್ಟು ತಮ್ಮನ್ನೇ ಲೀಡರ್‌ಗಳಾಗಿ ಪ್ರೊಜೆಕ್ಟ್ ಮಾಡಿಕೊಳ್ಳುವ ಜಾಯಮಾನ ಕೆಲವರಿಗಿದೆ. ಪ್ರಕಾಶ್ ಕೂಡ ಅದಕ್ಕೆ ಹೊರತಲ್ಲ. ಇವತ್ತು ಕೋಲಾರ ಸುತ್ತಾಮುತ್ತ ವರ್ತೂರು ಪ್ರಕಾಶ್ ಬಗ್ಗೆ ಜನ ಮಾತಾಡಲು


ವರ್ತೂರು ಪ್ರಕಾಶ್


ಶ್ರೀನಿವಾಸಗೌಡ

ಶುರು ಮಾಡಿರುವುದು ಬರೀ ಜಾತಿ, ದುಡ್ಡು ಎಂಬ ಕಾರಣಗಳಿಗೆ ಮಾತ್ರವಲ್ಲ, ಬದಲಾಗಿ ಟೌನಿನ ಇಡೀ ರಾಜಕೀಯವೇ ಜಡಗೊಂಡಿದೆ. ಹಾಲಿ ಶಾಸಕ ಶ್ರೀನಿವಾಸಗೌಡ ಕಳೆದ 15 ವರ್ಷಗಳಿಂದ ಶಾಸಕರಾಗಿ ಕಿಸಿದಿದ್ದೇನು ಅಂತ ಇವತ್ತು ಕಾಂಗ್ರೆಸ್ ಜನರೇ ಮೂಗು ಮುರಿಯುವ ಸ್ಥಿತಿ ಇದೆ. ಕಂಟ್ರಾಕ್ಟರ್ ಕೃಷ್ಣಾರೆಡ್ಡಿ, ಛತ್ರಕೋನಹಳ್ಳಿ ಮುನೇಗೌಡ, ಮಾಜಿ ಜಿಲ್ಲಾ ಪಂಚಾಯಿತಿ ಮೆಂಬರ್ ಹೊಳೂರಿನ ವೆಂಕಟರೆಡ್ಡಿ, ಜಿಲ್ಲಾ ಹಾಲು ಉತ್ಪಾದಕರ ಸಂಘದ ನಿರ್ದೇಶಕ ಅಣ್ಣಿಹಳ್ಳಿ ಕೃಷ್ಣಪ್ಪ ಮುಂತಾದ ಕೆಲವೇ ಕೆಲವರ ಗುಂಪನ್ನು ಸಾಕುತ್ತಿರುವ ಶ್ರೀನಿವಾಸಗೌಡ ತನ್ನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದನ್ನು ಗಮನಿಸುತ್ತಿರುವಂತೆ ಕಾಣುತ್ತಿಲ್ಲ.

ಇತ್ತೀಚೆಗೆ ನಡೆದ ನಗರಸಭಾ ಚುನಾವಣೆಗಳೇ ಇದಕ್ಕೆ ಸಾಕ್ಷಿ. ಇದ್ದ 35 ಸ್ಥಾನಗಳಲ್ಲಿ ಈಗ ಕಾಂಗ್ರೆಸ್ 22 ಸ್ಥಾನ ಗೆದ್ದಿದೆಯಾದರೂ ಅವರಲ್ಲಿ ಪ್ರಕಾಶ್ ಬೆಂಬಲಿಗರ ಸಂಖ್ಯೆಯೇ 15 ರಷ್ಟಿದೆ. ಯಾರೇ ಎದುರಿಗೆ ಸಿಕ್ಕಿ ಸಹಾಯ ಕೇಳಿದರೂ ಐದು-ಹತ್ತು ಸಾವಿರ ಕೊಟ್ಟು ಲೀಡರ್ ಎನಿಸಿಕೊಂಡಿದ್ದ ಪ್ರಕಾಶ್ ಈ ಎಲೆಕ್ಷನ್ ಬರುವಷ್ಟರಲ್ಲೇ ತನ್ನದೇ ಒಂದು ಹಿಂಬಾಲಕರ ಪಡೆ ರೂಪಿಸಿಕೊಂಡು ಬಿಟ್ಟಿದ್ದ. ಆಗ ಸ್ವಲ್ಪ ಗಾಬರಿಯಾದ ಶ್ರೀನಿವಾಸಗೌಡರು ಪ್ರಕಾಶ್ ಬೆಂಬಲಿಗರಿಗೆ ಟಿಕೆಟ್ ತಪ್ಪಿಸಿದರು. ಆದರೂ ಕೆಲವರಿಗೆ ಟಿಕೆಟ್ ಸಿಕ್ಕಿ ಅವರು ಗೆದ್ದು ಬಿಟ್ಟರು. ಈ ಮಧ್ಯೆ, ಯಾರ್‍ಯಾರಿಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲವೊ ಅವರಲ್ಲಿ ಗೆಲ್ಲಬಲ್ಲವರನ್ನು ಹುಡುಕಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಗಳನ್ನಾಗಿಸಿ ಪ್ರಕಾಶ್ ಕಣಕ್ಕಿಳಿಸಿದ್ದ. ಸೂರ್ಯ, ತಕ್ಕಡಿ, ಬಾಣ ಇತ್ಯಾದಿ ಚಿತ್ರ ವಿಚಿತ್ರ ಸಿಂಬಲ್ ಪಡೆದು ಪ್ರಕಾಶನ ದುಡ್ಡಿನ ಬಲದಿಂದ ಬಡಿದಾಡಿದ ಈ ಅಭ್ಯರ್ಥಿಗಳಲ್ಲಿ ಹತ್ತು ಜನ ಗೆದ್ದೇಬಿಟ್ಟರು.

ಇದನ್ನು ನೋಡಿ ಶ್ರೀನಿವಾಸಗೌಡರ ಸ್ಥಿತಿ ಏನಾಗಿರಬೇಡ ಊಹಿಸಿ! ಕೋಲಾರದಲ್ಲೀಗ ತನ್ನ ದುಡ್ಡಿನ ದಂಡಯಾತ್ರೆ ಮುಂದುವರೆಸಿರುವ ಪ್ರಕಾಶ್ ಬಗ್ಗೆ ದಂತಕತೆಗಳೇ ಹುಟ್ಟಿಕೊಂಡಿವೆ. ಹಣಕ್ಕಾಗಿ ಯಾರೇ ಹೋದರೂ ಪ್ರಕಾಶ್ ಇಲ್ಲಾ ಅನ್ನಲ್ಲವಂತೆ.

ದೇವಸ್ಥಾನ ಕಟ್ಟಿಸುತ್ತೇನೆ ಅಂತ ಬಂದವರಿಗೆ ಹತ್ತರಿಂದ ಇಪ್ಪತ್ತು ಸಾವಿರ, ಮದುವೆ ಅಂದರೆ 5 ಸಾವಿರ, ತಿಥಿಗೆ 2 ಸಾವಿರ, ತಳ್ಳೋಗಾಡಿ ಬೇಕು ಅಂತ ಕೇಳಿದವರಿಗೆ 5 ಸಾವಿರ ಹೀಗೆ ಪ್ರಕಾಶ್ ಯಾವ ಬಾಬ್ತಿಗೆ ಎಷ್ಟು ದುಡ್ಡು ಕೊಡ್ತಾನೆ ಅಂತ ಜನರಿಗೂ ಬಾಯಿಪಾಠ ಆಗಿಹೋಗಿದೆ.

ಈ ಪ್ರಕಾಶ್ ಎಂಥ ಚಾಲಾಕಿ ಅಂದರೆ ಬರೀ ದಾನಧರ್ಮ ಮಾಡಿಕೊಂಡಿದ್ದರೆ ಸಾಲದು ಅಂತ ಬೇರೆಬೇರೆ ಪಾರ್ಟಿಗಳಲ್ಲಿರುವ ಪ್ರತಿ ಲೀಡರ್‌ಗಳನ್ನು ತನ್ನ ಕಡೆಗೆ ಅಂದರೆ ಕಾಂಗ್ರೆಸ್ ಪಾರ್ಟಿಗೆ ತಂದು ತುಂಬುತ್ತಿದ್ದಾನೆ. ಬಹುತೇಕ ಪೇಮೆಂಟ್ ಗಿರಾಕಿಗಳಿವರು. ಕೋಲಾರ ಕಾಂಗ್ರೆಸ್ ಎಷ್ಟು ಜಡವಾಗಿದೆಯೆಂದರೆ ಅಲ್ಲಿನ ಪ್ರಮುಖ ಮುಸ್ಲಿಂ ಲೀಡರ್‌ಗಳೆಲ್ಲಾ ಹೋಗಿ ಬಿಜೆಪಿ ಸೇರಿದ್ದಾರೆಂದರೆ ಮಿಕ್ಕಿದ್ದನ್ನು ನೀವೇ ಕಲ್ಪಿಸಿಕೊಳ್ಳಬಹುದು.

ಅಂತವರಿಗೂ ಈಗ ಪ್ರಕಾಶ್ ಗಾಳ ಹಾಕಿದ್ದಾನೆ! ಜಾವೇದ್, ಅಸ್ಲಾಂ, ಚಾಂದ್‌ಪಾಶ, ಬೆಗ್ಲಿ ಅಕ್ರಂ ಮುಂತಾದವರು ಈಗ ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಮರಳಿ ಬಂದಿದ್ದಾರೆ. ಕರೆಕ್ಟಾಗಿ ಹೇಳಬೇಕೆಂದರೆ ಕಾಂಗ್ರೆಸ್ ಶಾಸಕ ಶ್ರೀನಿವಾಸಗೌಡರನ್ನು ಬಿಟ್ಟರೆ ಮಿಕ್ಕವರೆಲ್ಲಾ ಕಾಂಗ್ರೆಸ್ ಪಾರ್ಟಿ ಸೇರಿದ್ದಾರೆ ಅಂತ ಒಂದು ಜೋಕ್ ಈಗ ಕೋಲಾರದಲ್ಲಿದೆ.

ಕೇಳಿಸಿತಾ ಶ್ರೀನಿವಾಸಗೌಡರೆ?

-ವರದಿಗಾರ

ಯಡ್ಡಿ ಯಡವಟ್ಟುಗಳು

ಮುಖ್ಯಮಂತ್ರಿಯಾದದ್ದೇ ತಡ, ಯಡ್ಡಿ ಆತುರಗೆಟ್ಟ ಆಂಜನೇಯನಂತೆ ಒಂದೆರಡು ಯಡವಟ್ಟು ಮಾಡಿಕೊಂಡು, ಜೆಡಿಎಸ್‌ನಿಂದ ಇಕ್ಕಿಸಿಕೊಂಡು, "ಆಯ್ತು ಇನ್ನು ಮುಂದೆ ನೀವು ಹೇಳಿದಂತೆಯೇ ಕೇಳುತ್ತೇನೆ. ನಾನಂತೂ ಸ್ವತಂತ್ರವಾಗಿ ಏನನ್ನು ಮಾಡಲು ಹೋಗುವುದಿಲ್ಲ" ಎಂಬರ್ಥದ ಮಾತನ್ನಾಡಿ, ಅಪ್ಪ ಮಕ್ಕಳ ಸಿಟ್ಟನ್ನು ತಾತ್ಕಾಲಿಕವಾಗಿ ಶಮನ ಮಾಡಿದ್ದಾರೆ.

ಪದ್ಮನಾಭನಗರದಲ್ಲೊಬ್ಬ ರಾಜಕಾರಣ ವ್ಯಸನಿ ಇದ್ದಾನೆ, ಆತ ತನ್ನ ಅಂಗೈಯಲ್ಲಿ ಇಡೀ ಕರ್ನಾಟಕದ 224 ಕ್ಷೇತ್ರಗಳನ್ನು ಇಟ್ಟುಕೊಂಡು ನೋಡುತ್ತಿದ್ದಾನೆ, ತನ್ನ ಕುಟುಂಬದ ಗುಲಾಮರಂತಿರುವ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ಕೂರಿಸಿ ಅವರೆಲ್ಲಾ ಸರಕಾರದ ಬೇಹುಗಾರಿಕೆ ಇಲಾಖೆಯಂತೆ ತಮ್ಮ ಮಾಹಿತಿಗಳನ್ನು ಸಂಗ್ರಹಿಸಿ ಕಾಲಕಾಲಕ್ಕೆ ರವಾನಿಸುತ್ತಾರೆ ಎಂಬುದನ್ನು ಮುಖ್ಯಮಂತ್ರಿಯಾದ ಕೂಡಲೇ ಯಡ್ಡಿ ಮರೆತು ಬಿಟ್ಟಿದ್ದರು. ಯಾವಾಗ ವಿಶ್ವಾಸಮತಕ್ಕೂ ಮುನ್ನ ಕುಮಾರಣ್ಣ ಗರಂ ಆದರೊ, ಆ ಕೂಡಲೇ ತನ್ನ ತಪ್ಪು ನಿರ್ಧಾರಗಳನ್ನು ತಿದ್ದಿಕೊಂಡು "ಬಹುಮತ ಸಾಬೀತಿನವರೆಗೂ ಅಲ್ಲಿ ಇಲ್ಲಿ ದೇವಸ್ಥಾನ ಸುತ್ತಿಕೊಂಡು ಕಾಲ ಹಾಕುತ್ತೇನೆ" ಎಂದು ಹೇಳಿ ಪ್ರಜ್ಞಾವಂತ ಮತದಾರರಲ್ಲಿ ಕನಿಕರ ಉಕ್ಕಿಸಿದರು.


ಡಿಸಿ ಅನಿಲ್‌ಕುಮಾರ್

ಯಡಿಯೂರಪ್ಪ ದೇವಸ್ಥಾನ ಸುತ್ತುವ ಬದಲು ಶಿಕಾರಿಪುರಕ್ಕೆ ಹೋಗಿ ಬರುತ್ತೇನೆ ಎನ್ನಬಹುದಿತ್ತು, ಅಲ್ಲಿ ಯಡ್ಡಿಯನ್ನು ಮುಖ್ಯಮಂತ್ರಿ ಮಾಡಿದ್ದ ಮತದಾರರಿದ್ದರು. ಹೋಗಲಿ, ರೈತರ ಹೆಸರಿನಲ್ಲೂ ಪ್ರಮಾಣವಚನ ತೆಗೆದುಕೊಂಡ ಯಡಿಯೂರಪ್ಪ ಈಗಾಗಲೇ ನಿಂತಿರುವ ಸಕ್ಕರೆ ಕಾರ್ಖಾನೆಗಳಿರುವ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ರೈತರು ಮತ್ತು ಕಾರ್ಮಿಕರಿಗೆ ಸಾಂತ್ವನ ಹೇಳಬಹುದಿತ್ತು, ಆದರೆ ಮೊದಲಿನಿಂದಲೂ ಈ ಜನಕ್ಕೆ ಏನು ರೋಗಬಡಿದಿದೆಯೋ ಏನೋ, ಮಠಮಾನ್ಯಗಳು, ಮಂತ್ರವಾದಿಗಳನ್ನು ಹುಡುಕುತ್ತ ತಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ.


ಈಗಾಗಲೇ ಯಡ್ಡಿ ಲೆಕ್ಕದಲ್ಲಿದ್ದ ಒಂದೂವರೆ ತಿಂಗಳೇ ಗೋತಾ ಹೊಡೆದಿದೆ. ಅದಕ್ಕೆ ಏನೋ ಮುಖ್ಯಮಂತ್ರಿಯಾದ ಕೂಡಲೇ ತಮ್ಮ ಪ್ರಧಾನಕಾರ್ಯದರ್ಶಿಯಾಗಿ ವಿ.ಪಿ. ಬಳಿಗಾರ್, ಇಂಟಲಿಜೆನ್ಸ್ ಎಡಿಜಿಪಿಯಾಗಿ ಶಂಕರಬಿದರಿಯನ್ನು ನೇಮಿಸಿಕೊಂಡರು. ಫೈನಾನ್ಸ್ ಮಿನಿಸ್ಟರಾಗಿದ್ದಾಗ ಅಷ್ಟೇನು ಹಣಕಾಸಿನ ವ್ಯವಹಾರಿಕ ಬುದ್ಧಿವಂತಿಕೆಯಿಲ್ಲದ ಯಡ್ಡಿಗೆ ಬಜೆಟ್ ಮಂಡನೆ ಸಮಯದಲ್ಲಿ ಸೂಕ್ತ ಸಲಹೆ ಕೊಟ್ಟವರು ಇದೇ ಬಳಿಗಾರ್. ದಕ್ಷ ಅಧಿಕಾರಿಯಾದ ಬಳಿಗಾರರಿಗೆ ಅವಕಾಶ ನೀಡಿದರೆ ಎಂತಹ ಕೆಟ್ಟ ಸರಕಾರಕ್ಕೂ ಒಳ್ಳೇ ಹೆಸರು ತರಬಲ್ಲ ಅಧಿಕಾರಿ. ಅಂತಹವರು ಯಡ್ಡಿ ಬಗಲಿಗೆ ಬಂದ ಫಲವಾಗಿ ಸಿಎಂ ಕೆಲಸ ಅರ್ಧ ಕಡಿಮೆಯಾಗಿದೆ ಎಂದೇ ಭಾವಿಸಬಹುದು.

ಇನ್ನು ಯಡ್ಡಿಯಂತಹವರಿಗೆ ಇಂಟೆಲಿಜೆನ್ಸ್ ಎಡಿಜಿಪಿಯಾಗಿರುವ ಶಂಕರಬಿದರಿ ಎಂತಹವರೆಂದರೆ ಕರ್ತವ್ಯ ನಿಷ್ಠೆಯಿಂದ ಯದ್ವಾತದ್ವ ಕೆಲಸ ಮಾಡುವ ಅಧಿಕಾರಿ. ಕಳ್ಳನನ್ನು ಹಿಡಿದು ತಾ ಎಂದರೆ, ಆತನ ಹೆಂಡತಿ ಮಕ್ಕಳನ್ನು ತಂದು ಗೋಳು ಹುಯ್ದುಕೊಳ್ಳುವಂತಹ ದಕ್ಷ ಅಧಿಕಾರಿ!

ಇವರನ್ನೆಲ್ಲಾ ಆಯಕಟ್ಟಿನ ಜಾಗಕ್ಕೆ ತಂದು ಕೂರಿಸಿಕೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡ ಅಪ್ಪ-ಮಕ್ಕಳು ಯಡ್ಡಿಗೊಂದು ಬ್ರೇಕ್ ಹಾಕಿದ್ದಾರೆ. ಹಾಗೆ ನೋಡಿದರೆ ಬಹುಶಃ ಬರುವ ದಿನಗಳಲ್ಲಿ ಯಡ್ಡಿ ಮುಖ್ಯಮಂತ್ರಿಯಾಗಿದ್ದರೂ ಉಪಮುಖ್ಯಮಂತ್ರಿಯಂತೆಯೇ ಕೆಲಸ ನಿರ್ವಹಿಸುತ್ತಾರೆನಿಸುತ್ತದೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಯಡ್ಡಿಯನ್ನು ಕೇಳಿ ಯಾವ ಅಧಿಕಾರಿಯನ್ನು ವರ್ಗ ಮಾಡುತ್ತಿರಲಿಲ್ಲ, ಆಗ ಸದಾನಂದಗೌಡ ಮುಖದಲ್ಲಿ ಬೇಸರ ಹೊತ್ತು ಹಲ್ಲಿನಲ್ಲಿ ನಗುತ್ತ "ಇದರಿಂದ ನಮ್ಮ ಮನಸ್ಸಿಗೆ ನೋವಾಗಿದೆ. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬಹುದಿತ್ತಲ್ಲಾ" ಎಂದು ಬರೋಬ್ಬರಿ ಇಪ್ಪತ್ತು ತಿಂಗಳು ಗೋಳುಗರೆದಿದ್ದರು. ಆ ಗೋಳು ಇನ್ನು ಮುಂದುವರೆಯುವ ಎಲ್ಲಾ ಸೂಚನೆಗಳು ಈಗಾಗಲೇ ಗೋಚರವಾಗಿದೆ.

ಯಡ್ಡಿ ಮಾಡಿದ ಇನ್ನೊಂದು ಯಡವಟ್ಟೇನೆಂದರೆ ಶಿವಮೊಗ್ಗದಲ್ಲಿದ್ದ ದಕ್ಷ ಮತ್ತು ಪ್ರಾಮಾಣಿಕ ಜಿಲ್ಲಾಧಿಕಾರಿ ಅನಿಲ್‌ಕುಮಾರರನ್ನು ವರ್ಗಾ ಮಾಡಿ ಆ ಜಾಗಕ್ಕೆ ಮೈಸೂರಿನಿಂದ ಬಿಲ್ಡಿಂಗ್ ಭಂಜಕ ಮಣಿವಣ್ಣನ್‌ರನ್ನು ಶಿವಮೊಗ್ಗಕ್ಕೆ ಹಾಕಿಸಿಕೊಂಡಿದ್ದು.

ಆಶ್ಚರ್ಯವೆಂದರೆ ಈ ಇಬ್ಬರು ಅಧಿಕಾರಿಗಳ ಪರವಾಗಿ ಸಾರ್ವಜನಿಕರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಅಧಿಕಾರಿಗಳನ್ನು ಯಾವಾಗಲೂ ಒಂದಿಷ್ಟು ಗುಮಾನಿಯಿಂದ ನೋಡುವ ಕಡಿದಾಳು ಶಾಮಣ್ಣನವರೂ ಶಿವಮೊಗ್ಗದ ಡಿಸಿ ಅನಿಲ್‌ಕುಮಾರ್ ಪರವಾಗಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದರೆಂದರೆ, ಆ ಅಧಿಕಾರಿಯ ಕಾರ್ಯವೈಖರಿ ಇನ್ನುಳಿದವರಿಗೆ ಮಾದರಿಯಾಗುವಂತದ್ದು. ಯಾವುದೇ ರೀತಿಯ ಪ್ರಚಾರ ಬಯಸದೆ ತಮ್ಮ ಕೆಲಸವನ್ನು ಕಾನೂನುಬದ್ಧವಾಗಿ ತಣ್ಣಗೆ ಮಾಡಿಕೊಂಡು ಹೋಗುವ ಅನಿಲ್‌ಕುಮಾರ್ ಈ ಪ್ರಕ್ಷುಬ್ಧ ಜಿಲ್ಲೆಯನ್ನು ನೆಮ್ಮದಿಯಾಗಿಟ್ಟಿದ್ದ ಅಧಿಕಾರಿ. ಇವರ ಆಡಳಿತಾವಧಿಯಲ್ಲಿ ಮೂವರು ಮಂತ್ರಿಗಳಿದ್ದರು. ಅವರೆಲ್ಲರಿಂದ ಉದ್ಭವಿಸುವ ಒತ್ತಡಗಳು, ಸಂಸದ ಬಂಗಾರಪ್ಪನ ಸಲಹೆ ಸೂಚನೆಗಳು, ಇವನ್ನೆಲ್ಲಾ ನಿಭಾಯಿಸುವುದರ ಜೊತೆಗೆ 73ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜನ ಮೆಚ್ಚುವಂತೆ ನಡೆಸಿ ಶಿವಮೊಗ್ಗಕ್ಕೆ ಕೀರ್ತಿ


ಮಣಿವಣ್ಣನ್

ತಂದಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ, ವಿಶ್ವಹಿಂದೂಗಳ ಗಲಭೆಯ ನಡುವೆಯೂ ಗಣಪತಿಯನ್ನು ಸದ್ದಿಲ್ಲದೆ ತುಂಗಾನದಿಯಲ್ಲಿ ಮುಳುಗಿಸಿದ್ದರು. ಹಾಗೆಯೇ ಅತಿವೃಷ್ಟಿಯಿಂದಾದ ಅನಾಹುತಗಳನ್ನು ಕರಾರುವಾಕ್ಕಾಗಿ ಗುರುತಿಸಿ ಜನರ ಕಷ್ಟಗಳಿಗೆ ಸ್ಪಂದಿಸಿದ್ದರು. ವಿಮಾನ ನಿಲ್ದಾಣಕ್ಕಾಗಿ ವಶಪಡಿಸಿಕೊಂಡ ಭೂಮಿಯ ಮಾಲೀಕರಿಗೆ ತ್ವರಿತವಾಗಿ ಪರಿಹಾರ ಹಣ ತಲುಪುವಂತೆ ಅನಿಲ್‌ಕುಮಾರ್ ಶ್ರಮಿಸಿದ್ದರು.

ಈ ಜಿಲ್ಲೆ ಕಂಡ ದಕ್ಷ ಅಧಿಕಾರಿಗಳ ಪೈಕಿ ಜಾಮದಾರ್ ನಂತರ ಅನಿಲ್‌ಕುಮಾರ್‌ರವರೇ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಅಧಿಕಾರಿಯ ವರ್ಗಾವಣೆ ಸುದ್ದಿ ಕೇಳಿದ ಕೂಡಲೇ ಪಕ್ಷಾತೀತವಾಗಿ ಪ್ರತಿಭಟಿಸಿದ ಜನ ಜಿಲ್ಲಾಧಿಕಾರಿಯನ್ನು ಉಳಿಸಿಕೊಳ್ಳುವಲ್ಲಿ ತಾತ್ಕಾಲಿಕವಾಗಿಯಾದರೂ ಯಶಸ್ವಿಯಾಗಿದ್ದಾರೆ. ಅನಿಲ್‌ಕುಮಾರ್ ಮತ್ತು ಮಣಿವಣ್ಣನ್ ತರಹದ ಅಧಿಕಾರಿಗಳನ್ನು ತನಗೆ ಅಧಿಕಾರ ಸಿಕ್ಕ ಕೂಡಲೇ ವರ್ಗ ಮಾಡಿರುವ ಎಡೂರಪ್ಪನಿಗೆ ತಾನೆಷ್ಟು ದಿನ ಅಧಿಕಾರದಲ್ಲಿ ಇರಬಲ್ಲೆ ಎಂಬುದೇ ಖಚಿತವಾಗಿ ಗೊತ್ತಿಲ್ಲದಿರುವುದು ಒಂದು ವಿಶೇಷ!

ಅನಿಲ್‌ಕುಮಾರ್ ಜಾಗಕ್ಕೆ ಬರಲಿದ್ದ ಮಣಿವಣ್ಣನ್ ವರ್ಗಾವಣೆಗೂ ತಾತ್ಕಾಲಿಕವಾಗಿ ತಡೆ ನೀಡಲಾಗಿದೆ. ಈ ಮಣಿವಣ್ಣನ್ ಕಂಡರಂತೂ ಮಣ್ಣಿನ ಗೋಡೆಗಳು ನಡುಗಿ ಬೀಳುತ್ತವೆ. ಜೆಸಿಬಿ ಯಂತ್ರದಂತೆ ಕಾಣುವ ಮಣಿವಣ್ಣನ್ ಅಕ್ರಮ ಕಟ್ಟಡ ಮತ್ತು ಅಕ್ರಮ ಭೂಮಿ ಪತ್ತೆ ಹಚ್ಚಿ ಲಗ್ಗೆಯಿಡುವ ಅಧಿಕಾರಿ. ಆ ಕಾರಣಕ್ಕೆ ಮೈಸೂರಿನ ಭೂಕಳ್ಳರು ಬೆಚ್ಚಿಬಿದ್ದಿದ್ದರು. ಸದ್ಯಕ್ಕೆ ಶಿವಮೊಗ್ಗದ ರಾಜಕಾರಣಿಗಳು ತಮ್ಮ ಭೂಮಿಯನ್ನು ಸಕ್ರಮಗೊಳಿಸಿಕೊಂಡು ರಸ್ತೆ ಬದಿಯಿಂದ ದೂರವೇ ತಮ್ಮ ಕಟ್ಟಡಗಳನ್ನು ಕಟ್ಟಿಕೊಂಡಿರುವುದರಿಂದ ಮಣಿವಣ್ಣನ್‌ರಿಂದ ತಮಗೇನೂ ತೊಂದರೆಯಿಲ್ಲವೆಂದು ಭಾವಿಸಿರುವಂತಿದೆ.

ಅದೆಲ್ಲ ಏನೇ ಇರಲಿ, ಇಂದು ನಾಳೆ ಮಣಿವಣ್ಣನ್ ಬಂದೇ ಬರುತ್ತಾರೆಂದು ಶಿವಮೊಗ್ಗೆಯ ಬಿ.ಎಚ್. ರಸ್ತೆ ಕಾಯತೊಡಗಿದೆ.

-ವರದಿಗಾರ




■ ಬಿಜೆಪಿಗೆ ಬಲಿಯಾದ ಮಕ್ಕಳ ಗ್ರೌಂಡು

ಪಾರ್ಟಿ ಕಚೇರಿಗಾಗಿ ಮಕ್ಕಳ ಆಟದ ಮೈದಾನ ಗುಳುಂ

ಪಾಲಿಕೆ ಆಸ್ತಿ ದೋಚಿದ ಬಿಜೆಪಿ



■ ಮಲ್ಲೇಶ್ವರದ ಬಾಬುರಾವ್ ದೇಶಪಾಂಡೆ ಸ್ಮಾರಕಭವನ



■ ಮೈದಾನದ ನಡುವಿದ್ದ ಪಾಲಿಕೆ ಸ್ವತ್ತು!

ಯಾರೋ ರೌಡಿಯೊಬ್ಬ ಅಥವಾ ನೆಲಗಳ್ಳನೊಬ್ಬ ಸರ್ಕಾರಿ ಭೂಮಿ ಕದ್ದರೆ ಅದು ಕ್ರಿಮಿನಲ್ ಕೇಸಾಗುತ್ತದೆ. ಬಿಜೆಪಿಯ ಕಟ್ಟಾ ನಾಯ್ಡು ಮಂತ್ರಿಯಾಗಿದ್ದಾಗಲೇ ಆತನ ಮಗ ಜಗದೀಶನ ವಿರುದ್ಧ ಕಂದಾಯ ಅಧಿಕಾರಿಗಳು ಸರ್ಕಾರಿ ಭೂಮಿ ಕದ್ದ ಆರೋಪದ ಮೇಲೆ ಪೊಲೀಸರಿಗೆ ದೂರು ಕೊಟ್ಟಿಲ್ಲವೆ?

ಆದರೆ ಒಂದು ರಾಜಕೀಯ ಪಕ್ಷವಾಗಿ ಬಿಜೆಪಿಯೇ ಬೆಂಗಳೂರು ಮಹಾನಗರ ಪಾಲಿಕೆಯ ಭೂಮಿ ದೋಚಬಹುದಾ? ಸಾಕ್ಷಾತ್ ಶ್ರೀರಾಮಚಂದ್ರನ ಗುಣಪಾಲಕರಾದ ಬಿಜೆಪಿ ನಾಯಕರೇ ಸರ್ಕಾರಿ ಭೂಮಿಯನ್ನು ಕದ್ದರೆ ಅದು ಕಾನೂನುಬದ್ಧವಾಗುತ್ತಾ? ಭೂಗಳ್ಳರಿಗೊಂದು ಕಾಯ್ದೆ, ಬಿಜೆಪಿಗೊಂದು ಕಾಯ್ದೆ ನ್ಯಾಯವಾ?

ತಮ್ಮ ಮಕ್ಕಳ ಆಟದ ಮೈದಾನದ ಉಳಿವಿಗಾಗಿ ಇವತ್ತಿಗೂ ಬೀದಿಗಿಳಿದು ಪ್ರತಿಭಟಿಸುತ್ತಿರುವ ಮಲ್ಲೇಶ್ವರದ ಜನಕ್ಕಿದು ಅರ್ಥವಾಗದ ಪ್ರಶ್ನೆಯೆ!

ಮಲ್ಲೇಶ್ವರದ ದೇವಸ್ಥಾನದ ಬೀದಿಯ ಬೃಹತ್ ಪಾಲಿಕೆ ನಿವೇಶನವೊಂದನ್ನು ರಾಜ್ಯ ಬಿಜೆಪಿಯ ಅಧ್ಯಕ್ಷ ಸದಾನಂದ ಗೌಡ, ಭೂಕಂಟಕ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮುಂತಾದವರೆಲ್ಲ ಸೇರಿ ಪಕ್ಷದ ಕಚೇರಿಯ ನೆಪದಲ್ಲಿ ದೋಚಿದ್ದಾರೆ. ಕಾನೂನಿನ ಮರೆಯಲ್ಲೇ ನಡೆದ ಈ ದರೋಡೆಗೆ ಮೊನ್ನೆಯ ತನಕ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿಯೂ ಕೈಜೋಡಿಸಿದ್ದಾರೆ!

ಕುಮಾರಸ್ವಾಮಿ ಮುಖ್ಯಮಂತ್ರಿಗಿರಿಯ ಕೊನೆದಿನಗಳ ತರಾತುರಿಯಲ್ಲೇ ನಡೆದ ಈ ಕರಾಮತ್ತಿಗೆ ಬಲಿಯಾಗಿದ್ದು ಮಲ್ಲೇಶ್ವರದ ಪಾಲಿಕೆ ಪ್ರೌಢಶಾಲೆಯ ಆಟದ ಮೈದಾನ. ಕೋದಂಡರಾಮಪುರಕ್ಕೆ ಹೊಂದಿಕೊಂಡಂತೆ ಇರುವ ದೇವಸ್ಥಾನದ ರಸ್ತೆಯನ್ನು ಅಲ್ಲಿನ ಜನ ಒಂದನೇ ಮುಖ್ಯರಸ್ತೆಯೆನ್ನುತ್ತಾರೆ. ಎದುರಿಗೇ ಪಾಲಿಕೆಯ ಪ್ರೈಮರಿ ಸ್ಕೂಲು ಮತ್ತು ಪಕ್ಕದಲ್ಲೇ ಪಾಲಿಕೆ ಪ್ರೌಢಶಾಲೆಯೂ ಇದೆ. ಈ ಎರಡೂ ಶಾಲೆಗಳ ಬಡಮಕ್ಕಳಲ್ಲದೇ ಏರಿಯಾದ ಮಕ್ಕಳೆಲ್ಲ ದಿನನಿತ್ಯ ಆಡಿಕೊಂಡಿದ್ದ ಪುಟ್ಟ ಆಟದ ಮೈದಾನ ಪಕ್ಕೇ ಬಿಬಿಎಂಪಿಯ ಆಡಳಿತಾಧಿಕಾರಿ ದಿಲೀಪ್‌ರಾವ್ ರಾಜ್ಯ ಬಿಜೆಪಿಯ ಬಾಯಿಗೆ ಹಾಕಿದ್ದಾರೆ.

ಹಾಗೆಕನ್ನೊದರೆ ಪಾಲಿಕೆಯ ಸೊತ್ತನ್ನು ಚುನಾಯಿತ ಪ್ರತಿನಿಧಿಗಳೇ ಇಲ್ಲದಿರುವಾಗ ಆಡಳಿತಾಧಿಕಾರಿ ದಿಲೀಪ್ ರಾವ್ ಹೀಗೆ ಮಾರುಕಟ್ಟೆ ದರಕ್ಕೆ ವಂಚಿಸಿ, ತನಗಿಷ್ಟ ಬಂದ ರೇಟಿಗೆ ಬಿಜೆಪಿಯಂಥ ಪಕ್ಷವೊಂದಕ್ಕೆ ಬಕರಿ ಮಾಡಿದ್ದಾದರೂ ಹೇಗೆ?

ಅದೊಂದು ದೊಡ್ಡ ಕತೆ. ಸದ್ಯ ಹಾಲಿ ಹತ್ತು ಸಾವಿರದ ಇನ್ನೂರಾ ಮೂವತ್ತು ಅಡಿಗಳ ವಿಸ್ತೀರ್ಣದ ಪುಟ್ಟ ಆಟದ ಮೈದಾನವಿರುವುದು ಮಲ್ಲೇಶ್ವರದ ದತ್ತಾತ್ರೇಯ ದೇವಸ್ಥಾನದ ವಾರ್ಡ್ ನಂಬರ್ ಆರರಲ್ಲಿ, ಅಲ್ಲಿಗೆ ಕೌನ್ಸಿಲರ್ ಆಗಿರುವವನು ಕಾಂಗ್ರೆಸ್ಸಿನ ಸಾಕಿಬುಡ್ಡಾ ಸೀನ. ಹೇಳಿಕೇಳಿ ಮಲ್ಲೇಶ್ವರಕ್ಕೆ ಎಮ್ಮೆಲ್ಲೆ ಯಾಗಿರುವ ಎಮ್ಮಾರ್ ಸೀತಾರಾಮ್ ಕೂಡ ಕಾಂಗ್ರೆಸ್ ಆಸಾಮಿಯೇ. ಹೀಗಿದ್ದೂ ರಾಜ್ಯ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಮತ್ತು ವಕ್ತಾರ ಸುರೇಶ್ ಕುಮಾರ್ ಬಿಜೆಪಿಯಂಥ ರಾಜ್ಯ ವ್ಯಾಪಿ ಪಕ್ಷಕ್ಕೆ ಬೆಂಗಳೂರಿನಲ್ಲಿ ಕಚೇರಿಯೇ ಇಲ್ಲವೆಂದೂ ಅದಕ್ಕೆ 6 ನೇ ವಾರ್ಡಿನಲ್ಲಿ ಪಾಲಿಕೆ ಲಲಿತ ಕಲಾ ಶಾಲೆಗೆಂದು ಗುತ್ತಿಗೆ ಕೊಟ್ಟಿದ್ದ ಪುಟ್ಟ ಆಟದ ಮೈದಾನವನ್ನೇ ಮಂಜೂರು ಮಾಡಬೇಕೆಂದು ಮುಖ್ಯಮಂತ್ರಿ ಕುಮಾರಸ್ವಾಮಿಗೆ ಮನವಿ ಕೊಡುತ್ತಾರೆ.

ಇಷ್ಟಾಗಿದ್ದೇ ತಡ 2007 ರ ಮೇ 3 ರಂದು ಪಾಲಿಕೆ ಆಡಳಿತಾಧಿಕಾರಿ ದಿಲೀಪ್ ರಾವ್ ಮಾಸಿಕ ಎರಡು ಲಕ್ಷದ ಅರವತ್ತೆರಡು ಸಾವಿರದ ಐನೂರು ರೂಪಾಯಿಗಳ ಗುತ್ತಿಗೆಯ ಮೇರೆಗೆ ಅದನ್ನು ಬಿಜೆಪಿಗೆ ಮಂಜೂರು ಮಾಡಲು ಏಕಪಕ್ಷೀಯವಾಗಿ ಒಪ್ಪಿಬಿಡುತ್ತಾರೆ. ಅದನ್ನು ಶರವೇಗದಲ್ಲಿ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜ್ಯೋತಿರಾಮಲಿಂಗಂಗೆ ಕಳಿಸುತ್ತಾರೆ. ಅಷ್ಟೇ ವೇಗವಾಗಿ ಅಂದರೆ 2007 ರ ಜೂನ್ 22 ರಂದು ಅದಕ್ಕೆ ನಗರಾಭಿವೃದ್ಧಿ ಇಲಾಖೆ ಸಮ್ಮತಿ ಸೂಚಿಸುತ್ತದೆ.

ಅಂತಿಮವಾಗಿ 2007 ರ ಜುಲೈ 13 ರಂದು ಪಾಲಿಕೆ ಆಡಳಿತಾಧಿಕಾರಿ ದಿಲೀಪ್ ರಾವ್ ನಂ. 48, ಒಂದನೇ ಮೇನ್ ರಸ್ತೆ ವಾರ್ಡ್ ನಂಬರ್ 6, ಮಲ್ಲೇಶ್ವರದ 10230.5 ಚದುರ ಅಡಿಯ ಪಾಲಿಕೆ ಆಸ್ತಿಯನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಡಿ.ವಿ. ಸದಾನಂದಗೌಡರ ಹೆಸರಿಗೆ ಮಂಜೂರಾತಿ ಆದೇಶ ಹೊರಡಿಸಿ ಇದಾಗಿ ವಾರಕ್ಕೇ ಅಂದರೆ 2007 ರ ಜುಲೈ 20 ರಂದು ಗಾಂಧಿನಗರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ 30 ವರ್ಷಗಳ ಗುತ್ತಿಗೆ ಒಪ್ಪಂದಕ್ಕೆ ಸಹಿ ಹಾಕುತ್ತಾರೆ.


ಇದಾಗಿ ಮೂರೇ ದಿನಕ್ಕೆ ಆಗ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಪಾಲಿಕೆ ಪಶ್ಚಿಮ ವಿಭಾಗದ ಜಂಟಿ ಕಮಿಷನರ್ ಎಂ.ಎ. ಖಾಲಿದ್ ಸೇರಿಕೊಂಡು ಸದರಿ ಮಕ್ಕಳ ಗ್ರೌಂಡಿನಲ್ಲಿ ಅಳತೆ ಟೇಪು ಹಿಡಿಯುತ್ತಿರುವುದನ್ನು ಕಂಡಾಗಲೇ ಮಲ್ಲೇಶ್ವರದ ಜನಕ್ಕೆ ವಿಷಯ ಗೊತ್ತಾಗಿದ್ದು!

ಸ್ಥಳೀಯ ಕಾಂಗ್ರೆಸ್ ಕೌನ್ಸಿಲರ್ ಸಾಕಿಬುಡ್ಡ ಸೀನ ಮತ್ತು ಕಾಂಗ್ರೆಸ್ ಎಮ್ಮೆಲ್ಲೇ ಯಮ್ಮಾರ್ ಸೀತಾರಾಮ್ ಗೊತ್ತಿದ್ದೂ ಇದನ್ನು ಮುಚ್ಚಿಟ್ಟಿದ್ದೇಕೆ? ಯಾವ ಲ್ಯಾಂಡ್ ಡೀಲಿನ ಮುಲಾಜಿಗೆ ಬಿದ್ದು ಶಾಸಕ ಸೀತಾರಾಮ್ ಒಳಗೊಳಗೇ ಬಿಜೆಪಿಯ ಜೊತೆ ಕೈಜೋಡಿಸಿದ್ದು?

ಇಂಥ ಅನುಮಾನಗಳೆಲ್ಲ ಒತ್ತಟ್ಟಿಗಾದರೆ, ಮತ್ತೊಂದೆಡೆ ಮೂರು ಸಾವಿರದಷ್ಟಿದ್ದ ಕೋದಂಡರಾಂಪುರದ ನಾಗರಿಕರೆಲ್ಲ ಅಳತೆ ಮಾಡುತ್ತಿದ್ದ ಕಟ್ಟಾ ನಾಯ್ಡುವನ್ನು ಘೇರಾವ್ ಮಾಡಿದ್ದಾರೆ. ಜನರ ಆಕ್ರೋಶ ಕಂಡೇ ಎದ್ದೂಬಿದ್ದೂ ಓಡಿ ಹೋದ ಕಟ್ಟಾನಾಯ್ಡು ಮತ್ತು ಪಾಲಿಕೆಯ ಅಧಿಕಾರಿಗಳ ಗ್ಯಾಂಗ್ ಆ ಹೊತ್ತಿಗಾಗಲೇ ಎಲ್ಲವನ್ನೂ ಮಾಡಿ ಮುಗಿಸಿದ್ದಾಗಿತ್ತು.

ಅಸಲಿಗೆ ಬಿಜೆಪಿಯ ಪಾರ್ಟಿ ಕಚೇರಿಗೆಂದು 1988 ರಲ್ಲಿಯೇ ಪಾಲಿಕೆ ಮಲ್ಲೇಶ್ವರದ 5 ಮತ್ತು 6 ನೇ ಅಡ್ಡರಸ್ತೆಗಳ ನಡುವಿನ ಹತ್ತು ಸಾವಿರಕ್ಕೂ ಅಧಿಕ ಅಡಿ ವಿಸ್ತಾರದ ಭೂಮಿ ಕೊಟ್ಟಿತ್ತು. ಮಲ್ಲೇಶ್ವರ ಮತ್ತು ದೇವಯ್ಯ ಪಾರ್ಕ್ ಮಧ್ಯದ ಓವರ್ ಬ್ರಿಡ್ಜ್ ಕೆಳಗಿನ ಕಬಡ್ಡಿ ಗ್ರೌಂಡಿಗೆ ಹೊಂದಿಕೊಂಡಂತೆ ಇರುವ ಬಾಬುರಾವ್ ದೇಶಪಾಂಡೆ ಸ್ಮಾರಕ ಭವನವನ್ನು ಬಾಬುರಾವ್ ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್ ಹೆಸರಿಗೆ 2001 ರಲ್ಲಿ ಅಂತಿಮವಾಗಿ ಪಾಲಿಕೆಯೇ ಮಂಜೂರಾತಿ ಆದೇಶ ನೀಡಿತ್ತು.

ಪ್ರಾರಂಭದಲ್ಲಿ ಅದನ್ನೇ ರಾಜ್ಯ ಬಿಜೆಪಿ ಕಾರ್ಯಾಲಯವನ್ನಾಗಿ ಬಳಸಲಾಗುತ್ತಿತ್ತಾದರೂ ಕ್ರಮೇಣ ವಾಸ್ತುದೋಷದ ನೆಪವೊಡ್ಡಿ ಅದನ್ನು ಪಕ್ಕದ ರಸ್ತೆಗೆ ಸ್ಥಳಾಂತರಿಸಿ ಬಾಬುರಾವ್ ದೇಶಪಾಂಡೆ ಸ್ಮಾರಕ ಭವನವನ್ನು ಹೊಸದಿಗಂತ ಪತ್ರಿಕೆ, ಭಜರಂಗದಳ, ಬಿಜೆಪಿ ಯುವ ಮೋರ್ಚಾ ಇತ್ಯಾದಿಗಳಿಗೆ ಬಿಟ್ಟು ಕೊಡಲಾಯ್ತು.



Government of Karnataka

18 JUL 2007

LEASE DEED

THIS LEASE DEED executed on the day of July 2007 between the BRUHATH BANGALORE MAHANAGARA PALIKE, BANGALORE, represented by the JOINT COMMISSIONER (West), Sri M.A. Khalid, K.A.S. herein after called the "LESSOR" ... and the president of Bharatiya Janata Party, Karnataka, No. 31, 16th Cross, 12th Main, Malleshwaram, Bangalore ... represented by its President, Sri D.V. Sadanandagowda, hereinafter called the "LESSEE" ... of the OTHER PART, in supersession of the Lease Deed executed by the parties.

WITNESSETH AS FOLLOWS:

WHEREAS at the request of the 'LESSEE', the Commissioner, Bruhath Bangalore Mahanagara Palike, Bangalore vide Resolution No. 32, dated 16-07-2007, the B.B.M.P. has resolved to lease the site belonging to B.B.M.P. in ward No. 6, 1st Main, Malleshwaram which was earlier leased to M/s Lalitha Kala Shale and which was resumed back to the B.B.M.P. and it was resolved to lease the site to Bharatiya Janata Party vide B.B.M.P. resolution ... dated 03-05-2007. Accordingly, Government Order was issued vide G.O. No. ... dated 22-06-2007. Since there was a mistake in the measurement of the site and ward number, a "Rectification Order" was issued by Government vide G.O. No. ... dated 22-06-2007 and the same was rectified by a resolution of the B.B.M.P., and Government has accordingly issued G.O. No. ... dated 28-06-2007.

Government had sanctioned BBMP site measuring 10230 Sft. which is in Ward No. 6, 1st Main Road, Malleshwaram which was leased to ...

ಆಸ್ತಿ ದೋಚಿದ ಲೀಸ್ ಡೀಡ್

ರೈಲ್ವೇ ಓವರ್ ಬ್ರಿಡ್ಜ್ ಕೆಳಗೆ ಬಾಬುರಾವ್ ದೇಶಪಾಂಡೆ ಸ್ಮಾರಕ ಭವನಕ್ಕೆಂದು ದೋಚಿದ ಆ ಜಾಗವೂ ಮಕ್ಕಳ ಆಟದ ಮೈದಾನವಾಗಿತ್ತು. ಈಗ ಮತ್ತೆ ಬಿಜೆಪಿಗೆ ಕಚೇರಿಯಿಲ್ಲ ಎಂದು ಎರಡನೇ ಬಾರಿ ಮಲ್ಲೇಶ್ವರದ ಪಾಲಿಕೆ ಸೊತ್ತನ್ನು ಬಿಜೆಪಿ ಕಬಳಿಸಿದೆ. ಅದೂ ಯಾವ ರೇಟಿಗೆ?

2007 ರ ಜುಲೈ 13 ರಂದು ಪಾಲಿಕೆ ಆಡಳಿತಾಧಿಕಾರಿ ದಿಲೀಪ್ ರಾವ್ ಕೈಗೊಂಡ ನಿರ್ಣಯದಲ್ಲಿ 1988 ರಲ್ಲಿ ಬಾಬುರಾವ್ ಸ್ಮಾರಕ-ಟ್ರಸ್ಟಿಗೆ ಪಾಲಿಕೆ ಮಂಜೂರು ಮಾಡಿದ ಜಮೀನಿನ ವಿವರಣೆಯಿದೆ. ಆದರೆ ಸದ್ಯ ಬಿಜೆಪಿ ಅದನ್ನು ಕಚೇರಿಯನ್ನಾಗಿ ಬಳಸುತ್ತಿಲ್ಲವೆಂದೂ ಹಾಗೇ ಬಳಸದೇ ಇರುವ ಕಾರಣಕ್ಕೇ ಮಲ್ಲೇಶ್ವರದ ಈ 10230 ಚದುರ ಅಡಿಯನ್ನು 30 ವರ್ಷಗಳ ಗುತ್ತಿಗೆಯ ಮೇರೆಗೆ ಕೊಡಬಹುದೆಂದೂ ಪ್ರಸ್ತಾಪಿಸುತ್ತಾರೆ. ಇದು ಯಾವ ನ್ಯಾಯ? ಯಾವ ನಿಯಮ?

ಇರಲಿ, ಅದೇ ಟಿಪ್ಪಣಿಯಲ್ಲಿ ಸದ್ಯ ಚದುರ ಅಡಿಗೆ ನಾಲ್ಕು ಸಾವಿರದ ಇನ್ನೂರು ರೂಪಾಯಿ ಮಾರ್ಕೆಟ್ ರೇಟಿದೆಯೆಂದೂ ಆ ಪ್ರಕಾರ 10,230 ಚದುರ ಅಡಿಗಳಿಗೆ ನಾಲ್ಕು ಕೋಟಿ ಇಪ್ಪತ್ತೊಂಭತ್ತು ಲಕ್ಷ ರೂಪಾಯಿಗಳಾಗುತ್ತದೆಯೆಂದು ಆಡಳಿತಾಧಿಕಾರಿಗಳೇ ಟಿಪ್ಪಣಿ ಬರೆದಿದ್ದಾರೆ. ಜೊತೆಗೆ ಈ ನಿವೇಶನದಲ್ಲಿರುವ ಲಲಿತ ಕಲಾಶಾಲೆಯ ಕಟ್ಟಡಕ್ಕೆ, ಆರು ಲಕ್ಷದ ನಲವತ್ತೈದು ಸಾವಿರದ ನೂರಾಮೂವತ್ತು ರೂಪಾಯಿಗಳ ದರವನ್ನು ನಿಗದಿಗೊಳಿಸುತ್ತಾರೆ. ಅಲ್ಲಿಗೆ ಒಟ್ಟು ಆಸ್ತಿಯ ಮೌಲ್ಯ 4 ಕೋಟಿ 36 ಲಕ್ಷದ 14 ಸಾವಿರದ 130 ರೂಪಾಯಿಗಳಾಯಿತು. ಈ ಮೊತ್ತಕ್ಕೆ ಶೇ. 10 ರಂತೆ ವಾರ್ಷಿಕ ಗುತ್ತಿಗೆ ದರವನ್ನು ಲೆಕ್ಕ ಹಾಕಿದರೆ ಅದೇ 43 ಲಕ್ಷದ 61 ಸಾವಿರದ 413 ರೂಪಾಯಿಗಳಾಗುತ್ತವೆ ಎಂದು ಲೆಕ್ಕ ಹಾಕುವ ಪಾಲಿಕೆ ಆಡಳಿತಾಧಿಕಾರಿ ಈ ಪ್ರಕಾರ ಮಾಸಿಕ 3 ಲಕ್ಷದ 63 ಸಾವಿರದ 451 ರೂಪಾಯಿ ಗುತ್ತಿಗೆ ಮೊತ್ತವನ್ನು ನಿಗದಿಗೊಳಿಸುತ್ತಾರೆ.

ಅಂದರೆ ಪಾಲಿಕೆಯ ಈ ಸೊತ್ತಿಗಾಗಿ ಬಿಜೆಪಿ ವರ್ಷಕ್ಕೆ 43,61,413 ರೂಪಾಯಿ ಪಾಲಿಕೆಗೆ ಕಟ್ಟಬೇಕು ಅಥವಾ ತಿಂಗಳಿಗೆ 3,63,451 ರೂಪಾಯಿ ಪಾವತಿಸಬೇಕು ತಾನೆ?

ಅಚ್ಚರಿಯ ಸಂಗತಿಯೇನೆಂದರೆ ಆಡಳಿತಾಧಿಕಾರಿ ದಿಲೀಪ್ ರಾವ್ ಹೊರಡಿಸಿದ ಸದರಿ ಆದೇಶವನ್ನೇ ಧಿಕ್ಕರಿಸಿದ ನಗರಾಭಿವೃದ್ಧಿ ಕಮೀಷನರ್ ಜ್ಯೋತಿರಾಮಲಿಂಗಂ 28.6.07 ರಂದು ಈ ಹಿಂದೆ ತಾನೇ ಹೊರಡಿಸಿದ ಆದೇಶವನ್ನು ತಿದ್ದಿ 'ಸದರಿ ಸ್ವತ್ತಿಗೆ ವಾರ್ಷಿಕ ಹನ್ನೆರಡು ಸಾವಿರ ರೂಪಾಯಿಗಳನ್ನಷ್ಟನ್ನೇ ಗುತ್ತಿಗೆ ಹಣವಾಗಿ ನಿಗದಿಪಡಿಸಿ' ಎಂದು ತಿದ್ದುಪಡಿ ಮಾಡುತ್ತಾರೆ. ವಾರ್ಷಿಕ 43 ಲಕ್ಷದ 61 ಸಾವಿರ ರೂಪಾಯಿಗಳಷ್ಟು ಮೊತ್ತವೆಲ್ಲಿ? ಅದರ ಬದಲಿಗೆ ಕೇವಲ ಹನ್ನೆರಡು ಸಾವಿ ರೂಪಾಯಿಗಳೆಲ್ಲಿ?

ಅಲ್ಲಿಗೆ ತಿಂಗಳೊಂದಕ್ಕೆ 3,63,451 ರೂ. ಕಟ್ಟಬೇಕಿದ್ದ ಬಿಜೆಪಿ ಕೇವಲ ಸಾವಿರ ರೂಪಾಯಿ ಕಟ್ಟುವಂತಾಯ್ತು!


ಇದು ಯಾವ ನ್ಯಾಯ? ಸದ್ಯ ಮಲ್ಲೇಶ್ವರದಲ್ಲಿ ಚದುರ ಅಡಿಯೊಂದಕ್ಕೆ ತಿಂಗಳ ಬಾಡಿಗೆಯೇ ಮೂವತ್ತು ರೂಪಾಯಿಯಿದೆ. ಅದೂ ವಸತಿಯ ರೇಟು. ಆ ಪ್ರಕಾರ 10,230 ಚದುರ ಅಡಿಗಳಿಗೆ ಕಮ್ಮಿಯೆಂದರೂ 3 ಲಕ್ಷದಷ್ಟು ಬಾಡಿಗೆ ಬರುತ್ತದೆ. ಪಾಲಿಕೆಯೇ ಕಟ್ಟಡ ಕಟ್ಟಿ ಬಾಡಿಗೆಗೆ ಬಿಟ್ಟಿದ್ದರೂ ತಿಂಗಳೊಂದಕ್ಕೆ 3 ಲಕ್ಷದಷ್ಟು ಬಾಡಿಗೆ ಬರುತ್ತಿತ್ತು, ಹರಾಜಿನಲ್ಲಿ ಮಾರಿದ್ದರೂ ಅದಕ್ಕೆ ಆರು ಕೋಟಿಯ ಬೆಲೆಯಿತ್ತು. ಇಂಥಾ ಸೊತ್ತನ್ನು ತಿಂಗಳಿಗೆ ಕೇವಲ ಸಾವಿರ ರೂಪಾಯಿಯಂತೆ ಬಿಜೆಪಿಯ ಬಾಯಿಗೆ ಹಾಕಿದ ಪಾಲಿಕೆ ಇದೇ ರೇಟಿಗೆ ಜನಸಾಮಾನ್ಯರಿಗೆ ಗುತ್ತಿಗೆ ಕೊಡುತ್ತಾ? ಹಾಗೊಮ್ಮೆ ಮಾರಲೇಬೇಕೆಂದಿದ್ದರೆ ಅದಕ್ಕೆಂದು ಏಕೆ ಟೆಂಡರ್ ಕರೆದಿಲ್ಲ? ಅಷ್ಟಕ್ಕೂ ಮಕ್ಕಳ ಆಟದ ಮೈದಾನವನ್ನು ರಾಜಕೀಯ ಪಕ್ಷವೊಂದಕ್ಕೆ ಏಕೆ ಮತ್ತು ಹೇಗೆ ಕೊಡಲು ಸಾಧ್ಯ?

ನೆಲಗಳ್ಳರಿಗಾದರೆ ಜೈಲು ಶಿಕ್ಷೆ, ಅದೇ ಬಿಜೆಪಿಗಾದರೆ ಕಾನೂನಿನ ಶ್ರೀರಕ್ಷೆ?

ಮಲ್ಲೇಶ್ವರದ ನಾಗರಿಕರ ಪಾಲಿಗೆ ವಿರೋಧಿ ಕಾಂಗ್ರೆಸ್ಸೂ ಸತ್ತು ಹೋಯಿತೆ?

■ ರಾ. ಸೋಮನಾಥ್

ಬಿಎಸ್‌ಪಿ-ವಾಟಾಳ್ ಪಕ್ಷಕ್ಕೂ ಸೈಟುಂಟಾ?



ನೆಪಕ್ಕಷ್ಟೇ ಇದು 30 ವರ್ಷಗಳ ಗುತ್ತಿಗೆಯಾದರೂ ಆನಂತರ ಪಾಲಿಕೆ ಮನಸ್ಸು ಮಾಡಿದ್ರೇ ಆದರೆ ಗುತ್ತಿಗೆಯನ್ನು ವಿಸ್ತರಿಸಬಹುದಂತೆ. ಹಾಗಂತ ಗುತ್ತಿಗೆ ಒಪ್ಪಂದದಲ್ಲೇ ಪಾಲಿಗೆ ಷರತ್ತು ವಿಧಿಸಿದೆಯೆಂದರೆ ಇದೊಂದು ನಿರ್ಲಜ್ಜ ಭೂಕಬಳಿಕೆಯಲ್ಲದೇ ಮತ್ತೇನು?

ಇದು ಬಿಜೆಪಿ-ಜೆಡಿಎಸ್ ದೋಸ್ತಿಯ ಫಲ ಮಾತ್ರ ಎಂಬುದಕ್ಕೆ ನಗರಾಭಿವೃದ್ಧಿ ಇಲಾಖೆಯ ಆಯುಕ್ತ ಜ್ಯೋತಿರಾಮಲಿಂಗಂಗೆ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಮೌಖಿಕ ಆದೇಶ ಕೊಟ್ಟ ಬಗ್ಗೆಯೂ ದಾಖಲೆಗಳಿವೆ. ಈ ಬಗ್ಗೆ ಕುಮಾರಸ್ವಾಮಿ ಸಚಿವ ಸಂಪುಟವೇ ಇನ್ನೊಂದು ನಿರ್ಣಯ ಕೈಗೊಂಡಿದೆ.

ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ವಂಚನೆಯಾಗಿದೆ. ಪಾಲಿಕೆಯ ಅಮೂಲ್ಯ ಆಸ್ತಿಯನ್ನೇ ವ್ಯವಸ್ಥಿತವಾಗಿ ಲಪಟಾಯಿಸಿದಾಗಲೂ ಜನ ಬೀದಿಗಿಳಿದು ಪ್ರತಿಭಟಿಸಿದಾಗಲೂ ಸ್ಥಳೀಯ ಶಾಸಕ ಸೀತಾರಾಮ್ ತೆಪ್ಪಗಿದ್ದಾರೆಂದರೆ ಇದಕ್ಕೆ ಅವರಿಗೆ ಇನ್ನೆಂಥ ಪ್ರತಿಫಲ ಸಿಕ್ಕಿರಬೇಡ?



ಹಾಗೆಂದು ಕಾಂಗ್ರೆಸ್‌ನ ಮತ್ತೊಬ್ಬ ನಾಯಕ ಬಿ.ಕೆ. ಹರಿಪ್ರಸಾದ್ ಕೈಕಟ್ಟಿ ಕೂತಿಲ್ಲ, ತಮ್ಮೆಲ್ಲಾ ಬೆಂಬಲಿಗರನ್ನು ಮಕ್ಕಳ ಗ್ರೌಂಡಿನ ರಕ್ಷಣೆಗೆ ಅಟ್ಟಿದ್ದಾರೆ. ಕೋರ್ಟಿನ ಕಟಕಟೆ ಹತ್ತುವುದಕ್ಕೂ ಸಿದ್ಧತೆ ನಡೆಸಿದ್ದಾರೆ. ಪುಣ್ಯಕ್ಕೆಂಬಂತೆ ಬಿಜೆಪಿಗೆ ಒಂದರ ಮೇಲೊಂದಾಗಿ ಆಸ್ತಿಗಳನ್ನು ಧಾರೆಯೆರೆಯುತ್ತಿರುವ ಪಾಲಿಕೆ ಸಿಪಿಎಂ, ಸಿಪಿಐ, ಎಸ್‌ಯುಸಿಐ, ಬಹುಜನ ಸಮಾಜ ಪಕ್ಷ, ರೈತಸಂಘ, ವಾಟಾಳ್ ಪಕ್ಷದಂಥ ರಾಜಕೀಯ ಪಕ್ಷಗಳಿಗೂ ಇದೇ ರೀತಿ ಪಾಲಿಕೆ ಸೊತ್ತನ್ನು ಬಿಟ್ಟುಕೊಡುತ್ತಾ? ಬೇಡ ಇದೇ ರೇಟಿಗೆ ಜನಸಾಮಾನ್ಯರಿಗೂ ಭೂಮಿ ಗುತ್ತಿಗೆ ಕೊಡುತ್ತಾ?

ಚೆಡ್ಡಿಗಳ ಡಬಲ್ ಸ್ಟ್ಯಾಂಡರ್ಡ್!

ಯಡ್ಡಿ ಮುಖ್ಯಮಂತ್ರಿ ಗದ್ದುಗೆಗೇರಲು ಅದೆಷ್ಟು ಸರ್ಕಸ್‌ಗಳನ್ನು ಮಾಡಿದರು. ಸ್ವತಃ ಆ ಯಡ್ಡಿಯೇ ಬಲ್ಲ, ಕಂಡಕಂಡ ಕಾವಿತೊಟ್ಟ ಸ್ವಾಮಿಗಳಿಗೆ ಅಡ್ಡ ಬಿದ್ದರು, ಕಾವಿತೊಟ್ಟ ಬೇವಿತೊಟ್ಟ ಜ್ಯೋತಿಷಿಗಳ ಮೊರೆಹೊಕ್ಕರು, ತನ್ನ ಹೆಸರನ್ನು ಬದಲಿಸಿಕೊಂಡರು (ಗುಪ್ತವಾಗಿ ಮದುವೆಯನ್ನೂ ಮಾಡಿಕೊಂಡರು ಎಂದು ಲೇವಡಿ ಮಾಡುವವರೂ ಇದ್ದಾರೆ) – ಹೀಗೆ ಒಂದೇ ಎರಡೇ? ಅಂತೂಇಂತೂ ಗದ್ದುಗೆ ಏರೇ ಬಿಟ್ಟರು ಯಡ್ಡಿ, ಆದರೆ ಅದು ಎಷ್ಟು ದಿನ ಇರುತ್ತೊ ಅವರಿಗೂ ಗೊತ್ತಿಲ್ಲ.

ಗದ್ದುಗೆ ಏರಿದ್ದಂತೂ ಆಯಿತು. ಈಗ ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಮಾಟಮಂತ್ರದ ಆಟಗಳನ್ನು ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಸೀಟಿನಲ್ಲಿ ಕುಳಿತುಕೊಳ್ಳುವ ಮೊದಲು ಅದನ್ನು ಎರಡೆರಡು ಬಾರಿ ಚೆನ್ನಾಗಿ ತೊಳೆಸಿ ಪೂಜೆ ಮಾಡಿಸಿದರು. ನಂತರ ಮೇಜನ್ನು ತೊಳೆದು ಅದಕ್ಕೂ ಪೂಜೆ ಮಾಡಿಸಿದರು. ದಿನಕ್ಕೆ ಕನಿಷ್ಠ ಎಂದರೂ ನಾಲ್ಕು ದೇವಸ್ಥಾನಗಳಿಗೆ ಭೇಟಿ ಕೊಟ್ಟು ಪೂಜೆಪುನಸ್ಕಾರ ಮಾಡಿದರು. ಇಷ್ಟೆಲ್ಲಾ ಮಾಡಿದರೂ ಮುಖ್ಯಮಂತ್ರಿ ಸೀಟು ಗ್ಯಾರಂಟಿ ಅಂತ ಆತನಿಗೆ ಅನ್ನಿಸಿಲ್ಲ ಅಂತ ಕಾಣುತ್ತೆ.

ಹಾಗಾಗಿ, ವಿಧಾನಸೌಧದಲ್ಲಿ ಒಂದು ಹೋಮವನ್ನೂ ಮಾಡಿಸಿಯೇ ಬಿಟ್ಟರು. ಇದಾಗಿದ್ದೇ ತಡ, ಕರ್ನಾಟಕದ ಮೂಲೆಮೂಲೆಗಳಿಂದ ಜನ ಛೀ... ಥೂ... ಎಂದು ಉಗಿಯತೊಡಗಿದರು; ಪ್ರಗತಿಪರರು, ಪ್ರಜ್ಞಾವಂತರು



ವಿಧಾನಸೌಧ ಕಚೇರಿಯಲ್ಲಿ ಪೂಜೆ ಮಾಡುತ್ತಿರುವ ಯಡಿಯೂರಪ್ಪ

ಸೆಕ್ಯೂಲರ್ ರಾಷ್ಟ್ರದಲ್ಲಿ ಆಡಳಿತ ಕೇಂದ್ರಗಳನ್ನು ಒಂದು ಧರ್ಮಕ್ಕೆ ಸೀಮಿತಗೊಳಿಸುತ್ತಿರುವ ಯಡ್ಡಿಯ ವಿರುದ್ಧ ಹರಿಹಾಯ್ದರು. ಅಲ್ಲಿಯತನಕ ಕೌದಿ ಹೊದ್ದುಕೊಂಡು ಮಲಗಿದ್ದ ಕಾಂಗ್ರೆಸ್ ನಾಯಕರೂ ಎದ್ದು ನಮ್ಮದೂ ಒಂದು ಕಲ್ಲು ಇರಲಿ ಅಂತ ಯಡ್ಡಿಯ ಕಡೆ ಎಸೆದುಬಿಟ್ಟರು.

ಇದನ್ನೆಲ್ಲಾ ನೋಡಿ ಪದ್ಮನಾಭನಗರದ ದೊಡ್ಡಗೌಡರು ಎಲ್ಲಿ ಮುನಿಸಿಕೊಂಡು ಮುಖ್ಯಮಂತ್ರಿ ಕುರ್ಚಿಯ ಕಾಲನ್ನು ಮುರಿದುಬಿಡುತ್ತಾರೋ ಎಂದು ಹೆದರಿದ ಯಡ್ಡಿ ಕೂಡಲೇ "ನಾನು ಮಾಡಿದ್ದು ಹೋಮವಲ್ಲ, ಪೂಜೆ" ಎಂದು ಹೇಳಿಬಿಟ್ಟರು. ಯಡ್ಡಿ ಮಾಡಿದ್ದನ್ನು ಹೇಗಾದರೂ ಮಾಡಿ ಮುಚ್ಚಿ ಹಾಕಬೇಕೆಂದು ಮುಂದೆ ಬಂದ ರಾಮಾ ಜೋಯಿಸ್ ಎಂಬ ಇಂಟಲೆಕ್ಚುಯಲ್ ಚೆಡ್ಡಿ "ಯಡ್ಯೂರಪ್ಪ ವಿಧಾನಸೌಧದಲ್ಲಿ ಬೆಂಕಿ ಹಾಕಲಿಲ್ಲ; ಬೆಂಕಿಯಿಲ್ಲದಿದ್ದರೆ ಅದು ಹೋಮವಲ್ಲ, ಅದು ಕೇವಲ ಪೂಜೆ. ಪೂಜೆ ಮಾಡೋದು ಸಂವಿಧಾನಾತ್ಮಕ ಹಕ್ಕು. ಆದ್ದರಿಂದ ಯಡ್ಯೂರಪ್ಪ ಮಾಡಿದ್ದರಲ್ಲಿ ತಪ್ಪೇನಿಲ್ಲ" ಎಂದು ಒಂದು ಥಿಯರಿಯನ್ನೇ ಮಂಡಿಸಿದ.

ಈ ರಾಮಾಜೋಯಿಸ್ ಮತ್ತು ಯಡ್ಡಿಗಳಿಗೆ ತಮ್ಮದೇ ಪಕ್ಷ ಕೇರಳದಲ್ಲಿ ಇಂಥ ವಿಚಾರ ಬಂದಾಗ ಹೇಗೆ ನಡೆದುಕೊಂಡಿತ್ತೆಂದು ನೆನಪು ಮಾಡಬೇಕಿದೆ. ಕೇರಳದಲ್ಲಿ ಕಳೆದ ವರ್ಷ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಶಾಸಕರಲ್ಲಿ 11 ಮಂದಿ ಅಲ್ಲಾನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದರು. ಇದರಿಂದ ಆಗಬಾರದ್ದೇನೋ ಆಗಿಹೋಯಿತೆಂದು ಅರಚುತ್ತಾ, ಮೈ ಪರಚಿಕೊಳ್ಳುತ್ತಾ ಬಿಜೆಪಿ ಯುವ ಮೋರ್ಚಾದ ಕೇರಳ ಘಟಕದ ಉಪಾಧ್ಯಕ್ಷ ಮಧು ಪರುಮಲ ಎಂಬುವವನು ಇದನ್ನು ಪ್ರಶ್ನಿಸಿ ಸುಪ್ರೀಮ್ ಕೋರ್ಟ್ ತನಕ ಹೋದ. ಪ್ರಕರಣವನ್ನು ಕೂಲಂಕಷವಾಗಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಮತ್ತು ನ್ಯಾಯಮೂರ್ತಿ ಆರ್. ವಿ. ರವೀಂದ್ರನ್ ಅವರನ್ನೊಳಗೊಂಡ ನ್ಯಾಯಪೀಠವು ಮತ್ತೆ ಮಧುಗೆ ಚೆನ್ನಾಗಿ ಉಗಿಯಿತು.

"ಇಂಗ್ಲಿಷಿನಲ್ಲಿರುವ ಪ್ರಮಾಣ ವಚನವನ್ನು ಇಂಗ್ಲಿಷ್ ಬಾರದವರಿಗೆ ಅರ್ಥವಾಗಲಿ ಎಂಬ ಕಾರಣಕ್ಕಾಗಿ ಅವರವರ ಮಾತೃಭಾಷೆಯಲ್ಲಿ ಭಾಷಾಂತರಿಸಲಾಗುತ್ತದೆ. ಜನಪ್ರತಿನಿಧಿಗಳು ತಮಗೆ ಅರ್ಥವಾಗುವ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಬಹುದು. ಅದು ಸಂವಿಧಾನಬಾಹಿರವಲ್ಲ, ದೇವರಿಗೆ ಅರೇಬಿಕ್ ಭಾಷೆಯಲ್ಲಿ ಅಲ್ಲಾ ಎಂದು ಕರೆಯಲಾಗುತ್ತದೆ. ಅಲ್ಲಾನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರೆ ನಿಮಗಾಗುವ ತೊಂದರೆಯಾದರೂ ಏನು?" ಎಂದು ಸುಪ್ರೀಮ್ ಕೋರ್ಟ್‌ನ ನ್ಯಾಯಪೀಠ ಪ್ರಶ್ನಿಸಿದೆ.

ಇಲ್ಲಿ ಇದನ್ನು ಯಾಕೆ ಪ್ರಸ್ತಾಪಿಸಬೇಕಾಯಿತೆಂದರೆ, ಈ ಬಿಜೆಪಿಗಳು ಕೇವಲ ಅಲ್ಲಾನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದನ್ನೇ ಬಳಸಿಕೊಂಡು ದೇಶದ ಜಾತ್ಯತೀತ, ಧರ್ಮ ನಿರಪೇಕ್ಷ ಮೌಲ್ಯಗಳಿಗೆ ಧಕ್ಕೆಯಾಗುತ್ತದೆಂದು ಬೊಬ್ಬೆಯಿಡುತ್ತಾ ದೊಡ್ಡ ರಂಪ ಮಾಡಿ, ಸುಪ್ರೀಮ್ ಕೋರ್ಟಿನ ತನಕ ಹೋಗುತ್ತಾರೆ. ಇನ್ನೊಂದೆಡೆ, ತಮ್ಮದೇ ಪಕ್ಷದ ಮುಖ್ಯಮಂತ್ರಿಯೊಬ್ಬ ರಾಜ್ಯದ ಆಡಳಿತ ಕೇಂದ್ರವಾದ ವಿಧಾನಸೌಧದಲ್ಲಿ ಹೋಮ, ಹವನಗಳನ್ನು ಮಾಡುತ್ತಾ ಹೊಗೆಯೆಬ್ಬಿಸಿರುವುದನ್ನು ಸಮರ್ಥಿಸಿಕೊಳ್ಳುತ್ತಾರೆ.

ಸಾರಾಂಶೀಕರಿಸಿ ಹೇಳುವುದಾದರೆ, ವಿಧಾನಸೌಧದಲ್ಲಿ ಹೊಗೆಯೆಬ್ಬಿಸುವ ಮೂಲಕ ಯಡ್ಡಿ ನೇತೃತ್ವದ ಸರ್ಕಾರ ಸಂವಿಧಾನದ ಜಾತ್ಯತೀತ ಮತ್ತು ಧರ್ಮ ನಿರಪೇಕ್ಷ ಆಶಯಗಳನ್ನು ಉಲ್ಲಂಘಿಸಿದೆ. ಇವರನ್ನು ಹೀಗೇ ಬಿಟ್ಟರೆ ಇಡೀ ಕರ್ನಾಟಕಕ್ಕೂ ಹೊಗೆಯೆಬ್ಬಿಸಿಬಿಡುತ್ತಾರಷ್ಟೆ. ಎಲ್ಲಾ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳು, ಬ್ಯಾಂಕುಗಳು ಗಣಪತಿ ದೇವಸ್ಥಾನಗಳಂತಾಗಿ ಅಲ್ಲಲ್ಲಿ ಒಬ್ಬೊಬ್ಬ ಸಂಘಪರಿವಾರಿ ದಕ್ಷಿಣೆ ಎತ್ತಲು ನಿಂತಿರುತ್ತಾನೆ. ಕಾಂಗ್ರೆಸ್‌ನವರಂತೂ ಕುಂಭಕರ್ಣ ನಿದ್ದೆಯಲ್ಲಿದ್ದಾರೆ. ಬಿಜೆಪಿಗಳ ಈ ಆಟವನ್ನು ವಿರೋಧಿಸಿ ಅವರು ಕೋರ್ಟಿಗೆ ಹೋಗೋದು, ಹೋರಾಟ ಮಾಡೋದು ಕನಸಿನ ಮಾತು. ಕರ್ನಾಟಕ ಗುಜರಾತ್ ಆಗದಂತೆ, ಕರ್ನಾಟಕದ ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸ್ಥಳಗಳು ಪುರೋಹಿತಶಾಹಿಗಳ ನೇತೃತ್ವದ ದೇವಸ್ಥಾನಗಳಾಗದಂತೆ ತಡೆಯೋದು ಈ ರಾಜ್ಯದ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಕರ್ತವ್ಯ.

ಹೋಮ ಹವನ ಹೇಗೆ 'ಭಾರತೀಯ ಸಂಸ್ಕೃತಿ' ಆಗುತ್ತದೆ?

"ವಿಧಾನಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಯಡಿಯೂರಪ್ಪನವರು ನಡೆಸಿದ ಹೋಮ ಹವನಗಳು ಭಾರತೀಯ ಸಂಸ್ಕೃತಿ, ಅದನ್ನು ವಿರೋಧಿಸು ವವರು ಭಾರತವನ್ನು ಬಿಟ್ಟು ತೊಲಗಬೇಕು" ಎಂದು ಹಲ್ಕುಮಿ ಸದಾನಂದ ಗೌಡರು ಫತ್ವಾ ಹೊರಡಿಸಿದ್ದಾರೆ.

ಆದರೆ ಅಲ್ಪಸಂಖ್ಯಾತ ಪುರೋಹಿತಶಾಹಿಗಳ ಈ ಅಗ್ನಿ ಆರಾಧನೆಯಾದ ಹೋಮ ಹವನಗಳು ಯಾವಾಗ ಭಾರತೀಯ ಸಂಸ್ಕೃತಿಗಳಾದವು ಎಂಬ ಮೂಲಭೂತ ಪ್ರಶ್ನೆಗೆ ಗೌಡರು ಉತ್ತರ ಕೊಡಬೇಕಿದೆ.

ಮೊದಲನೆಯದಾಗಿ ಕರ್ನಾಟಕದಲ್ಲಿ ಬ್ರಾಹ್ಮಣರಿಗಿಂತಲೂ ಬಹುಸಂಖ್ಯೆಯಲ್ಲಿರುವ ಲಿಂಗಾಯತರು ಹೋಮ ಹವನಗಳ ವಿರೋಧಿಗಳು. ಎಷ್ಟರಮಟ್ಟಿಗೆ ಅಂದರೆ ಅಗ್ನಿಯ ಆರಾಧನೆಯನ್ನು ವಿರೋಧಿಸುವ ಲಿಂಗಾಯತರು ಮಡಿದವರನ್ನು ಮಣ್ಣಿನಲ್ಲಿ ಹೂಳುತ್ತಾರೆಯೇ ಹೊರತು ದಹನ ಮಾಡುವುದಿಲ್ಲ.

ಇನ್ನು ಒಕ್ಕಲಿಗರೂ ಅಷ್ಟೇ. ಅವರ ಆಚರಣೆಗಳೆಲ್ಲವೂ ಭೂಮಿಯೊಂದಿಗಿನ ಸಂಬಂಧ ಹೊಂದಿವೆಯೇ ಹೊರತು ಅಗ್ನಿಯೊಂದಿಗಲ್ಲ. ಹಾಗೆಯೇ ಕುರುಬರು, ದಲಿತರು, ಬುಡಕಟ್ಟು ಜನಾಂಗದವರು, 'ಹಿಂದೂ ಧರ್ಮ'ಕ್ಕೆ ಸೇರಿದವರೆನ್ನಲಾದ ಇತರೆ ಜಾತಿಯವರೂ ಅಗ್ನಿ ಆರಾಧಕರಲ್ಲ. ಇನ್ನು ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ನರು, ಜೈನರು, ಮುಸಲ್ಮಾನರು ಮತ್ತು ಇತರೆ ಸಮುದಾಯದವರು, ಇವರ್‍ಯಾರೂ ಹೋಮ ಹವನಗಳನ್ನು ಮಾಡುವವರಲ್ಲ.

ಅಷ್ಟೇ ಅಲ್ಲ, ಸ್ವತಃ ಸದಾನಂದಗೌಡರ ಬಂಟ್ಸ್ ಗೌಡ ಸಮುದಾಯವೂ ಅಗ್ನಿ ಆರಾಧಕರಲ್ಲ. ಅಂದರೆ ರಾಜ್ಯದಲ್ಲಿ ಕೇವಲ ಮೂರು ಪರ್‌ಸೆಂಟ್ ಇರುವ ಬ್ರಾಹ್ಮಣ ಜಾತಿಯವರನ್ನು ಹೊರತುಪಡಿಸಿದರೆ ಬೇರೆ ಇನ್ನ್ಯಾರೂ ಅಗ್ನಿ ಆರಾಧಕರಲ್ಲ. ಇದರರ್ಥ ಅಗ್ನಿ ಆರಾಧನೆಯ ಸ್ವರೂಪವಾಗಿರುವ ಹೋಮ ಹವನಗಳು ಬ್ರಾಹ್ಮಣ ಸಂಸ್ಕೃತಿಯೇ ಹೊರತು ಭಾರತೀಯ ಸಂಸ್ಕೃತಿಯಂತೂ ಅಲ್ಲವೇ ಅಲ್ಲ. ಆದ್ದರಿಂದ ಹೋಮ ಹವನ ಪದ್ಧತಿ ಇಲ್ಲದ ಬಂಟ್ಸ್ ಸಮುದಾಯದ ಹಲ್ಕುಮಿ ಸದಾನಂದಗೌಡರೇ ತಮ್ಮ ಹೇಳಿಕೆಯಂತೆ ಭಾರತದಿಂದ ತೊಲಗಬೇಕಿದೆ.

ಬುದ್ಧಿ ಇಲ್ಲದೆ ಬಾಯಿಗೆ ಬಂದಂತೆ ಮಾತಾಡುವ ಸದಾನಂದ ಗೌಡ ಮತ್ತವರ ಹಿಂದೂತ್ವವಾದಿಗಳು ಮೊದಲು ಇಲ್ಲಿಂದ ತೊಲಗಿ, ನಿಜವಾದ ಭಾರತೀಯ ಸಂಸ್ಕೃತಿಯಾದ ಸೌಹಾರ್ದ, ಸಹಬಾಳ್ವೆ, ಬಹುಮುಖಿ ಸಂಸ್ಕೃತಿಯನ್ನು ಆಚರಿಸಿಕೊಂಡು ಬರುತ್ತಿರುವ ನಿಜವಾದ ಭಾರತೀಯರಾದ ನಮ್ಮಂತಹವರಿಗೆ ಉಪಕಾರ ಮಾಡುವವರೇ?

ಶ್ರೀನಾಥ್ 'ದಂಪತಿ' ಉದಯ ಟಿವಿ ಬಿಟ್ಟರು

ಪ್ರಣಯರಾಜ, ನಟ ಶ್ರೀನಾಥ್ ಉದಯ ಟಿವಿ ಬಿಟ್ಟಿದ್ದಾರೆ ಅಥವಾ ಶ್ರೀನಾಥರನ್ನು ಉದಯ ಟಿವಿಯೇ ಹೊರ ಕಳುಹಿಸಿದೆ ಎಂತಲೂ ಅಂದುಕೊಳ್ಳಬಹುದು. ಶ್ರೀನಾಥ್ ಈಗ ಕಸ್ತೂರಿ ಚಾನಲ್ ಸೇರಿಕೊಂಡಿದ್ದಾರೆ. ಜೊತೆಗೆ ಶೈಲಜಾ ಸಂತೋಷ್ ಕೂಡ ಇದ್ದಾರೆ. ಇವರಿಬ್ಬರೂ ತಮ್ಮ ಹಳೆಯ ಪಾಪ್ಯುಲರ್ ಪ್ರೋಗ್ರಾಂ ಆಗಿದ್ದ 'ಆದರ್ಶ ದಂಪತಿಗಳು' ತರದ್ದೇ 'ಜನುಮದ ಜೋಡಿ' ಎಂಬ ಇನ್ನೊಂದು ಕಾರ್ಯಕ್ರಮ ಚಾಲು ಮಾಡಿದ್ದಾರೆ. ಇದು ಪ್ರತಿ ಭಾನುವಾರ ಬೆಳಗ್ಗೆ ಟೆಲಿಕಾಸ್ಟ್ ಆಗುತ್ತದೆ. ಮಜಾ ವಿಚಾರ ಏನೆಂದರೆ ಉದಯ ಟಿವಿ ಇದಕ್ಕೊಂದು ಸಣ್ಣ ಚೇಷ್ಟೆಯ ತಿರುಗೇಟು ಕೊಡಲು ಹೊರಟಿದೆ. ಕಸ್ತೂರಿಯಲ್ಲಿ ಜನುಮದ ಜೋಡಿ ಪ್ರಸಾರವಾಗುವ ದಿನವೇ ಅದೇ ಸಮಯಕ್ಕೆ ಹಳೆಯ ಆದರ್ಶ ದಂಪತಿ ಕಾರ್ಯಕ್ರಮವನ್ನು ಉದಯ ರಿ ಟೆಲಿಕಾಸ್ಟ್ ಮಾಡುತ್ತಿದೆ.

ಇದರರ್ಥ ಇದೊಂದು ಬಹುಶ್ರೇಷ್ಠ ಕಾರ್ಯಕ್ರಮವಾಗಿತ್ತು ಎಂದಲ್ಲ, ಬದಲಾಗಿ ಒಂಥರಾ ಕಣ್ಣಾಮುಚ್ಚಾಲೆ ಆಡುವ ಕೆಲಸ ಅಷ್ಟೆ.

ಶ್ರೀನಾಥ್ ಹತ್ತಾರು ವರ್ಷಕಾಲ ಉದಯ ಟಿವಿಯ ಉಪಾಧ್ಯಕ್ಷರಾಗಿದ್ದವರು. ಈ ಉಪಾಧ್ಯಕ್ಷ ಅಂದರೇನು? ಅದೇನು ಪಾಲುದಾರಿಕೆಯಾ, ಅಧಿಕಾರದ ಹುದ್ದೆಯಾ ಎಂಬುದೇ ಬಹುತೇಕರಿಗೆ ಅರ್ಥವಾಗಿರಲಿಲ್ಲ.

ಈಗ ಗೊತ್ತಾಗಿರುವ ವಿಚಾರ ಏನೆಂದರೆ ಶ್ರೀನಾಥ್ ಅಲ್ಲಿ ಆರ್ಡಿನರಿ ಸಂಬಳದ ಉಪಾಧ್ಯಕ್ಷ ಅನಿಸಿಕೊಂಡಿದ್ದರು. ಸನ್ ನೆಟ್‌ವರ್ಕ್‌ನ ಸೆಲ್ವಂಗೂ ಶ್ರೀನಾಥ್‌ಗೂ ಹಳೇ ಸ್ನೇಹವಿತ್ತು, ಸೆಲ್ವಂ ಇದುವರೆಗೂ ಮೂವತ್ತು ಕನ್ನಡ ಸಿನಿಮಾ ನಿರ್ಮಿಸಿದ್ದಾರೆ. ಅವರ ಮೊದಲ ಕನ್ನಡ ಸಿನಿಮಾಗೆ ಹೀರೋ ಆಗಿದ್ದೇ ಶ್ರೀನಾಥ್. ಮೂಲತಃ ತಮಿಳು ಭಾಷಿಕರಾದ, ಚೆನ್ನೈನಲ್ಲಿದ್ದ ಸನ್ ನೆಟ್‌ವರ್ಕ್‌ನವರು ಉದಯಾದಂತ ಕನ್ನಡ ಚಾನಲ್ ಲಾಂಚ್ ಮಾಡಲು ಹೊರಟಾಗ ಒಬ್ಬ ಸ್ಥಳೀಯ ಕನ್ನಡಿಗನ ಹೆಸರೂ ಜೊತೆಯಲ್ಲಿರಲಿ ಎಂದು ಲೆಕ್ಕ ಹಾಕಿದ್ದರು. ಶ್ರೀನಾಥ್ ಹೇಗೂ ಸೆಲ್ವಂ ಸ್ನೇಹಿತರಾಗಿದ್ದರಿಂದ ಕೊನೆಗೆ ಶ್ರೀನಾಥೇ ಉದಯಾ ಉಪಾಧ್ಯಕ್ಷರಾಗಿ ಫಿಕ್ಸ್ ಆಗಿದ್ದರು. ಆದರೆ ಅದೊಂದು ಅಲಂಕಾರಿಕ ಹುದ್ದೆಯಾಗಿತ್ತಷ್ಟೇ. ಆಮೇಲೆ ಉದಯಗಾಗಿ ಶ್ರೀನಾಥ್-ಶೈಲಜಾ ಸಂತೋಷ್ ಸೇರಿ 'ಆದರ್ಶ



ದಂಪತಿ' ಪ್ರೋಗ್ರಾಂ ಶುರು ಮಾಡಿದರು. ಇದೊಂದು ಅತಿ ಕೆಟ್ಟ ಕಳಪೆ ಕಾರ್ಯಕ್ರಮವಾಗಿದ್ದರೂ ಕರ್ನಾಟಕದ ಸಾವಿರಾರು ಗಂಡ-ಹೆಂಡಿರ ಜೋಡಿ ದುಡ್ಡು ಕೊಟ್ಟು ಬಂದು ಭಾಗವಹಿಸಿದ್ದರು. ನನ್ನ ಹೆಂಡತಿ ಮಾಡಿದ ಮೊದಲ ಚಟ್ನಿ, ಗಂಡ ತಿಂದ ಎರಡನೇ ದೋಸೆ ಬಗ್ಗೆ ಖಡಕ್ ನೆನಪಿನಿಂದ ಮಾತಾಡಿ ತಮ್ಮ ದಾಂಪತ್ಯ ಜೀವನದ ಸೊಗಸನ್ನು ಜಗಜ್ಜಾಹೀರು ಮಾಡಿಕೊಂಡಿದ್ದರು. ನಿಜ ಹೇಳಬೇಕೆಂದರೆ ಉದಯಾ ಇದರಲ್ಲೂ ದುಡ್ಡು ಹರಿದು ಬಂತು. ಶ್ರೀನಾಥ್‌ರ ಬಹುಪಾಲು ಸಂಬಳವ ಮೇಕಪ್ ಆಗುತ್ತಿತ್ತೆಂದು ಕಾಣುತ್ತದೆ. ಆಗಲೇ ತನಗೆ ಸಂಬಳ ಸಾಲದೆಂದು ಶ್ರೀನಾಥ್ ಗೊಣಗಾಡಲು ಶುರು ಮಾಡಿದ್ದು. ಆದರೆ 'ನೀವು ನಮ್ಮ ಟೀವಿಗೆ ಜಾಸ್ತಿ ಟೈಮ್ ಕೊಡುತ್ತಿಲ್ಲ' ಅಂತ ಮ್ಯಾನೇಜ್‌ಮೆಂಟೂ ದೂರಿತು. ಈ ಮಧ್ಯೆ ಶ್ರೀನಾಥ್ ಮನೆಯಲ್ಲಿ ಲಕ್ಷಾಂತರ ಮೌಲ್ಯದ ಆಭರಣಗಳು ಕಳುವಾಗಿ ಅವರಿಗೆ ಹಣಕಾಸಿನ ಬಿಕ್ಕಟ್ಟು ಬಂದಿತ್ತು. ಅಮೆರಿಕೆಯಲ್ಲಿ ಅವರ ಸೋದರಿಯ ಒಡವೆಗಳವು. ಅದರ ಜವಾಬ್ದಾರಿ ಕೊನೆಗೆ ಶ್ರೀನಾಥ್ ತಲೆಗೇ ಬಂದು ಹಣ ದುಡಿಯಲು ಮತ್ತೆ ಸಿನಿಮಾಗೆ ಬಂದ ಶ್ರೀನಾಥ್ ಕಷ್ಟಪಟ್ಟು ದುಡಿದು ದುಡ್ಡು ಗಳಿಸಿ ಸೋದರಿಗಾಗಿದ್ದ ನಷ್ಟ ತುಂಬಿ ಕೊಟ್ಟಿದ್ದರು. ಆಮೇಲೆ ಬಿಜೆಪಿಗಳೊಂದಿಗೆ ಸೇರಿಕೊಂಡು ಈಗ ಎಂಎಲ್ ಆಗಿದ್ದಾರೆ. ಸ್ವಭಾವತಃ ಒಳ್ಳೆ ವ್ಯಕ್ತಿಯಾಗಿರುವ ಶ್ರೀನಾಥ್ ಈಗ ಬೇ ದಾರಿಯಿಲ್ಲದೆ ಕಸ್ತೂರಿ ಸೇರಿಕೊಂಡಿದ್ದಾರೆ. ಶ್ರೀನಾಥ್ ಉದಯದಲ್ಲಿದ್ದಾಗ ಅವರ ಟೀಂಮೇಟ್ ಶೈಲಜಾ 'ಕಸ್ತೂರಿ' ಜೊತೆ ಲಿಂಕ್ ಇಟ್ಟುಕೊಂ ದ್ದರು. ತಾನು ಉದಯ ಬಿಡುವ ಮೊದಲೆ ಕಸ್ತೂರಿಯವರಿಗೆ ಬೇ ಬೇಕಾದ ವ್ಯವಹಾರದ ಗುಟ್ಟುಗಳನ್ನೂ ದಾಟಿಸಿದ್ದ ಆಕೆ ಕೊನ ಕಸ್ತೂರಿಗೇ ಹೋಗಿ ನಂತರ ಶ್ರೀನಾಥ್ ಸ್ವಾಗತಕ್ಕೂ ಎಲ್ಲಾ ವ್ಯ ಮಾಡಿಟ್ಟಿದ್ದರು.

ನೀರಸ ಅನ್ನಿಸುವುದೇನೆಂದರೆ ಈ 'ಆದರ್ಶ ದಂಪತಿ' ಜೋ 'ಜನುಮದ ಜೋಡಿ' ಎಂಬ ಹಳೇ ಜಾಡಿನಲ್ಲೇ ಮುಂದುವ ಯುತ್ತಿರುವುದು.

ಯಡ್ಡಿಗೂ, ಈರಿಗೂ ತಂದಿಟ್ಟವರ್ಯಾರು?

ಎಷ್ಟೆಂದರೂ ಕೊಡಲಿ ಕಾವಲ್ಲವೆ ಕುಲಕ್ಕೆ ಮೂಲ?


ಇತ್ತ ಯಡ್ಡಿ ಮುಖ್ಯಮಂತ್ರಿಯಾಗುವುದಕ್ಕೂ ಅತ್ತ ಬಿಜೆಪಿಯ ಎರಡನೇ ಅಧಿಪತಿ ಕೆ.ಎಸ್. ಈಶ್ವರಪ್ಪನವರ ಸಿಟ್ಟು ರಟ್ಟೆಗೆ ಬರುವುದಕ್ಕೂ ಒಂದೇ ಆಗಿಬಿಟ್ಟಿದೆ!

ಮೊದಲ ಕಂತಿನಲ್ಲಿ ತನಗಿಂತ ಜೂನಿಯರ್‌ಗಳನ್ನು ಮಂತ್ರಿ ಮಾಡಿದ ಯಡ್ಡಿಯ ವಿರುದ್ಧ ಈಶ್ವರಪ್ಪ ವಾಚಾಮಗೋಚರ ಕಿಡಿಕಾರಿದ್ದು, ತನ್ನನ್ನು ತುಳಿಯಲು ಯಡ್ಡಿ ಮತ್ತು ಶೋಭಾ ಕರಂದ್ಲಾಜೆ ಸೇರಿ ನಡೆಸುತ್ತಿರುವ ಷಡ್ಯಂತ್ರಗಳನ್ನು ರಾಜನಾಥ್ ಸಿಂಗ್ ಎದುರಿಗೇ ಈಶ್ವರಪ್ಪ ಬುಸುಗುಟ್ಟಿದ್ದು ಯಾರಿಗಲ್ಲದಿದ್ದರೂ ಬಿಜೆಪಿಯ ಮಟ್ಟಿಗೆ ಗುಟ್ಟೇನಲ್ಲ. ಬಹುಶಃ ಈಶ್ವರಪ್ಪ ಮಂತ್ರಿಯಾಗೋದೇ ಕಷ್ಟ ಎಂದು ಕೇಸರಿ ಕೂಟದಲ್ಲೇ ಗುಲ್ಲೆದ್ದಿದ್ದಕ್ಕೂ ಇದೇ ಕಾರಣವಿರಬೇಕು!



ಅಂದಹಾಗೆ ಮುಖ್ಯಮಂತ್ರಿ ಯಡ್ಡಿಗೂ ಕುರುಬರ ನಾಯಕ ಈರಿ ಅರ್ಥಾತ್ ಈಶ್ವರಪ್ಪಂಗೂ ಮಧ್ಯೆ ಹೆಡೆಯೆತ್ತಿದ ಜಿದ್ದಾಜಿದ್ದಿಗೆ ಅನಂತಿ ಮಾತ್ರವೇ ಕಾರಣವಾಗಿದ್ದರೆ ಅದಕ್ಕೊಂದು ಸಮರ್ಥನೆಯಿರುತ್ತಿತ್ತು. ಇದು ಶುರುವಾಗಿದ್ದೇ ಬಿಜೆಪಿ-ಜೆಡಿಎಸ್ ಅಧಿಕಾರಕ್ಕೆ ಬಂದ ಮೇಲೆ. ಸಭೆಯೊಂದರಲ್ಲಿ ಮೂಗು ತೂರಿಸಿದ ಶೋಭಾ ಕರಂದ್ಲಾಜೆಯನ್ನು ಈಶ್ವರಪ್ಪ ಯದ್ವಾತದ್ವಾ ಝಾಡಿಸಿದ್ದು ಅದೇ ಕಾರಣಕ್ಕೆ. ದೇವೇಗೌಡರ ದರಿದ್ರ ನಾರಾಯಣ ರ‍್ಯಾಲಿಯ ವಿರುದ್ಧ ಈರಿ, ಮುಖ್ಯಮಂತ್ರಿ ಚಂದ್ರು ಮತ್ತು ಲಿಂಬಾವಳಿ ಸೇರಿ ಹೆಣೆದಿದ್ದ ಕೊಳಗೇರಿ ಹಿಂದುಳಿದ ದಲಿತರ ಅಂದರೆ ಕೊಹಿಂದ ಸಮಾವೇಶಕ್ಕೆ ಯಡ್ಡಿಯನ್ನು ಛೂಬಿಟ್ಟು ಕರಂದ್ಲಾಜೆ ಕಲ್ಲು ಹಾಕಿದ್ದು, ಈ ಸಂಬಂಧ ಆಕೆಯ ಪರವಹಿಸಿದ ಯಡ್ಡಿಗೂ ಈಶ್ವರಪ್ಪಂಗೂ ಸಭೆಯಲ್ಲೇ ಜಗಳವಾಗಿದ್ದು, ಅಲ್ಲಿಂದಾಚೆಗೆ ಉಪಮುಖ್ಯಮಂತ್ರಿಯಾಗಿದ್ದಷ್ಟೂ ದಿನ ಯಡ್ಡಿಯನ್ನು ಈರಿ ಬೈದುಕೊಂಡೇ ತಿರುಗಾಡಿದ್ದು ಬಿಜೆಪಿ ಅಂತಃಕಲಹದ ಒಂದು ಅಧ್ಯಾಯವಷ್ಟೇ. ಆತನಕ ಒಳಗೊಳಗೇ ನಡೆಯುತ್ತಿದ್ದ ಇಬ್ಬರ ಗುದ್ದಾಟ ತೀರ ವಿಕೋಪಕ್ಕೆ ಹೋಗಿದ್ದು ಯಡ್ಡಿ ಮಗ ರಾಘವೇಂದ್ರನ ಕಾರಣಕ್ಕೆ!

ಶಿವಮೊಗ್ಗದ ಚಿಡ್ಡಿ ರಾಜಕಾರಣದಲ್ಲಿ ತನ್ನ ಮಗ ರಾಘವೇಂದ್ರನನ್ನು ಮೆರೆಸುವುದು ಯಡ್ಡಿಯ ಮಸಲತ್ತಾದರೆ ಅದೇ ವೇಳೆಗೆ ತನ್ನ ಏಕೈಕ ಸಂತಾನನಾದ ಕಾಂತೇಶನನ್ನು ಬೆಳೆಸುವುದು ಈಶ್ವರಪ್ಪನ ಹರಕತ್ತು. ಬರುಬರುತ್ತ ಯಡ್ಡಿ ಮಗ ರಾಘು ಈಶ್ವರಪ್ಪನವರ ನೀರಾವರಿ ಇಲಾಖೆಗೇ ಕೈಯಿಟ್ಟ. ಕಾಡಾದ ಎರಡು ಮತ್ತು ನೀರಾವರಿ ಇಲಾಖೆಯ ಮೂರು ಕಾಮಗಾರಿಗಳ ಟೆಂಡರ್ ಅನ್ನು ಬೇನಾಮಿಯಾಗಿ ಗಿಟ್ಟಿಸಿ ಕಳಪೆ ಕಾಮಗಾರಿ ಮಾಡಿ ದೋಚಿದ ಯಡ್ಡಿ ಮಗನನ್ನು ಈಶ್ವರಪ್ಪ ಸುಮ್ಮನೆ ಬಿಡುವುದುಂಟಾ?



ಕೋಟ್ಯಂತರ ರೂಪಾಯಿ ಮೊತ್ತದ ಮೂರು ಪ್ರಮುಖ ಕಾಂಟ್ರಾಕ್ಟ್‌ಗಳಲ್ಲಿ ನಡೆದ ಬೋಗಸ್ ಬಿಲ್ 'ದಂಧೆಯ ವಿರುದ್ಧ ಈಶ್ವರಪ್ಪ ತನಿಖೆಗೆ ಆದೇಶಿಸಿಬಿಟ್ಟರು. ಬಿಲ್ಲಿನ ದುಡ್ಡನ್ನೂ ತಡೆಹಿಡಿದರು. ಅದೇ ಹೊತ್ತಿಗೆ ಯಡ್ಡಿ ಶಿವಮೊಗ್ಗದ ಸಂತೆಕಡೂರಿನ ಬಳಿ ಏರ್‌ಪೋರ್ಟ್ ಯೋಜನೆ ತಂದರು. ಇದರ ವಾಸನೆ ಮೊದಲೇ ಹಿಡಿದಿದ್ದ ಈಶ್ವರಪ್ಪ ಏರ್‌ಪೋರ್ಟ್ ಆಜೂಬಾಜಿನ ಸೋಗಾನೆಯಲ್ಲಿ ಬೇನಾಮಿಗಳನ್ನು ಬಿಟ್ಟು ನೂರಾರು ಎಕರೆ ಖರೀದಿಸಿಬಿಟ್ಟರು.

ಏರ್‌ಪೋರ್ಟ್ ತಂದಿದ್ದು ತಾನು. ಅದರ ಆಜೂಬಾಜು ಯಾವ ಭೂಮಿಯನ್ನು ತಾನು ಖರೀದಿಸಬೇಕೆಂದಿದ್ದನೋ ಅದನ್ನೆಲ್ಲ ತನಗೂ ಮುನ್ನ ಈಶ್ವರಪ್ಪನೇ ಖರೀದಿಸುತ್ತಾನೆಂದರೆ ಏನರ್ಥ?

ಅಲ್ಲಿಗೆ ಯಡ್ಡಿಗೂ ಈರಿಗೂ ಭಯಂಕರ ಕಚ್ಚಾಟವೇ ನಡೆದಿದೆ. ಅದಕ್ಕೆ ತಕ್ಕಂತೆ 'ನಿನ್ನನ್ನೇ ಮುಖ್ಯಮಂತ್ರಿ ಮಾಡಿ ಕುರುಬರನ್ನು ಮೆಚ್ಚಿಸ್ತೀನಿ' ಎಂದು ದೇವೇಗೌಡರು ಈಶ್ವರಪ್ಪಂಗೆ ಜಾಕ್ ಹಾಕಿದ್ದೂ ಯಡ್ಡಿಗೆ ಗೊತ್ತಾಗಿದೆ. ಜೊತೆಗೇ ಈರಿ ಬೆನ್ನಿಗೆ ಅನಂತಿ ನಿಂತಿದ್ದು ಇನ್ನಷ್ಟು ಕೆರಳಿಸಿದೆ. ಈಶ್ವರಪ್ಪನನ್ನು ಎಲ್ಲೆಂದರಲ್ಲಿ ಅವಮಾನಿಸಲು ಏನೇನು ಬೇಕೋ ಎಲ್ಲವನ್ನೂ ಮಾಡಿಕೊಂಡೇ ಬಂದ ಯಡ್ಡಿ ಇನ್ನು ತನ್ನ ಮುಖ್ಯಮಂತ್ರಿ ಪ್ರಮಾಣವಚನದಲ್ಲಿ ಯಾಮಾರುವುದುಂಟಾ?

ಮೊದಲ ಕಂತಿನ ನಾಲ್ವರು ಮಂತ್ರಿಗಳ ಪೈಕಿ ಈಶ್ವರಪ್ಪ ಇಲ್ಲದ್ದು ಅನೇಕರಿಗೆ ಅಚ್ಚರಿಯಾದರೂ ಬಿಜೆಪಿಯ ಮಟ್ಟಿಗದು ಮಾಮೂಲಿನ ಸಂಗತಿಯಾಗಿತ್ತು. ಅಷ್ಟಕ್ಕೂ ಯಡ್ಡಿ-ಕರಂದ್ಲಾಜೆ ಜೋಡಿ ಈಶ್ವರಪ್ಪನನ್ನು ಇಷ್ಟಕ್ಕೆ ಬಿಡುತ್ತದಾ?

ಯಾರ ಬೆನ್ನಿಗೆ ಯಾರು? ಹೇಗೆ? ಎಲ್ಲಿ? ಇರಿಯಲಿದ್ದಾರೆಂಬುದಕ್ಕೆ ಬಹಳ ದಿನ ಕಾಯಬೇಕಿಲ್ಲ, ಕಾದು ನೋಡಿ-ಬರಲಿದೆ ಬಿಜೆಪಿ ಗ್ಯಾಂಗ್‌ವಾರ್. •

ದಕ್ಷಿಣ ಕನ್ನಡ

ಅಮರ ಮುಡ್ನೂರು

ಪಂಚಾಯತ್ ರಾಜ್ ವ್ಯವಸ್ಥೆಯ ಭ್ರಷ್ಟ ರೂಪದರ್ಶನ


ಸಂಪೂರ್ಣ ಸಾಕ್ಷರತಾ ಆಂದೋಲನದ ಮೂಲಕ ಸಾಕ್ಷರ ನಾಡು ಎಂಬ ಹೆಗ್ಗಳಿಕೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ ಸಾಕ್ಷರರಿರುವ ಸುಳ್ಯ ತಾಲ್ಲೂಕಿನಲ್ಲಿ ಒಂದು ಕುಗ್ರಾಮವೇ ಅಮರ ಮುಡ್ನೂರು. ಸುಬ್ರಾಯ ಚೊಕ್ಕಾಡಿ, ಬಾಲ ಸುಬ್ರಹ್ಮಣ್ಯ ಕಂಜಪರಣೆಯಂತಹ ಕವಿ ಹೃದಯಿಗಳ ಸ್ಫೂರ್ತಿಯಿಂದ ಒಂದು ಡಜನ್‌ಗೂ ಹೆಚ್ಚು ಸಾಹಿತಿಗಳು ಈ ಕುಗ್ರಾಮವೊಂದರಲ್ಲೇ ಕಾಣಸಿಗುತ್ತಾರೆ. ಸುಳ್ಯದ ಶಾಸಕ ಕೂಡಾ ಬೇನಾಮಿ ಆಸ್ತಿ ಹೊಂದಿ ಈ ಗ್ರಾಮದಲ್ಲೇ ಬಿಡಾರ ಹೂಡಿದ್ದಾರೆ.

ಹೀಗಿರುವಾಗ ಕೃಷಿಕರೂ, ಸಾಹಿತಿಯೂ ಆಗಿರುವ ಸ್ಥಳೀಯ ಕೆ.ಪಿ. ಸುರೇಶ್ ಗ್ರಾಮ ಸಭೆಯಲ್ಲಿ ಎತ್ತಿದ ಅವ್ಯವಹಾರದ ಪ್ರಶ್ನೆ ಕೋಲಾಹಲಕ್ಕೆ ಕಾರಣವಾಗಿ ಪಂಚಾಯತ್ ರಾಜ್ ವ್ಯವಸ್ಥೆಯ ಭ್ರಷ್ಟ ರೂಪದರ್ಶನ ಮಾಡಿಸಿದೆ.



ಪಂಚಾಯತ್ ಚುನಾವಣೆಯಲ್ಲಿ ಪಕ್ಷದ ಪ್ರಾತಿನಿಧ್ಯವಿಲ್ಲದಿದ್ದರೂ ಅದು ಗುಪ್ತಗಾಮಿನಿಯಂತೆ ಕೆಲಸ ಮಾಡುವುದು ಸರ್ವವಿದಿತ. ಅಂತೆಯೇ ಈ ಹಿಂದೆ ಕಾಂಗ್ರೆಸ್ಸಿಗರ ಕೈಯಲ್ಲಿದ್ದ ಅಮರ ಮುಡ್ನೂರು ಹಾಲಿ ಬಿಜೆಪಿಯ ತೆಕ್ಕೆಗೆ ಬಿದ್ದಿದೆ. ಎರಡೂವರೆ ವರ್ಷದ ಟರ್ಮ್‌ಗೆ ಅಧ್ಯಕ್ಷಗಿರಿ ಬದಲಾಗುವ ನಿಯಮದಂತೆ ಇಲ್ಲಿ ಮಾಜಿ ಉಪಾಧ್ಯಕ್ಷ ಲಿಂಗಪ್ಪ ಆಚಾರಿಯೇ ಅಧ್ಯಕ್ಷನಾಗುವ ಅದೃಷ್ಟಶಾಲಿಯಾಗಿದ್ದಾನೆ. ಇಲ್ಲಿ ಆಚಾರಿ ಆಟಕ್ಕುಂಟು, ಲೆಕ್ಕಕ್ಕಿಲ್ಲ, ಸ್ಥಳೀಯ ಚಿಡ್ಡಿ ದೊಣ್ಣೆ ನಾಯಕ ಪಿ.ಕೆ. ಜಯರಾಮ್, ರವಿ ಕುಂಬಲ ಮತ್ತವರ ದುಷ್ಟಕೂಟ ಆಡಿದ್ದೇ ಆಟ, ಲೆಕ್ಕ ಎಲ್ಲಾ. ಎಚ್.ಎಸ್. ಹುಕ್ಕೇರಿ ಎಂಬ ಇಂಜಿನಿಯರ್ ಇವರ ತಾಳಕ್ಕೆ ತಕ್ಕ ಹಾಗೆ ಕುಣಿದು ಪಾಲು ಪಡೆದರೆ, ಪಂಚಾಯತ್ ಕಾರ್ಯದರ್ಶಿ ಗೋವಿಂದ ನಾಯ್ಕ ಇವರ ನಖರಾಗಳಿಗೆಲ್ಲಾ ತಲೆ ಕೊಟ್ಟು ಕೋಡಂಗಿಯಂತಾಗಿದ್ದ. ನಡೆದ ಅವ್ಯವಹಾರದಲ್ಲಿ ಈತ ಪಾಲು ಪಡೆದಿದ್ದೆಲ್ಲಾ ಬಯಲಾದರೆ, ಪೂರ್ತಿ ಭಾರ ತನ್ನ ತಲೆ ಮೇಲೆಯೇ ಬರುತ್ತದೆ ಎಂಬ ಭೀತಿಯಿಂದ ಕುಡಿತದ ದಾಸನಾಗಿಬಿಟ್ಟ. ಇತ್ತೀಚೆಗೆ ಗ್ರಾಮ ಸಭೆಯ ದಿನ ಹತ್ತಿರವಾಗುತ್ತಲೇ ಕುಡಿತ ವಿಪರೀತವಾಗಿ ಎದೆಯೊಡೆದು ಸತ್ತೇಬಿಟ್ಟ. ನೂರಕ್ಕೆ ನೂರು ಕೃಷಿಕರು ಮತ್ತು ಕೃಷಿ ಕೂಲಿ ಕಾರ್ಮಿಕರೇ ನೆಲೆಸಿರುವ ಅಮರ ಮುಡ್ನೂರಿನ ಪಂಚಾಯತ್‌ನಲ್ಲಿ ಸದಸ್ಯರಾದವರು ಕೂಡಾ ಈ ಭ್ರಷ್ಟಾಚಾರದ ಆಳ-ಅಗಲ ತಲೆಗೇ ಹತ್ತದ ಹಳ್ಳಿ ಮುಗ್ಧರಾಗಿರೋದು ಕೂಡಾ ಈ ಖದೀಮ ಕೂಟ ಹಗಲು ದರೋಡೆಗಿಳಿಯಲು ಅನುಕೂಲವಾಗಿಬಿಟ್ಟಿದೆ. ಪರಿಣಾಮವಾಗಿ ಅಸ್ತಿತ್ವದಲ್ಲಿ ಇಲ್ಲದ ರಸ್ತೆಗೇ ಬಿಲ್ಲು ಹಾಕುವುದು, ಒಂದೇ ರಸ್ತೆಗೆ ಮೂರು ಬಾರಿ ಬಿಲ್ಲು ಹಾಕುವುದು - ಹೀಗೆ ಇವರ 'ಬಿಲ್ಲು'ಗಾರಿಕೆ ಈ ತನಕ ಸಾಂಗವಾಗಿ ನಡೆಸುತ್ತಾ ಈ ಖದೀಮ ಕೂಟ ಪುಷ್ಕಳ ಭೋಜನ ಮಾಡುತ್ತಿತ್ತು! ಆದರೆ, ಈಗ ಬಯಲಿಗೆ ಬಿದ್ದಿದ್ದಾರೆ.

ಭ್ರಷ್ಟ ಸಾಗರದ ಒಂದೆರಡು ಹನಿಗಳು



ಪಿ.ಕೆ. ಜಯರಾಮ್

ಹನ್ನೆರಡನೇ ಹಣಕಾಸು ಯೋಜನೆಯಲ್ಲಿ ಚಲ್ಲಾರು-ಕೂಟೇಲು ರಸ್ತೆಯ ಚರಂಡಿ ದುರಸ್ತಿಗೆ 25,000 ರೂ.ಗಳನ್ನು 17.3.2007 ಕ್ಕೆ ಮಂಜೂರು ಮಾಡಲಾಗಿದೆ. ಆದರೆ ಈ ಬಿಲ್ಲಿನ ಹಣ 2.2.2007 ಮತ್ತು 3.3.2007 ಎರಡು ಕಂತುಗಳಲ್ಲಿ ಆಡಳಿತಾತ್ಮಕ ಮಂಜೂರಾತಿಗೆ ಮೊದಲೇ ಡ್ರಾ ಮಾಡಲಾಗಿದೆ. ವಿಚಿತ್ರವೆಂದರೆ ಕರ್ನಾಟಕ ಅಭಿವೃದ್ಧಿ ನಿಗಮದ ಉಸ್ತುವಾರಿಯಲ್ಲಿರುವ ಮೀಸಲು ಅರಣ್ಯದಲ್ಲಿ ಇಲಾಖಾ ಉಪಯೋಗಕ್ಕಿರುವ ಈ ರಸ್ತೆಯನ್ನು ಪಂಚಾಯತ್ ರಸ್ತೆಯೆಂದು ತೋರಿಸಿ ಹಗಲು ದರೋಡೆ ಮಾಡಲಾಗಿದೆ.

ದೊಡ್ಡಿಹಿತ್ಲು-ಇಟ್ಟಗುಂಡಿ ರಸ್ತೆಯ ಚರಂಡಿ ರಿಪೇರಿಗೆ 27,000 ರೂ.ಗಳನ್ನು 8.2.2007 ರಂದು ಮಂಜೂರು ಮಾಡಲಾಗಿದ್ದು, ಕೇವಲ 200 ಮೀಟರ್ ಮಾತ್ರ ಚರಂಡಿ ಅಗೆದು 26,270 ರೂಪಾಯಿಗಳನ್ನು ಸ್ವಾಹ ಮಾಡಲಾಗಿದೆ.


ಅಜ್ಜನಗದ್ದೆ-ಅದ್ರುಕಾಯ ರಸ್ತೆ ಡಾಂಬರೀಕರಣ ಮಾಡದೇ ಕೆಂಪು ಕಲ್ಲು ಹಾಕಿ ಮುಚ್ಚಿ, ಮಳೆಗಾಲ ಮುಗಿದ ಮೇಲೆ ಡಾಂಬರೀಕರಣ ಮಾಡುತ್ತೇವೆಂದು ಸಮರ್ಥಿಸಿದ ಆಡಳಿತ ಮಂಡಳಿ 29.5.2006 ರಿಂದ 8.6.2007ರ ಅವಧಿಯಲ್ಲಿ ರಸ್ತೆ ರಿಪೇರಿ, ಪಾದಚಾರಿ ರಸ್ತೆ ರಿಪೇರಿ, ಡಾಂಬರೀಕರಣ ಎಂದೆಲ್ಲಾ ನಕಲಿ ದಾಖಲೆ ಸೃಷ್ಟಿಸಿ 9 ಬಿಲ್ಲುಗಳಲ್ಲಿ ಒಟ್ಟು 2,08,415 ರೂಪಾಯಿಗಳನ್ನು ದೋಚಿದೆ. ಇವರು ಹಗಲು ದರೋಡೆಯಲ್ಲಿ ಎಷ್ಟು ನೀಚರಾಗಿದ್ದಾರೆಂಬುದಕ್ಕೆ 2006-2007 ನೇ ಸಾಲಿನ ಪಂಚಾಯತ್‌ನ ಜೆರಾಕ್ಸ್ ಬಿಲ್ಲೇ ಸಾಕ್ಷಿ. ಕೇವಲ ಜೆರಾಕ್ಸ್ ಮಾಡಿಸಿದ್ದಕ್ಕೆ 20,000 ರೂಪಾಯಿಗಳ ಬಿಲ್ ಹಾಕಿದ್ದಾರೆಂದರೆ ಇವರ ದರೋಡೆಯ ಪ್ರಮಾಣ ಅರ್ಥವಾಗುತ್ತದೆ.



ಪಂಚಾಯತ್ ಕಚೇರಿಯ ಆವರಣದ ಕ್ಲೀನಿಂಗ್‌ಗೆ ಮತ್ತು ಅಲ್ಲಿನ ಬೆರಳೆಣಿಕೆಯ ತೆಂಗಿನ ಮರಗಳ ಆರೈಕೆಗೆ ಇವರು ವಾರ್ಷಿಕ ಖರ್ಚು ತೋರಿಸಿರುವುದು 20 ಸಾವಿರ. ತಮಾಷೆಯೆಂದರೆ ನೀರಾವರಿ ಪೈಪು ರಿಪೇರಿಗೆ 23.4.2007 ರಂದು ಎರಡು ಸಾವಿರ ಬಿಲ್ಲು ಮಾಡಿ, ಹದಿನೈದು ದಿನ ಕಳೆದ ಮೇಲೆ ಪೈಪು ಸಾಮಗ್ರಿ ಖರೀದಿಗೆ ಎಂದು ಆರು ಸಾವಿರ್ ಬಿಲ್ ಮಾಡಿ ಕೊನೆಗೆ ಈ ಪೈಪುಗಳನ್ನು ಜೋಡಿಸಲು ನಾಲ್ಕು ಸಾವಿರ ಬಿಲ್ಲು ಮಾಡಿದ್ದಾರೆ! ಇಲ್ಲಿ ನಡೆದ ಇನ್ನೊಂದು ಮಜಾವೆಂದರೆ 13.10.2006 ರಂದು ಅಧ್ಯಕ್ಷರಾಗಿದ್ದ ಲಿಂಗಪ್ಪ ಆಚಾರಿ, 2.9.2006 ರಿಂದ 21.2.2007 ರವರೆಗಿನ ಅವಧಿಯ ಪ್ರವಾಸ ಭತ್ಯೆಯಾಗಿ ರೂ. 5000 ವನ್ನು ಜೇಬಿಗಿಳಿಸಿದ್ದು!

ಸಾಹಿತಿ V/s ಪಂಚಾಯತಿ

ಅಮರ ಮುಡ್ನೂರು ಪಂಚಾಯತ್‌ನ ಅವ್ಯವಹಾರಗಳ ಕಂತೆ ದಾಖಲೆ ಸಮೇತ ಬಯಲಾಗಲು ಕಾರಣರಾಗಿರೋದು ಕೆ.ಪಿ. ಸುರೇಶ ಎನ್ನುವ ಸಾಹಿತಿ. ದಿನಾಂಕ 31.8.2007 ರಂದು ಅಲ್ಲಿ ನಡೆದ ಗ್ರಾಮಸಭೆಯಲ್ಲಿ ಕೆ.ಪಿ. ಸುರೇಶ್ ತಾನು ಸದಾ ನಡೆದಾಡುವ ಕಂಜಪರಣೆ-ಪೈಲಾರು ರಸ್ತೆಗೆ ಮೂರು ಬಾರಿ ಬಿಲ್ಲು ಮಂಜೂರಾಗಿದ್ದನ್ನು ಪ್ರಶ್ನಿಸಿದ್ದೇ ಮಿಕ್ಕೆಲ್ಲಾ ಅವ್ಯವಹಾರಗಳ ಬಯಲಿಗೆ ಹೇತುವಾಯಿತು.



ಲಿಂಗಪ್ಪ ಆಚಾರಿ

ಕೆ.ಪಿ. ಸುರೇಶರ ಆಕ್ಷೇಪವನ್ನು ಅಲ್ಲಗಳೆದ ಗ್ರಾಮ ಪಂಚಾಯತ್ ಆಡಳಿತ ಮಂಡಳಿ ಪತ್ರಿಕಾಗೋಷ್ಠಿ ಕರೆದು ಸ್ಪಷ್ಟೀಕರಣ ನೀಡಿದ್ದಲ್ಲದೇ ಇನ್ನೂ ಮುಂದುವರೆದು ಕೆ.ಪಿ. ಸುರೇಶರನ್ನು ಮಾನಸಿಕ ಅಸ್ವಸ್ಥ ಎಂದು ನಿಂದಿಸಿದ್ದು ಈ ಖದೀಮರ ಪಾಲಿಗೆ ಕೋಲು ಕೊಟ್ಟು ಹೊಡೆಸಿ ಕೊಂಡಾಯಿತು. 'ಮಾಹಿತಿ' ಎನ್ನುವ ಬ್ರಹ್ಮಾಸ್ತ್ರವನ್ನು ಬಳಸಿ ಪಂಚಾಯತ್‌ನಲ್ಲಿ ನಡೆದ ಕಾಮಗಾರಿಗಳ ಪಟ್ಟಿಯನ್ನು ಪಡೆಯಲು ಪ್ರಯತ್ನಿಸಿದ ಕೆ.ಪಿ. ಸುರೇಶರಿಗೆ ಅಲ್ಲಿ ನಡೆದ ಅವ್ಯವಹಾರಗಳ ದರ್ಶನದಿಂದ ತಾನೇ ಒಂದು ಕಾದಂಬರಿಯ ಕಥಾನಾಯಕನಾದ ಅನುಭವ ನೀಡಿದೆ. ಅವರು ಪ್ರಶ್ನಿಸಿದ ಚಾಮಡ್ಕ - ಕಂಜರ್ಪಣೆ - ಪೈಲಾರು ರಸ್ತೆಯ ದುರಸ್ತಿ ನಡೆಸದೇ ಎರಡು ಬಿಲ್‌ಗಳನ್ನು ಹಾಕಿ 60 ಸಾವಿರ ಕಬಳಿಸಿರುವುದು ಬಯಲಿಗೆ ಬಿದ್ದಿದೆ. ಸಾಲದ್ದಕ್ಕೆ ರಸ್ತೆ ರಿಪೇರಿ ಎಂದು ಪುನಃ 5,000 ರೂ.ಗಳನ್ನು ಡ್ರಾ ಮಾಡಿ 'ಹ್ಯಾಟ್ರಿಕ್ ಬಿಲ್'ಗಾರಿಕೆಯನ್ನು ಪ್ರದರ್ಶಿಸಿರುವುದೂ ಬೆಳಕಿಗೆ ಬಂದಿದೆ. ಇದರಿಂದ ದಿಗ್ಭ್ರಮೆಗೊಂಡಿರುವ ಕೆ.ಪಿ. ಸುರೇಶ್ ಅವ್ಯವಹಾರಗಳ ಉತ್ಖನನದಲ್ಲಿ ಮುಂದುವರಿದಿದ್ದಾರೆ. ಸಾಹಿತಿಯ ಸಾಹಸಕ್ಕೆ ಊರ ಜನರೂ ಧ್ವನಿಯಾಗಿದ್ದಾರೆ. ಲೋಕಾಯುಕ್ತ ಮೇಲಧಿಕಾರಿಗಳಿಗೂ ಇದಕ್ಕೆ ಸ್ಪಂದಿಸುವ ಅನಿವಾರ್ಯತೆ ತಲೆದೋರಿದೆ. ಅವ್ಯವಹಾರಗಳ ಉತ್ಖನನ ಇನ್ನೂ ಮುಂದುವರೆದಿದೆ. ಅದು ಎಲ್ಲಿಗೆ ಬಂದು ಕೊನೆಯಾಗುತ್ತದೋ ನೋಡಬೇಕು.

ಏನೇ ಇರಲಿ ಜಾತಿ-ಮತ-ಪಂಥ-ಪಕ್ಷವೆಂಬ ಭೇದವಿಲ್ಲದೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲೇ ವ್ಯಾಪಕವಾಗಿ ಹಬ್ಬಿರುವ ಭ್ರಷ್ಟಾಚಾರವನ್ನು ಕಿತ್ತೆಸೆಯಲು ಯಾವ ರಾಜಕೀಯ ಪಕ್ಷಕ್ಕೂ ಸೇರದ ಕೆ.ಪಿ. ಸುರೇಶ್ ಪ್ರಯತ್ನಿಸುತ್ತಿರುವುದು ಶ್ಲಾಘನೀಯ.

—ಪ್ರಕಾಶ್ ಪಿಂಟೋ

ಸೈಕಲ್ ರವಿಯ ಸರೆಂಡರ್ ಮರ್ಮ

ಪಳಗಿದ ಕ್ರಿಮಿನಲ್ ಒಬ್ಬ ತನ್ನಿಂತಾನೇ ಕೋರ್ಟಿಗೆ ಶರಣಾಗಿ ಜೈಲಿಗೆ ಬರುತ್ತಾನೆಂದರೆ ಆತನ ಉದ್ದೇಶ: ಒಂದೋ ತನ್ನ ವಿರೋಧಿಗಳಿಂದ ಬಚಾವಾಗುವುದು ಅಥವಾ ಪೊಲೀಸ್ ಎನ್‌ಕೌಂಟರ್‌ನಿಂದ ಪಾರಾಗುವುದು.


ಆದರೆ ರಕ್ತಪಿಪಾಸು ಸೈಕಲ್ ರವಿ ವಿಷಯದಲ್ಲಿ ಮಾತ್ರ ಈ ಎರಡೂ ಒಟ್ಟೊಟ್ಟಿಗೇ ನೆರವೇರಿದೆ!

ಸಿಕ್ಕರೆ ಆತನನ್ನು ಎನ್‌ಕೌಂಟರ್ ಮಾಡಿ ಕೈತೊಳೆದುಕೊಳ್ಳಲು ಚಿಕ್ಕಪೇಟೆ ಇನ್ಸ್‌ಪೆಕ್ಟರ್ ನಂಜುಂಡೇಗೌಡ ಮತ್ತು ಮಾರ್ಕೆಟ್ ಇನ್ಸ್‌ಪೆಕ್ಟರ್ ರೇವಣ್ಣ ತುದಿಗಾಲಲ್ಲೇ ನಿಂತಿದ್ದರು. ಸಿಸಿಬಿಯ ಎಸಿಪಿ ಬಿ.ಕೆ. ಶಿವರಾಮ್, ಇನ್ಸ್‌ಪೆಕ್ಟರ್ ಬಾಳೇಗೌಡ, ಗಿರಿನಗರದ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ ಹೀಗೆ ಯಾರ ಕೈಗೆ ಸಿಕ್ಕರೂ ಸೈಕಲ್ ರವಿಯ ಎನ್‌ಕೌಂಟರ್ ಗ್ಯಾರಂಟಿಯಾಗಿತ್ತು. ಎಲ್ಲಕ್ಕೂ ಮಿಗಿಲಾಗಿ ಬೆಂಗಳೂರು ಕ್ರಿಮಿನಲ್ ಜಗತ್ತಿನ ಕತ್ರಿಗುಪ್ಪೆ ಲಿಂಗ, ಕಾಟ್ ರವಿ, ಲೇಟಿಟ್ ನವೀನ, ಕೋತಿರಾಮ, ಸೈಲೆಂಟ್ ಸುನೀಲ, ಒಂಟೆ, ವೇದಿ, ಹೀಗೆ ಕೊರಂಗು ಸಿಂಡಿಕೇಟಿನ ಯಾರದೇ ಕಣ್ಣಿಗೆ ಬಿದ್ದಿದ್ದರೂ ಸೈಕಲ್ ರವಿಯ ಕತೆ ಮುಗಿದು ಬಿಡುತ್ತಿತ್ತು.

ಯಮನ ಧೂತರು ತನ್ನ ವೈರಿಗಳ ರೂಪದಲ್ಲಷ್ಟೇ ಅಲ್ಲ, ಪೊಲೀಸರ ವೇಷದಲ್ಲೂ ಬರಲಿದ್ದಾರೆಂಬುದು ಆತನಿಗೆ ಚೆನ್ನಾಗಿ ಗೊತ್ತಿದ್ದರಿಂದಲೇ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿದ್ದ ಯಾವುದೋ ಹಳೇ ಕೇಸಿನ ವಾರಂಟ್ ಹಿಡಿದು ಕೋರ್ಟಿನ ಕಟಕಟೆಗೇ ಬಂದುಬಿಟ್ಟ. ಹಾಗೇ ಅಚಾನಕ್ಕಾಗಿ ಬಂದವನನ್ನು ಜೈಲಿಗೆ ರವಾನಿಸದೇ ನ್ಯಾಯಾಧೀಶರಿಗೆ ಇನ್ನೇನು ತಾನೇ ಉಳಿದಿತ್ತು?

ಸದ್ಯ ಗಿರಿನಗರ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ ನ್ಯಾಯಾಂಗ ಬಂಧನದಲ್ಲಿದ್ದ ಸೈಕಲ್ ರವಿಯನ್ನು ಕರೆತಂದು ಲಿಂಗನ ಶಿಷ್ಯ ಕುಳ್ಳಿ ಶಿವಕುಮಾರನ ಹತ್ಯೆಗೆ ಬಳಸಿದ್ದ ಲಾಂಗು, ಕಾರನ್ನಷ್ಟೇ ಜಪ್ತಿ ಮಾಡಿ ಮತ್ತೆ ಸೇಫಾಗಿ ಆತನನ್ನು ಜೈಲಿಗೆ ಬಿಟ್ಟು ಬಂದಿದ್ದಾರೆ. ಅಲ್ಲಿಗೆ ರವಿ ಇನ್ನು ಯಾವ ಕಾಲಕ್ಕೆ ಹೊರಬರುತ್ತಾನೋ? ಜೈಲಲ್ಲಿದ್ದೇ ಏನೇನು ಅನಾಹುತ ಸೃಷ್ಟಿಸುತ್ತಾನೋ ಬಲ್ಲವರ್‍ಯಾರು?

ಕತ್ರಿಗುಪ್ಪೆ, ಇಟ್ಟಮಡು, ಹೊಸಕೆರೆಹಳ್ಳಿ, ಗಿರಿನಗರ, ಶ್ರೀನಿವಾಸನಗರ ಏರಿಯಾಗಳ ಪ್ರಾಬಲ್ಯಕ್ಕಾಗಿ ನಡೆಯುತ್ತಿರುವ ಸುದೀರ್ಘ ಕಾದಾಟ. ಮೂಲತಃ ಕೆಂಪಾಪುರ ಅಗ್ರಹಾರದ ಮುನಿಯಪ್ಪ ಎಂಬ ತಮಿಳು ಕೂಲಿಯ ಮಗನಾದ ರವಿ ಪ್ರಾರಂಭದಲ್ಲಿ ಸೈಕಲ್ ಪಂಪ್ ಇಟ್ಟುಕೊಂಡಿದ್ದ. ಕ್ರಮೇಣ ಆಟೋ ಓಡಿಸಲಾರಂಭಿಸಿದ. ಸಣ್ಣಪುಟ್ಟ ಗ್ಯಾಂಗ್‌ವಾರ್‌ಗಳಿಗೆ ಎಂಟ್ರಿ ಪಡೆದ. ಅದೇ ಹೊತ್ತಿಗೆ ಕೆಂಪೇಗೌಡ ನಗರದ ಸೂರಿಗೂ ರವಿಯ ಶಿಷ್ಯ ವೆಂಕಿಗೂ ಚಾಮರಾಜಪೇಟೆಯ ಉಮಾ ಟಾಕೀಸ್ ಎದುರು ಸಣ್ಣದೊಂದು ಹೊಡೆದಾಟ ನಡೆದಿತ್ತು. ಅದು ಸಿಂಗಲ್ ನಂಬರ್ ಲಾಟರಿ ಅಡ್ಡೆಯ ವಿಷಯದಲ್ಲಾದ ಜಗಳ. ಭಕ್ಷಿ ಗಾರ್ಡನ್ನಿನ ಕೆಲ ಪೋರ್ಕಿಗಳ ಜೊತೆ ಬಂದ ಸೂರಿ ವೆಂಕಿಯ ಹೊಟ್ಟೆಗೇ ಚುಚ್ಚಿಬಿಟ್ಟ.



ಸೈಕಲ್ ರವಿ

ಅಷ್ಟಕ್ಕೇ ಸೂರಿಯನ್ನು ಎಳೆದೊಯ್ದ ರವಿ ಆತನನ್ನು ಕೊಂದು ಮೂಟೆ ಕಟ್ಟಿ ಮಾಗಡಿ ರೋಡ್ ತಾವರೆಕೆರೆ ಸಮೀಪದ ಕೆರೆಗೆ ಎಸೆದಿದ್ದ. ಅಲ್ಲಿಗೆ ಹತ ಸೂರಿಯ ಅಣ್ಣ ತಿಮ್ಮ ಮತ್ತು ತಮ್ಮ ರಘು ರೆಡಿಯಾದರು. ವೆಂಕಿಯ ಹುಡುಗನೊಬ್ಬನ ಕೈ ಕತ್ತರಿಸಿದರು. ಅಷ್ಟಕ್ಕೇ ರವಿ ಮತ್ತು ವೆಂಕಿ ಗ್ಯಾಂಗ್ ಬನ್ನೇರಘಟ್ಟ ರಸ್ತೆಯ ತನ್ನ ಚಿಕ್ಕಮ್ಮನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ ತಿಮ್ಮನನ್ನು ಅಟ್ಟಾಡಿಸಿ ಕೊಂದು ಹಾಕಿತು. ಅದೇ ಹೊತ್ತಿಗೆ ಕತ್ರಿಗುಪ್ಪೆಯಲ್ಲಿ ಕೊರಂಗು ಶಿಷ್ಯ ಲಿಂಗ ತಲೆ ಎತ್ತಿದ್ದ. ಸಹಜವಾಗೇ ಸೂರಿಯ ತಮ್ಮ ರಘುವನ್ನು ಲಿಂಗ ಬೆಂಬಲಿಸತೊಡಗಿದ. ಮತ್ತೊಂದೆಡೆ ಬನಶಂಕರಿಯ ಅರಸಯ್ಯನ ಜೊತೆ ಸೈಕಲ್ ರವಿ ಕೈಜೋಡಿಸಿದ. ಜೊತೆಗೆ ಶಿವಕಾಳಿ, ಬಳ್ಳಿ, ಯಶವಂತಪುರದ ವೆಂಕಿ, ಕಡಬಗೆರೆ ರಾಮು, ಶಿವಮೊಗ್ಗ ನಾಗ ಇತ್ಯಾದಿಯಾಗಿ ಸೈಲೆಂಟ್ ಸುನೀಲ ಮತ್ತು ಕೊರಂಗು ವಿರೋಧಿ ಪಡೆಯಲ್ಲಿದ್ದವರಿಗೆಲ್ಲ ನಾಯಕನಾಗಿದ್ದವನು ತಿಮ್ಮೇನಹಳ್ಳಿ ಸೂರಿ.

ತಮ್ಮಯ್ಯನ ಕೊಲೆ ಕೇಸಿಂದ ಹೊರಬಂದ ಸೂರಿ ಸೈಕಲ್ ರವಿಯ ಜೊತೆಜೊತೆಗೇ ಓಡಾಡಿಕೊಂಡಿದ್ದ. ಸೈಕಲ್ ರವಿಯನ್ನು ಬೆನ್ನಟ್ಟಿ ಬಂದ ಲಿಂಗನ ಪಡೆಗೆ ಅಚಾನಕ್ಕಾಗಿ ಸಿಕ್ಕ ಸೂರಿ ಮತ್ತು ಟೋನಿ ಬಲಿಯಾದರೂ ರವಿ ಮಾತ್ರ ತನ್ನ ವಿರೋಧಿಗಳಿಗೆ ಚಳ್ಳೆಹಣ್ಣು ತಿನ್ನಿಸಿಕೊಂಡೇ ಬಂದ. ಒಂದು ಮೂಲದ ಪ್ರಕಾರ ಬನಶಂಕರಿಯ ಜಲ್ಲಿ ವೆಂಕಟೇಶನ ಕೊಲೆ, ಕಾಟನ್‌ಪೇಟೆಯ ಡ್ರೈವರ್ ರವಿಯ ಹತ್ಯೆ, ದೀಡಿ ರವಿಯ ತಮ್ಮ ಉಮಾಶಂಕರನ ಕೊಲೆ; ಹೀಗೆ ಪೊಲೀಸರಿಗೆ ಗೊತ್ತೇ ಆಗದೇ ಬೆಂಗಳೂರು ಅಂಡರ್‌ವರ್ಲ್ಡ್‌ನ ಅನೇಕ ಹತ್ಯೆಗಳಲ್ಲಿ ರವಿಯ ಪಾತ್ರವಿದೆ. ಆದರೆ ಸೂರಿ, ಆತನ ಅಣ್ಣ ತಿಮ್ಮ ಮತ್ತು ಗಿರಿನಗರದ ಚಿಕ್ಲಿಯ ಹತ್ಯೆಗಳ ಹೊರತಾಗಿ ಬೇರೆ ಯಾವುದರಲ್ಲೂ ರವಿ ಕೇಸಿಗೆ ಫಿಟ್ಟಾಗಲಿಲ್ಲ.

ಯಾವತ್ತು ಲಿಂಗನ ಶಿಷ್ಯ ಶಿವಕುಮಾರ್ ಆಲಿಯಾಸ್ ಕುಳ್ಳಿಯನ್ನು ಸೈಕಲ್ ರವಿ ಗ್ಯಾಂಗ್ ಕೊಂದು ಹಾಕಿತೋ

ವೃದ್ಧ ಕಚ್ಚೆಹರುಕನಿಂದ ಮುಗ್ಧ ಹುಡುಗಿಯ ಕಿಡ್ನಾಪ್!




ಅನ್ನಪೂರ್ಣ

ಹೌದು. ನಾಡಿಗೆ ಭಾವೈಕ್ಯತೆಯನ್ನು ಸಾರಿದ ಸಂತ ಶಿಶುನಾಳ ಷರೀಫರು ನಡೆದಾಡಿದ ಸವಣೂರಿನಲ್ಲಿ ಇಂತಹದ್ದೊಂದು ಕ್ರೌರ್ಯ ನಡೆದುಹೋಗಿದೆ. ದುಡ್ಡಿನ ದರ್ಪದಲ್ಲಿ ಮೆರೆಯುತ್ತಾ ಕಂಡಕಂಡ ಅಮಾಯಕ ಕುಟುಂಬದ ಹೆಂಗಳೆಯರ ಮಾನ ತೆಗೆಯುತ್ತಲೇ ಅರವತ್ತು ವರ್ಷಗಳನ್ನು ಕಳೆದ ಹರಾಮಿ ಕಚ್ಚೆ ಹರುಕ ಮುದುಕ ನಿಪ್ಪಾಣಿ ಬಾಬು ಹದಿನೆಂಟರ ಹರೆಯದ ಅನ್ನಪೂರ್ಣ ಎಂಬ ಹುಡುಗಿಯನ್ನು ಕಿಡ್ನಾಪ್ ಮಾಡಿಕೊಂಡು ಎಸ್ಕೇಪ್ ಆಗಿದ್ದಾನೆ. ಘಟನೆ ನಡೆದು ಬರೋಬ್ಬರಿ ಒಂದು ತಿಂಗಳಾದರೂ ಅವನನ್ನು ಬಂಧಿಸುವುದಕ್ಕೆ ಸವಣೂರಿನ ನರಸತ್ತ ಪೊಲೀಸರಿಗೆ ಆಗಿಲ್ಲ. ಕಿಡ್ನಾಪ್ ಮಾಡಿದವನು ಮುಸ್ಲಿಮ್ ಸಮುದಾಯಕ್ಕೆ ಸೇರಿದವನು ಹಾಗೂ ಕಿಡ್ನಾಪ್ ಆದವಳು ಹಿಂದೂ ಸಮುದಾಯಕ್ಕೆ ಸೇರಿದವಳು ಎಂಬುದನ್ನೇ ನೆಪ ಮಾಡಿಕೊಂಡು ಹಿಂದೂ ಲಾಡೆನ್ ಪ್ರಮೋದ್ ಮುತಾಲಿಕ್ ಹಾಗೂ ಬಾಂಬ್ ಎಸ್ಸೈ ಗಿರೀಶ್ ಮಟ್ಟಣ್ಣನವರ್ ಸವಣೂರಿಗೆ ಕೋಮುದಳ್ಳುರಿ ಹಚ್ಚಲು ಸ್ಕೆಚ್ ಹಾಕಿದ್ದಾರೆ. ಇನ್ನೊಂದೆಡೆಗೆ ಬಿಜೆಪಿ ಶಾಸಕರ ಹಿರಿಯಣ್ಣ ಸಿ.ಎಮ್. ಉದಾಸಿ ಎಂಬ ಮುದುಕ ಮತ್ತು ಶಾಸಕ ರಾಜಶೇಖರ್ ಸಿಂಧೂರ್ ತಮಗೂ ಸವಣೂರಿಗೂ ಏನೇನೂ ಸಂಬಂಧವೇ ಇಲ್ಲವೇನೋ ಎಂಬಂತೆ ಸೈಲೆಂಟಾಗಿ ಕುಳಿತಿದ್ದಾರೆ.

ಅದು ನಡೆದದ್ದು ಹೀಗೆ...

ಬಾಬು ನಿಪ್ಪಾಣಿ ಆಲಿಯಾಸ್ ಅತ್ತಾವುಲ್ಲಾ ಖಾನ್‌ನ ಕಚ್ಚೆ ಹರುಕ ಕ್ರೌರ್ಯಗಳನ್ನು ಬರೆಯುತ್ತಾ ಹೋದರೆ ಅದೇ ಒಂದು ದೊಡ್ಡ ಗ್ರಂಥವಾಗುತ್ತದೆ. ತನಗಿರುವ ತಕ್ಕಮಟ್ಟಿನ ಸಿರಿವಂತಿಕೆಯನ್ನೇ ಬಳಸಿ ಅಮಾಯಕ ಹೆಂಗಳೆಯರ ಬಾಳು ಹಾಳು ಮಾಡಿರುವ ಹೀನಚರಿತ್ರೆ ಈತನಿಗಿದೆ. ಬಡ ಕುಟುಂಬಗಳಿಗೆ ಸಾಲ ಕೊಡುವುದು; ಸಾಲಕ್ಕೆ ಬಡ್ಡಿ, ಚಕ್ರ ಬಡ್ಡಿ, ಮೀಟರ್ ಬಡ್ಡಿ ಸೇರಿಸಿ ಸಾಲ ಪಡೆದವನು ಮುಂದೆಂದೂ ಅದನ್ನು ತೀರಿಸಲಾಗದಂತೆ ಮಾಡುವುದು; ಕೊನೆಗೆ ಅವನ ಮನೆಯ ಅಮಾಯಕ ಹೆಂಗಳೆಯರನ್ನು ತನ್ನ ಕಾಮತೀಟೆಯನ್ನು ತೀರಿಸಿಕೊಳ್ಳಲು ಬಳಸಿಕೊಳ್ಳುವುದು – ಇದು ಬಾಬು ನಿಪ್ಪಾಣಿಯ ಕಾಮತಂತ್ರ. ಮೊನ್ನೆ ಹದಿನೆಂಟರ ಪ್ರಾಯದ ಅನ್ನಪೂರ್ಣಳನ್ನು ಅಪಹರಿಸುವುದಕ್ಕೆ ಈತ ಬಳಸಿದ್ದೂ ಇದೇ ತಂತ್ರವನ್ನು.



ಬಾಬು ನಿಪ್ಪಾಣಿ

ಸವಣೂರಿನ ಚಿಕ್ಕ ಗೂಡಂಗಡಿಯಲ್ಲಿ ಹೋಟೆಲ್ ನಡೆಸುತ್ತಿರುವ ರಮೇಶ್ ಹಿರೇಣ್ಣನವರ್ ಮತ್ತು ಸಾವಿತ್ರಮ್ಮ ಎಂಬ ದಂಪತಿಗಳ ಕೊನೆಯ ಮಗಳೇ ಅನ್ನಪೂರ್ಣ. ಇವಳ ಮೇಲೆ ಕಣ್ಣು ಹಾಕಿದ ನಿಪ್ಪಾಣಿ ಬಾಬು ಅವಳನ್ನು ಹೇಗಾದರೂ ಮಾಡಿ ಹರಿದು ಮುಕ್ಕುವ ಸ್ಕೆಚ್ ಹಾಕಿ ತೀರ ಬಡತನದಲ್ಲಿರುವ ಅವಳ ತಂದೆಗೆ ನಲವತ್ತು ಸಾವಿರ ರೂಪಾಯಿಗಳ ಸಾಲವನ್ನು ಕೊಟ್ಟಿದ್ದ. ತನಗೂ ಹಣದ ಅಗತ್ಯವಿದ್ದುದರಿಂದ ರಮೇಶ್ ಹಿರೇಣ್ಣನವರ್ ಸಾಲ ಪಡೆದಿದ್ದಾನೆ; ಕಷ್ಟ ಕಾಲಕ್ಕೆ ಸಹಾಯ ಮಾಡಿದನಲ್ಲ ಎಂದು ಅವನ ಬಗ್ಗೆ ವಿಶೇಷ ಗೌರವ ಬೆಳೆಸಿಕೊಂಡಿದ್ದಾನೆ. ಅಷ್ಟೇ ಅಲ್ಲ, ನಿಪ್ಪಾಣಿ ಬಾಬುನ ಕಚ್ಚೆ ಹರುಕ ಬುದ್ಧಿಯ ಬಗ್ಗೆ ಗೊತ್ತಿರದ ಈತ ಅವನನ್ನು ಸಂಪೂರ್ಣವಾಗಿ ನಂಬಿ ಅವನಿಗೆ ತನ್ನ ಮನೆಯ ಹಿರಿಯಣ್ಣನ ಸ್ಥಾನ ಕೊಟ್ಟಿದ್ದಾನೆ. ಮುಂದೊಂದು ದಿನ ಇದೇ ನಿಪ್ಪಾಣಿ ಬಾಬು ಎಂಬ ಕಾಮುಕ ತನ್ನ ಮನೆಗೆ ಮುಳ್ಳಾಗುತ್ತಾನೆಂದು ಪಾಪ ಆತನಿಗೆ ಗೊತ್ತಾಗಲೇ ಇಲ್ಲ.

ರಮೇಶ್ ಹಿರೇಣ್ಣನವರ್ ಕುಟುಂಬ ಇಟ್ಟಿದ್ದ ವಿಶ್ವಾಸಕ್ಕೆ ನಿಪ್ಪಾಣಿ ಬಾಬು ದ್ರೋಹವೆಸಗಿಬಿಟ್ಟ. ಬಿ.ಎ. ಪ್ರಥಮ ವರ್ಷದಲ್ಲಿ ಓದುತ್ತಿರುವ ಅನ್ನಪೂರ್ಣ ದಿನಾಲು ಬೆಳಗ್ಗೆ ಐದೂವರೆ-ಆರು ಗಂಟೆಯ ಹೊತ್ತಿಗೆ ತಂದೆ ನಡೆಸುತ್ತಿದ್ದ ಟೀ ಸ್ಟಾಲ್‌ಗೆ ಹೋಗಿ ಸಹಾಯಕ್ಕೆ ನಿಲ್ಲುತ್ತಿದ್ದಳು. ಸಮಯ ಸಾಧಿಸಿದ ನಿಪ್ಪಾಣಿ ಬಾಬು ಈಗ್ಗೆ ಒಂದು ತಿಂಗಳ ಹಿಂದೆ ಆಕೆ ತನ್ನ ತಾಯಿಯೊಂದಿಗೆ ಟಿ ಸ್ಟಾಲ್‌ಗೆ ಹೊರಟದ್ದಾಗ ಮಾರ್ಗ ಮಧ್ಯದಲ್ಲಿಯೇ ಅಂಬಾಸಿಡರ್ ಕಾರಿನಲ್ಲಿ ಬಂದು ಆಕೆಯನ್ನು ಎತ್ತಾಕಿಕೊಂಡು ಹೋಗೇಬಿಟ್ಟ.

ನಾಮರ್ಧ ಪೊಲೀಸರು

ದೋಸ್ತನ ದುಷ್ಮನ್‌ಗಿರಿ ಕಂಡ ರಮೇಶ್ ಹಿರೇಣ್ಣನವರ್ ಕಂಗಾಲಾಗಿ ಹೋಗಿದ್ದಾರೆ. ಮಗಳನ್ನು ಹುಡುಕುವ ಪ್ರಯತ್ನ ಮಾಡಿದರಾದರೂ ಅದು ಫಲಕಾರಿಯಾಗಲಿಲ್ಲವಾದ್ದರಿಂದ ಸವಣೂರು ಪೊಲೀಸರಲ್ಲಿ ಹೋಗಿ ಲಿಖಿತ ದೂರನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ನಿಪ್ಪಾಣಿ ಬಾಬುನನ್ನು ಬಂಧಿಸುವುದಕ್ಕೆ ಬೇಕಾದ ಅಗತ್ಯ ಮಾಹಿತಿಯನ್ನೂ ಅವರಿಗೆ ಒದಗಿಸಿದ್ದಾರೆ. ನಿಪ್ಪಾಣಿ ಪೊಲೀಸರು ಒಂದಿಷ್ಟು ಚಾಣಾಕ್ಷರಾಗಿದ್ದಿದ್ದರೆ, ಅದಕ್ಕಿಂತ ಹೆಚ್ಚಾಗಿ ಅವರಿಗೆ ಅಪರಾಧಿಯನ್ನು ಹಿಡಿಯಬೇಕು ಎಂಬ ದರ್ದು ಇದ್ದಿದ್ದರೆ ಬೆಳಕು ಹರಿಯುವುದರೊಳಗಾಗಿ ಕಚ್ಚೆಹರುಕ ಬಾಬುವನ್ನು ಬಂಧಿಸಿ ಚೆಂಡೆತ್ತಿಬಿಡಬಹುದಿತ್ತು. ಆದರೆ ಎಸ್ಸೈ ಪಾಟೀಲ್ ಎಂಬ ದರಿದ್ರ ನಿದ್ದೆಯಿಂದೆದ್ದು ಕಣ್ಣೊರೆಸಿಕೊಂಡು ಹೋಗುವಷ್ಟರಲ್ಲಿ ನಿಪ್ಪಾಣಿ ಬಾಬು ಜಾಗ ಖಾಲಿ ಮಾಡಿಯಾಗಿತ್ತು.

ಪೊಲೀಸರ ನಿರ್ಲಕ್ಷ್ಯ ಕಂಡು ಸವಣೂರಿನ ಸಾರ್ವಜನಿಕರು ಉಗಿಯತೊಡಗಿದರು. ಆಗ ಪೊಲೀಸರು "ಗೋವಾದಲ್ಲಿ, ಕಾರವಾರದಲ್ಲಿ ಹುಡುಕುತ್ತಿದ್ದೇವೆ" ಎಂದು ಹೇಳುತ್ತಾ ಕೈಬೆಚ್ಚಗೆ ಮಾಡಿಕೊಂಡು ಕುಳಿತರು. ಯಾವಾಗ ಸವಣೂರಿನ ಜನ ಪ್ರತಿಭಟಿಸತೊಡಗಿದರೋ ಇದ್ದಕ್ಕಿದ್ದಂತೆ ಎಚ್ಚರಗೊಂಡ ಸಿಪಿಐ ಗುರು, ನಿಪ್ಪಾಣಿಯನ್ನು ಹಿಡಿಯುವ ನೆಪವೊಡ್ಡಿ ಗುಜರಾತ್, ದೆಹಲಿ ಅಂತ ಪ್ರವಾಸ ಮಾಡುತ್ತಿದ್ದಾನೆ. ಇನ್ನು ಡಿವೈಎಸ್ಪಿ ದಯಾನಂದ, ಸವಣೂರಿನ ಪೊಲೀಸರ ಪುಂಡಾಟಿಕೆಗೆ ಟಾನಿಕ್ ಹಾಕುತ್ತಾ ಪ್ರಕರಣ ಕುರಿತು ಮಾಹಿತಿ ಕೇಳುವ ಪತ್ರಕರ್ತರ ವಿರುದ್ಧ ಹರಿಹಾಯುತ್ತಿದ್ದಾನೆ.

ಘಟನೆ ನಡೆದು ಒಂದು ತಿಂಗಳಾಯಿತು. ನಿಪ್ಪಾಣಿ ಬಾಬುವಾಗಲೀ, ಅನ್ನಪೂರ್ಣಳಾಗಲೀ ಈತನಕ ಪತ್ತೆ ಇಲ್ಲ. ದಕ್ಷ ಎಸ್ಪಿ ಎಂದೇ ಹೆಸರು ಮಾಡಿರುವ ಡಾ. ಜಿ. ರಮೇಶ್ ಏನು ಮಾಡುತ್ತಿದ್ದಾರೆ?

ನತ್ತುಲಾಲ್ ನಿಪ್ಪಾಣಿಯ ವೃತ್ತಾಂತ

ಅರವತ್ತರ ಮುದುಕ ನಿಪ್ಪಾಣಿಯ ಚರಿತ್ರೆಯಲ್ಲಿ ಇಂತಹ ಘನಂದಾರಿ ಕೆಲಸಗಳಿಂದಲೇ ತುಂಬಿದೆ. ಈಗ್ಗೆ ಬಹಳ ವರ್ಷಗಳ ಹಿಂದೆ ರಸ್ತೆ ರಿಪೇರಿ ಕೆಲಸಕ್ಕೆಂದು ಬಂದಿದ್ದ ಕೂಲಿಕಾರ ಯುವತಿಯೊಬ್ಬಳನ್ನು ಅತ್ಯಾಚಾರ ಮಾಡಿದ್ದ. ಜನರೆಲ್ಲ ಒಗ್ಗಟ್ಟಾಗಿ ಗೂಸ ತಿನ್ನಿಸಿ ಕೊನೆಗೆ ಆ ಯುವತಿಯನ್ನೇ ಮದುವೆಯಾಗುವಂತೆ ಮಾಡಿದ್ದರು. ತನ್ನ ತೋಟಗಳಲ್ಲಿ ಅದೆಷ್ಟು ಹುಡುಗಿಯರನ್ನು ಹರಿದು ಮುಕ್ಕಿದ್ದಾನೋ ಪ್ರಾಯಶಃ ಅವನಿಗೇ ಲೆಕ್ಕವಿರಲಿಕ್ಕಿಲ್ಲ. ಕಳೆದ ವರ್ಷ ತಮ್ಮದೇ ಸಮುದಾಯದ ಯುವತಿಯೊಬ್ಬಳನ್ನು ದಾರಿ ಮಧ್ಯದಲ್ಲಿಯೇ ಎಳೆದಾಡಿದ್ದಕ್ಕೆ ಯುವಕರೆಲ್ಲಾ ಸೇರಿ ಈತನ ತಲೆ ಬೋಳಿಸಿ, ಕೊರಳಿಗೆ ಚಪ್ಪಲಿ ಹಾರ ಹಾಕಿ ಬೀದಿಯಲ್ಲಿ ಮೆರವಣಿಗೆ ಮಾಡಿದ್ದರು.

ಗೋರಿಗೆ ಸೇರುವ ಅಂಚಿನಲ್ಲಿರುವ ನಿಪ್ಪಾಣಿ ಬಾಬುಗೆ ನಾಲ್ಕು ಗಂಡು, ನಾಲ್ಕು ಹೆಣ್ಣು ಹೀಗೆ ಒಟ್ಟು ಎಂಟು ಜನ ಮಕ್ಕಳಿದ್ದಾರೆ. ಆದರೆ, ತನ್ನ ಸೈತಾನಗಿರಿಯಿಂದ ಮರ್ಯಾದಸ್ತ ಕುಟುಂಬಗಳ ಮಾನ ಹಾಳು ಮಾಡುವ ಕೆಲಸ ಮಾತ್ರ ಬಿಟ್ಟಿಲ್ಲ. ಕಂಡಕಂಡಲ್ಲಿ ಜೊಲ್ಲು ಸುರಿಸುವ ಈತನನ್ನು ಮುಸ್ಲಿಮ್ ಸಮುದಾಯ ಅಘೋಷಿತವಾಗಿ ಬಹಿಷ್ಕರಿಸಿದೆ. ಯಾವುದೇ ಮುಸ್ಲಿಮರು ಇವನ ಮನೆಗೆ ಹೋಗುವುದಾಗಲೀ, ಇವನನ್ನು ತಮ್ಮ ಮನೆಗೆ ಕರೆಯುವುದಾಗಲೀ ಮಾಡುವುದೇ ಇಲ್ಲ.

ಬಾಬುಗೆ ಪೊಲಿಟಿಕಲ್ ಸಪೋರ್ಟ್

ಸವಣೂರಿನಲ್ಲಿ ತನ್ನ ಕಚ್ಚೆ ಹರುಕ ಕೃತ್ಯಗಳೊಂದಿಗೆ ಅರವತ್ತು ವರ್ಷ ಸವೆಸಿರುವ ನಿಪ್ಪಾಣಿ ಬಾಬುಗೆ ಪೊಲಿಟಿಕಲ್ ಸಪೋರ್ಟ್‌ಗೇನೂ ಕಡಿಮೆ ಇಲ್ಲ. ತನ್ನ ಬಡ್ಡಿ ದಂಧೆಗೆ ರಕ್ಷಾಕವಚದಂತಿರಲಿ ಎಂದು ಒಂದಿಷ್ಟು ಪುಡಿ ರಾಜಕಾರಣಿಗಳನ್ನೂ ಸಾಕಿ ಬೆಳೆಸಿದ್ದಾನೆ. ತಿಂದ ಎಂಜಲಿಗೆ ಪ್ರತಿಯಾಗಿ ಇವರು ಬಾಬು ಮಾಡುವ ಎಲ್ಲ ಹಲ್ಕಟ್ ಕೆಲಸಕ್ಕೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಸಹಕರಿಸುತ್ತಿರುತ್ತಾರೆ.

ಅನ್ನಪೂರ್ಣಳ ಅಪಹರಣದ ಪ್ರಕರಣವನ್ನೇ ನೋಡಿ, ಈ ಅಪಹರಣಕ್ಕೆ ಎಲ್ಲ ರೀತಿಯ ಸಹಾಯವನ್ನು ಒದಗಿಸಿದವನು ಬೇರೆ ಯಾರೂ ಅಲ್ಲ, ಹಿಂದಿನ ಅವಧಿಯಲ್ಲಿ ಇಡೀ ಸವಣೂರು ಪುರಸಭೆಯನ್ನು ಗುರಿ

ಲಿಂಗನ ಶಿಷ್ಯ ರಘು, ಪವನ್, ದೀಪು ಗ್ಯಾಂಗ್ ಕಟ್ಟಿಕೊಂಡು ಗಣೇಶನ ಹಬ್ಬದ ದಿನವೇ ರವಿಯ ಬಂಟ ವೆಂಕಿಯನ್ನು ಕೊಂದು ಹಾಕಿದರು. ಅಲ್ಲಿಗೆ ಸೈಕಲ್ ರವಿ ಗ್ಯಾಂಗಿನ ಆಧಾರಸ್ತಂಭವೇ ಉರುಳಿ ಬಿದ್ದಂತಾಗಿತ್ತು. ವೆಂಕಿಯ ಹತ್ಯೆಗೆ ಪ್ರತಿಯಾಗಿ ಲಿಂಗನಿಗೆ ದೊಡ್ಡ ಪೆಟ್ಟನ್ನೇ ಕೊಡಲು ಅಣಿಯಾದ ರವಿ ಜ್ಞಾನಭಾರತಿ ಭಾಸ್ಕರ, ಬಾಬು, ಮೆಕ್ಯಾನಿಕ್ ನವೀನ, ಸಂಜಯ, ಸೂಲಿಬೆಲೆ ಸಂತೋಷ ಮುಂತಾದ ಯಾವ್ಯಾವುದೋ ಏರಿಯಾದ ಹುಡುಗರನ್ನು ಸೆಟ್ ಮಾಡಿ ರೌಂಡಿಂಗಿಗೆ ಬಿಟ್ಟಿದ್ದ. ವೆಂಕಿಯ ಹತ್ಯೆಗೆ ಪ್ರತಿಯಾಗಿ ಲಿಂಗನ ಬಂಟ ಪವನ್ ಅಥವಾ ಹತ ಸೂರಿಯ ತಮ್ಮ ರಘುವನ್ನು ಮುಗಿಸುವುದು ರವಿ ಉದ್ದೇಶವಾಗಿತ್ತಾದರೂ ಪವನ್ ಮತ್ತು ರಘು ಗಿರಿನಗರ ಪೊಲೀಸರಿಗೆ ಸರೆಂಡರಾಗಿ ಸೇಫಾಗಿದ್ದಾರೆ.


ಅರಸಯ್ಯ

ಅವರು ಸಿಗದಿದ್ದರೇನಂತೆ ಸರ್ಕಲ್ ಗಿರಿಯನ್ನಾದರೂ ಮುಗಿಸಿ ಬಿಡಿ ಎಂದು ರವಿ ತನ್ನ ಬಂಟರಿಗೆ ಆದೇಶಿಸಿದ್ದಾನೆ. ಇದು ಹೇಗೋ ಇನ್ಸ್‌ಪೆಕ್ಟರ್‌ಗಳಾದ ನಂಜುಂಡೇಗೌಡ ಮತ್ತು ರೇವಣ್ಣರ ಕಿವಿಗೆ ಬಿದ್ದು ಸರ್ಕಲ್ ಗಿರಿಯನ್ನು ಕೊಲ್ಲಲು ಹೊಂಚ ಕೂತಿದ್ದ ಭಾಸ್ಕರ, ಅಮೃತಹಳ್ಳಿ ರಾಜ, ನವೀನ, ಸೀನ, ಸಂಜಯ, ಸೂಲಿಬೆಲೆ ಸಂತೋಷ ಮುಂತಾದವರನ್ನು ಹಿಡಿದು ಜೈಲಿಗೆ ಹಾಕಿದ್ದಾರೆ. ಹುಷಾರಾದ ರವಿ ಎಸ್ಕೇಪಾಗಿದ್ದಾನೆ.

ಬಹುಶಃ ಸಿಕ್ಕಿದ್ದರೆ ಆವತ್ತೇ ಸೈಕಲ್ ರವಿಯ ಎನ್‌ಕೌಂಟರ್ ಆಗಿಬಿಡುತ್ತಿತ್ತೇನೊ. ಹಾಗೇ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸಿ ರೌಂಡಿಂಗ್ ಮಾಡಿಕೊಂಡೇ ಇದ್ದ ರವಿಗಾಗಿ ಇನ್ನೊಂದೆಡೆ ಲಿಂಗ ಬಲೆ ಹಾಕಿದ್ದಾನೆ.

ಹೆಣ್ಣೂರಿನ ಪಟಾಲಮ್ಮ ದೇವಸ್ಥಾನಕ್ಕೆ ಪೂಜೆಗೆಂದು ಪ್ರತಿ ಸೋಮವಾರ ರವಿ ಒಬ್ಬಂಟಿಯಾಗಿ ಬರುತ್ತಾನೆಂಬ ಮಾಹಿತಿ ಕಲೆ ಹಾಕಿದ ಲಿಂಗ ಚಿತ್ರದುರ್ಗ ಜೈಲಲ್ಲೇ ಕೂತು ಗಾಳಿ ರವಿಯನ್ನು ಛೂ ಬಿಟ್ಟಿದ್ದಾನೆ. ಎಲ್ಲಾ ಸಿದ್ಧತೆ ಮಾಡಿಕೊಂಡೇ ಗಾಳಿ ರವಿ ಆರು ಮಂದಿ ಬಂಟರುಗಳ ಜೊತೆ ಹೆಣ್ಣೂರಿನ ದೇವಸ್ಥಾನದ ಬಳಿ ಸೈಕಲ್ ರವಿಗಾಗಿ ಕಾದು ಕೂತಿದ್ದ. ಆವತ್ತು ರವಿ ಮಾತ್ರ ಬರಲೇ ಇಲ್ಲ. ಆದರೆ ಬಂದದ್ದು ಸಿಸಿಬಿಯ ಎಸಿಪಿ ಶಿವರಾಮ್ ಪಡೆ. ಗಾಳಿ ರವಿಯ ಇಡೀ ಗ್ಯಾಂಗ್ ಪೊಲೀಸರಿಗೆ ಸೆರೆಸಿಕ್ಕಿ ಜೈಲಿನ ಪಾಲಾಯಿತು.

ಅಲ್ಲಿಗೆ ಒಂದೋ ತನ್ನ ಎದುರಾಳಿಗಳಿಗೆ ತಾನು ಬಲಿಯಾಗುತ್ತೇನೆ ಅಥವಾ ಪೊಲೀಸರ ಗುಂಡಿಗೆ ಆಹುತಿಯಾಗುತ್ತೇನೆಂಬುದು ಸೈಕಲ್ ರವಿಗೆ ಖಾತರಿಯಾಗಿದೆ. ಉಳಿದದ್ದು ಒಂದೇ ದಾರಿ. ಕೋರ್ಟಿಗೆ ಸರೆಂಡರಾಗುವುದು. ಅದಕ್ಕೆ ಜ್ಞಾನಭಾರತೀಯ ಯಾವುದೋ ಹಳೇ ವಾರಂಟನ್ನೇ ಬಳಸಿ ಕೋರ್ಟಿಗೆ ಬಂದಿದ್ದೇ ಕಟಕಟೆಯಲ್ಲಿ ನಿಂತಿದ್ದಾನೆ.

ಒಮ್ಮೆ ಕೋರ್ಟಿನಿಂದ ಪೊಲೀಸ್ ವಶಕ್ಕೆ ಬಂದನೆಂದರೆ ಅದೆಂಥಾ ಅಧಿಕಾರಿಯಾದರೂ ಎನ್‌ಕೌಂಟರ್‌ಗೆ ಕೈಹಾಕಲಾರ. ಸದ್ಯ ಗಿರಿನಗರ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ ವಿಧಿಯಿಲ್ಲದೇ ಆತನಿಂದ ಕಾರು, ಲಾಂಗು ವಶಪಡಿಸಿಕೊಂಡಂತೆ ಮಾಡಿ ಮತ್ತೆ ಜೈಲಿಗೇ ಸಾಗಹಾಕಿದ್ದಾರೆ.

ಪಾಪಿ ಚಿರಾಯು. ಜೈಲಲ್ಲಿ ಕೂತು ಇನ್ನು ಏನೆಲ್ಲಾ ಅನಾಹುತ ಮಾಡುತ್ತಾನೋ ಬಲ್ಲವರ್‍ಯಾರು?


■ ರಾ. ಸೋಮನಾಥ್

ಗುಂಡಾಂತರ ಮಾಡಿದ ಕೀರ್ತಿ ಕಟ್ಟಿಕೊಂಡ ಮಾಜಿ ಸದಸ್ಯ ಈರಣ್ಣ ಚೌರದ. ಅಕ್ಟೋಬರ್ ಆರರಂದು ಬಾಬು ನಿಪ್ಪಾಣಿ ಅನ್ನಪೂರ್ಣಳನ್ನು ಕಿಡ್ನಾಪ್ ಮಾಡುವುದಕ್ಕೆ ಅಂಬಾಸಿಡರ್ ಕಾರನ್ನು (ಕೆಎ-೨೫; ಎಮ್೨೬೯೬) ಕೊಟ್ಟವನೂ ಇವನೇ. ಅಷ್ಟೇ ಅಲ್ಲ, ಕಾರು ಚಾಲನೆ ಮಾಡಲು ದಿಲೇರ್ ಸೌದಾಗರ್ ಎಂಬ ಡ್ರೈವರನ್ನೂ ಜೊತೆಗೆ ಕಳಿಸಿಕೊಟ್ಟಿದ್ದಾನೆ.


ಅಜ್ಜು

ನಿಪ್ಪಾಣಿ ಬಾಬು ಶಹರದ ಅಮಾಯಕ ಹುಡುಗಿಯೊಬ್ಬಳನ್ನು ತನ್ನ ತೀಟೆ ತೀರಿಸಿಕೊಳ್ಳಲು ಕಿಡ್ನಾಪ್ ಮಾಡಲು ಹೊರಟಿದ್ದಾನೆ ಎಂದು ಗೊತ್ತಿದ್ದೂ ಗೊತ್ತಿದ್ದೂ ಇಷ್ಟೆಲ್ಲ ವ್ಯವಸ್ಥೆ ಮಾಡಿ ಕಳಿಸುತ್ತಾನೆಂದರೆ ಈರಣ್ಣ ಅವನಿಂದ ಎಷ್ಟರ ಮಟ್ಟಿಗೆ ಎಂಜಲು ತಿಂದಿರಬಹುದು ನೀವೇ ಯೋಚಿಸಿ. ಯಾರಾದರೂ ಈ ಬಗ್ಗೆ ಕೇಳಿದರೆ 'ನನಗೇನೂ ಗೊತ್ತಿಲ್ಲ, ನನ್ನ ಕಾರು ಕಳೆದುಹೋಗಿದೆ' ಎಂದು ಜಾರಿಕೊಳ್ಳಲು ಪ್ರಯತ್ನಿಸುವ ಈತ ತನ್ನ ಕಾರು ಕಳೆದು ಒಂದು ತಿಂಗಳಾದರೂ ದೂರನ್ನೇಕೆ ಕೊಡಲಿಲ್ಲ ಎಂಬ ಪ್ರಶ್ನೆಗೆ ಈತನಲ್ಲಿ ಉತ್ತರವಿಲ್ಲ.

ಇವನನ್ನು ಒದ್ದು ಒಳಗೆ ಹಾಕಿ ಬಾಯಿಬಿಡಿಸಿದರೆ ನಿಪ್ಪಾಣಿ ಬಾಬೂನೂ ಸಿಗುತ್ತಾನೆ, ಅನ್ನಪೂರ್ಣಳೂ ಸಿಗುತ್ತಾಳೆ. ಆದರೆ, ಸವಣೂರು ಪೊಲೀಸರು ಅದಕ್ಕೆ ತಯಾರಾಗಬೇಕಲ್ಲ? ಏಕೆಂದರೆ, ಬಾಬು ನಿಪ್ಪಾಣಿಯಿಂದ ಈರಣ್ಣ ಎಷ್ಟರಮಟ್ಟಿಗೆ ಎಂಜಲು ತಿಂದಿದ್ದಾನೋ ಅದಕ್ಕಿಂತಲೂ ಹೆಚ್ಚು ಎಸ್ಪಿ ಪಾಟೀಲ್ ಮತ್ತು ಸಿಪಿಐ ಗುರು ಮತ್ತೂರ್ ತಿಂದಿರುತ್ತಾರೆ.


ಮುತಾಲಿಕ್

ಕಿಡ್ನಾಪ್‌ಗಾಗಿ ಬಳಸಿದ ಕಾರು ನವೆಂಬರ್ ಒಂದರಂದು ಕಾರವಾರ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಕಿರವತ್ತಿ ಗ್ರಾಮದ ಇಕ್ಬಾಲ್ ರೈಸ್‌ಮಿಲ್‌ನ ಎದುರಿಗೆ ಸಿಕ್ಕಿದೆ. ಆದರೆ, ಅದರ ಚಾಲಕ ದಿಲೇರ್‌ನಾಗಲೀ, ಅಪರಾಧಿ ನಿಪ್ಪಾಣಿ ಬಾಬುನಾಗಲೀ ಅಥವಾ ಅನ್ನಪೂರ್ಣ ಆಗಲಿ ಈವರೆಗೆ ಪತ್ತೆಯಿಲ್ಲ.

ಬಾಬುನೇ ಕಾಂಗ್ರೆಸ್‌ನ 'ಬಿ' ಫಾರ್ಮ್ ಹಂಚಿದ್ದು

ಇನ್ನೊಂದು ವಿಷಯ ಎಂದರೆ ಮೊನ್ನೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸವಣೂರು ಉಸ್ತುವಾರಿಯನ್ನು ಹೊತ್ತವನು ಇದೇ ನಿಪ್ಪಾಣಿ ಬಾಬು. ಕಂಡಕಂಡವರಿಗೆ 'ಬಿ' ಫಾರ್ಮ್‌ಗಳನ್ನು ಬಿಕರಿ ಮಾಡಿ ಹಣ ಮಾಡಿಕೊಂಡಿದ್ದೂ ಅಲ್ಲದೆ, ತನಗೆ ಇಡೀ ಕಾಂಗ್ರೆಸ್ ಪಕ್ಷದ ಬೆಂಬಲವಿದೆ ಎಂದುಕೊಂಡು ಹುಡುಗಿಯರನ್ನು ಹಿಡಿದು ಮುಕ್ಕುವ ತನ್ನ ಹಳೆ ಚಾಳಿಯನ್ನು ಮತ್ತಷ್ಟು ಬಿರುಸಿನಿಂದ ಮುಂದುವರೆಸಿದ್ದ. ಸ್ಥಳೀಯ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಚಂದ್ರಶೇಖರ್ ಎಮ್ ಬೆಣ್ಣಿ ಮತ್ತು ರಶೀದ್ ಖಾನ್ ದಂಬಳನಂತಹ ಕಾಂಗ್ರೆಸ್ ಲೀಡರುಗಳು ಹಾಗೂ ಸಯ್ಯದ್ ಅಜ್ಜಂಪುರ ಎಸ್ ಖಾದ್ರಿಯಂತಹ ಪುಢಾರಿಗಳು ನಿಪ್ಪಾಣಿ ಬಾಬುನ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿರುವುದು ಕಾಂಗ್ರೆಸ್ ಪಕ್ಷದ ಅಧಃಪತನ ಅರ್ಥವಾಗುತ್ತದೆ.

ಹಿಂದೂ ಲಾಡೆನ್ ಮುತಾಲಿಕ್ ಎಂಟ್ರಿ

ಅಪಹರಣ ಮಾಡಿದ ನಿಪ್ಪಾಣಿ ಬಾಬು ಮುಸ್ಲಿಮನಾಗಿರುವುದನ್ನು ಮತ್ತು ಅಪಹರಣಕ್ಕೊಳಗಾದ ಅನ್ನಪೂರ್ಣ ಹಿಂದೂ ಆಗಿರುವುದನ್ನು ಬಳಸಿಕೊಂಡು ಇಡೀ ಪ್ರಕರಣಕ್ಕೆ ಕೋಮುವಾದಿ ಕಲರ್ ಕೊಟ್ಟು ಶಾಂತಿಯ ಸವಣೂರಿಗೆ ಕೋಮುಗಲಭೆಯ ದಳ್ಳುರಿ ಹಚ್ಚಲು ಹಿಂದೂ ಲಾಡೆನ್ ಪ್ರಮೋದ್ ಮುತಾಲಿಕ್ ಎಂಟ್ರಿಯಾಗಿದ್ದಾನೆ. "ಬಹುಸಂಖ್ಯಾತ ಹಿಂದೂಗಳಿಗಾದ ಅವಮಾನ. ಮಸೀದಿಗಳಿಗೆ, ಮುಸ್ಲಿಮ್ ಅಂಗಡಿಗಳಿಗೆ ಬೆಂಕಿಹಚ್ಚುವ ಮೂಲಕ ಇದಕ್ಕೆ ಪ್ರತೀಕಾರ ತೆಗೆದುಕೊಳ್ಳಬೇಕು" ಎಂದು ಈ ಕೊಳ್ಳಿದೆವ್ವ ವೀರಾವೇಶದಿಂದ ಭಾಷಣ ಬಿಗಿಯುತ್ತಾ ತಿರುಗುತ್ತಿದ್ದಾನೆ. ಇವನಿಗೆ ಬಾಂಬ್ ಎಸ್ಸೈ ಗಿರೀಶ್ ಮಟ್ಟಣ್ಣನವರ್ ಸಾಥ್ ನೀಡುತ್ತಿದ್ದಾನೆ. ಕಳೆದ ತಿಂಗಳು ಹಾವೇರಿಯಲ್ಲಿ ದಲಿತ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರ ನಡೆದಾಗ ಈ ಮಹಾಶಯರ ಹಿಂದೂ ಪ್ರಜ್ಞೆ ಎಲ್ಲಿ ಹೆಂಡ ಕುಡಿದು ಮಲಗಿತ್ತೊ ಗೊತ್ತಿಲ್ಲ. ಈಗ ಇದ್ದಕ್ಕಿದ್ದಂತೆ ಅದು ಎಚ್ಚರಗೊಂಡುಬಿಟ್ಟಿದೆ.

ಮೊನ್ನೆ ಹಾವೇರಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದ ಮುತಾಲಿಕ್ "ಅಧಿಕಾರಿ ಗಳು ಷಂಡರಾಗಿದ್ದಾರೆ, ಮಸೀದಿಗೆ ಹೋಗಿ ನಮಾಜು ಮಾಡಲಿ" ಎಂದು ತನ್ನ ಬಾಯ್ಚಪಲ ತೀರಿಸಿಕೊಂಡಿದ್ದಾನೆ. ಜಿಲ್ಲಾಧಿಕಾರಿ ವಸ್ತ್ರದ್ ಇವನ ವರ್ತನೆಯ ಬಗ್ಗೆ ತುಟಪಿಟಿಕ್ ಎನ್ನದಿರುವುದು ಸಹಜವಾಗಿಯೇ ಅನುಮಾನಕ್ಕೆಡೆ ಮಾಡಿದೆ.

ಈ ತಿಂಗಳ ಇಪ್ಪತ್ತರ ಒಳಗೆ ನಿಪ್ಪಾಣಿ ಬಾಬುವನ್ನು ಬಂಧಿಸದಿದ್ದರೆ ಸವಣೂರ್ ಬಂದ್‌ಗೆ ಕರೆಕೊಟ್ಟು ಹೊತ್ತಿ ಉರಿಯುವಂತೆ ಮಾಡುತ್ತೇನೆ ಎಂದು ಮುತಾಲಿಕ್ ಅಬ್ಬರಿಸಿರುವುದು ಸಹಜವಾಗಿಯೇ ಸವಣೂರಿನ ಜನರನ್ನು ಆತಂಕಕ್ಕೀಡುಮಾಡಿದೆ. ಇವರ ಕುತಂತ್ರಕ್ಕೆ ಸೊಪ್ಪು ಹಾಕದಿರುವಷ್ಟು ಚೈತನ್ಯ ಸವಣೂರಿನ ಜನತೆಗೆ ಇದೆ ಅನ್ನೋದೆ ಒಂದು ಸಮಾಧಾನದ ವಿಚಾರ.

■ ಹುರಳಿಕುಪ್ಪಿ ವಿನಯ್

ಐದೂವರೆ ಕೋಟಿ ಲೂಟಿ, ಅಷ್ಟೇ ಕ್ವಿಂಟಾಲ್ ಅಕ್ಕಿ ಸಾಕು ಸಾರ್!

ಥೂತ್ತೇರಿ

ಯಾಹೂ

ಮುಖ್ಯಮಂತ್ರಿಯಾಗಿ ಇಷ್ಟು ದಿನಗಳಾದರೂ ಎಡೂರಪ್ಪನನ್ನ ಮಾತನಾಡಿಸಿಲ್ಲವಲ್ಲಾ ಎನ್ನಿಸಿತು. ಕೂಡಲೇ ಅವರ ಆಪ್ತ ಸಹಾಯಕರಿಗೆ ಫೋನ್ ಮಾಡಲಾಗಿ, "ಇವತ್ತು ಇಡೀ ದಿನ ಎಡೂರಪ್ಪನವರು ಯಾವ ದೇವರನ್ನೂ ಬಿಡದೆ ಬೆಸ್ನಾಡಿಕೊಂಡಿ ಹೋಗಿ ದರ್ಶನ ಪಡೆಯುವ ಕಾರ್ಯಕ್ರಮವಿದೆ. ನೀವು ಅವರ ಬೆನ್ನತ್ತಿ ಮಾತನಾಡಿಸ ಬಹುದು" ಎಂಬ ಉತ್ತರ ಸಿಕ್ಕಿತಲ್ಲಾ, ನಮಗಿದು ಕಷ್ಟದ ಕೆಲಸ. ಏಕೆಂದರೆ, ಎಡೂರಪ್ಪನ ಸುತ್ತ ನಿಂತ ಕುಂಕುಮಧಾರಿ ಗಂಡಸರನ್ನು ನೋಡಿದರೆ ನಮಗೆ ವಾಕರಿಕೆ ಬರುತ್ತದೆ. ಆದ್ದರಿಂದ ಆದದ್ದಾಗಲಿ ಎಂದು ಅವರನ್ನೇ ಫೋನಿಗೆ ಸಿಕ್ಕಿಸಿಕೊಳ್ಳಲಾಯ್ತು.

"ಹಲೋ ಸಾರ್, ನಾನು ಪತ್ರಕರ್ತ. ಒಂದೆರಡು ಮಾತಾಡಬೇಕಾಗಿತ್ತು."

"ಬೇಗ ಹೇಳಿ, ನಾನು ತುರುವೇಕೆರೆಗೆ ಹೊರಟದ್ದೀನಿ."

"ಯಾಕ್ ಸಾರ್ ಅಲ್ಲಿಗೊಗ್ತಿರಿ?"

"ಅಲ್ಲೊಂದು ಮಠ ಇದೆ ಕಂಡ್ರಿ. ಇತ್ತೀಚೆಗೆ ಅದರ ಗುರು ಹೇಳಿದ್ದೆಲ್ಲಾ ನಿಜವಾಗ್ತಿದೆಯಂತೆ. ಅದಕ್ಕೆ, ಮಹಾರಾಷ್ಟ್ರದ ವಿಲಾಸರಾವ್ ದೇಶಮುಖ್, ಎಸ್ಸೆಂಕೃಷ್ಣ ಯಲ್ಲಾ ಬರ್ತಾಯಿದಾರೆ. ಅಲ್ಲಿಗೆ ನಾನೂ ಹೋಗಿ ಬರ್ತಿನಿ."

"ಹಾಗೆ ಬರುವಾಗ ಸಾರ್, ತುರುವೇಕೆರೆ ಬಸ್ಟಾಂಡ್ ಮೂಲೇಲಿ ದೇವೇಗೌಡರ ಸ್ಟ್ಯಾಚ್ಯೂ ಇದೆ. ಅದರ ಮೈಮೇಲೆಲ್ಲಾ ಧೂಳು ಕುಂತಿದೆ. ತಲೆ ಮೇಲೆ ಶನಿ ವಾಹನಗಳು ಕಸ ಹಾಕಿವೆ. ಅದಕ್ಕೂ ಕೈ ಮುಗುದು, ಸಾಧ್ಯವಾದರೆ ತಲೆ ಮೇಲೊಂದು ಗಡಿಗೆ ನೀರಾಕಿ, ಕಣಗಲ ಹೂ ಮುಡಿಸಿ ಬತ್ತಿರಾ?"



"ತುರುವೇಕೆರೆ ಬಸ್ಟಾಂಡ್ ಮೂಲೇಲಿ ದೇವೇಗೌಡ್ರ ಪ್ರತಿಮೆ ಇದೆಯಾ?"

"ಹೌದು ಸಾರು!"

"ಯಾರ್‍ರಿ ಅಲ್ಲಿ ಸ್ಥಾಪಿಸಿದ್ದು?"

"ಯಾವನೊ ತಲೆಕೆಟ್ಟ ಶಾಸಕ ಸಾರ್. ಪಾಪ ದೇವೇಗೌಡ್ರು ಬಸ್ಟ್ಯಾಂಡಲ್ಲಿ ಭಿಕ್ಷೆ ಬೇಡುತಿದ್ರು ಅನ್ನಂಗೆ ಅಲ್ಲಿ ತಂದು ನಿಲ್ಸಿದಾನೆ. ಅದರ ಮೈಮೇಲಿನ ಧೂಳು ನೋಡಕ್ಕಾಗಲ್ಲ. ಜನ ಸ್ಟ್ಯಾಚ್ಯೂ ಸುತ್ತ ಕೂತಗಂಡು ಬೀಡಿ ಸೇತ್ತರೆ."

"ಇರ್ಲಿ ಬಿಡಿ, ನಾನಾಕಡೆ ಹೋಗ್ತಾಯಿಲ್ಲ."

"ಅಂಗನ್ನಬೇಡಿ. ನೀವು ಮುಖ್ಯಮಂತ್ರಿಯಾಗಿದ್ದು ಯಾರಿಂದ ಗೊತ್ತ ಸಾರ್?"

"ನಾನು ಮುಖ್ಯಮಂತ್ರಿ ಯಾಗೊ ಮಟ್ಟಕ್ಕೆ ಬೆಳಿಬೇಕಾದ್ರೆ ಹೆಗಡೆವಾರ್ ಮತ್ತು ಗೋಳವಲ್‌ಕರ್ ಕಾರಣ ಕಂಡ್ರಿ. ಅವರಿಂದ್ಲೆ ನಾ ಈ ಮಟ್ಟ ತಲುಪಿದ್ದು!"

"ಮಟ್ಟ ತಲುಪಿದ್ದು ಸರಿ ಸಾರ್, ಕುರ್ಚಿ ಕೊಟ್ಟಿದ್ದು ಯಾರು?"

"ಅದಾ, ಆ ಮೇಲೆ ಮಾತಾಡನ ಬನ್ನಿ, ಈಗ ಟೈಮಿಲ್ಲ."

"ಇನ್ನೊಂದೆರಡು ಪ್ರಶ್ನೆ ಸಾರ್. ಎತ್ತಾ ಮಾಮರ ಎತ್ತಾ ಕೋಗಿಲೆ, ಬೆಟ್ಟದ ನೆಲ್ಲಿ ಎಲ್ಲಿ, ಕಡಲಿನ ಉಪ್ಪೆಲ್ಲಿ? ಅಂತ ಮಂಡ್ಯ ಜಿಲ್ಲೆ ಬೂಕನಕೆರೆ ಹುಟ್ಟಿದ ನೀವು, ಶಿಕಾರಿಪುರಕ್ಕೋದರಲ್ಲ ಯಾಕೆ ಸಾರ್?"

"ನೋಡಿ, ನಾನು ಬಹಳ ಚಿಕ್ಕವನಾಗಿದ್ದಾಗಲೇ ನನ್ನ ಹೆತ್ತ ತಾಯಿ ಕಳಕೊಂಡೆ. ತಾಯಿ ಇಲ್ಲದ ಮನೆಗೆ ಹೋಗಕ್ಕೆ ಬೇಸರವಾಗಿ ಊರಿನ ಪಶ್ಚಿಮಾಭಿಮುಖವಾಗಿ ನಡೆದುಕೊಂಡು ಹೋದೆ. ನನ್ನ ಬಗಲಲ್ಲಿ ಒಂದು ಚೀಲ, ಒಂದು ಕೋಲು, ಖಾಕಿ ಚಡ್ಡಿ ಬಿಟ್ರೆ ಇನ್ನೇನು ಇರಲಿಲ್ಲ. ದಾರಿಯುದ್ದಕ್ಕೂ ಸಜ್ಜನರೇ ಸಿಕ್ಕಿ ಊಟ ಹಾಕಿ ಮುಂದಿನ ಊರಿಗೆ ಕಳುಹಿಸಿದ್ರು. ಕಡೆಗೆ ಈ ಪ್ರಯಾಣ ನಿಲ್ಲಿಸಿ ನೆಲೆಗೊಂಡೆ. ಅದೇ ಶಿಕಾರಿಪುರವಾಗಿತ್ತು, ಅದು ನನ್ನ ಭಾಗದ ಪುಣ್ಯಾವತಿಯಾಯ್ತು."

"ನಿಜಕ್ಕೂ ಹೋರಾಟದ ಬದುಕು ಸಾರ್ ನಿಮ್ಮದು."

"ಹೌದು, ಸುಮ್ಮನೆ ಹೋರಾಟ ಮಾಡಿಕೊಂಡು ಬಂದೆ. ಈಗ ಮುಖ್ಯಮಂತ್ರಿಯಾದಾಗ ನನಗೆ ಹೋರಾಟದ ಫಲವೇನು ಅಂತ ಗೊತ್ತಾಗ್ತಯಿದೆ."

"ನಿಜ ಸಾರ್, ಅದನ್ನೂ ಹೋರಾಡಿಕೊಂಡೇ ಪಡದ್ರಿ. ಮುಂದೇನು ಮಾಡ್ತಿರಿ ಸಾರ್?"

"ಮಹಾತ್ಮಗಾಂಧಿಯವರ ಕನಸಾದ ಗ್ರಾಮರಾಜ್ಯ ಮಾಡ್ತಿನಿ."

"ಅಲ್ಲ ಸಾರ್, ನಿಮ್ಮ ಆರೆಸ್ಸೆಸ್ಸಿನ ಸಿದ್ಧಾಂತಕ್ಕೂ, ಗಾಂಧಿಗೂ ಎಣ್ಣೆ ಸೀಗೇಕಾಯಿ ಸಮಂದ ಇರುವಾಗ ಅದ್ಯಂಗೆ ಗಾಂಧಿ ರಾಜ್ಯ ಕಟ್ತುತ್ತೀರಿ?"

"ಗಾಂಧಿಗೂ, ನಮ್ಮವರಿಗೂ ಆಗದೇಯಿದ್ರೇನು? ಅವರ ಗ್ರಾಮಸ್ವರಾಜ್ಯ ಸ್ವಾಮ್ಯ ಯಾರ ಬಳಿಯಲ್ಲೂ ಇಲ್ಲ."

"ಆಯ್ತು ಕುಮಾರಸ್ವಾಮಿಯಂಗೆ ಗ್ರಾಮವಾಸ್ತವ್ಯ ಮಾಡ್ತಿರೊ, ಅಥವಾ ಬೇರೆ ಆಲೋಚನೆ ಮಾಡ್ತಿರೊ?"

"ಬೇರೆ ಆಲೋಚನೆ ಮಾಡ್ತೀನಿ."

"ಹೆಚ್ಚು ಕಮ್ಮಿ ಇನ್ನ ಹದಿನೆಂಟು ತಿಂಗಳದೆ ಸಾರ್?"

"ಹದಿನೆಂಟು ದಿವಸ ಇರ್ಲಿ, ಈ ಎಡೂರಪ್ಪ ಹಿಡದ ಕೆಲಸ ಬುಡಲ್ಲ."

"ಯಾವ ಕೆಲಸ ಹಿಡಕತ್ತಿರಿ ಸಾರ್?"

"ಹಿಡಕಂಡ ಮೇಲೆ ನೋಡ್ರಿ, ನಿಮಗೆ ಗೊತ್ತಾಗುತ್ತೆ."

"ಇಂತಹ ಸಂತೋಷದ ಗಳಿಗೆಲಿ ನಿಮ್ಮ ಹೆಂಡ್ತಿ ಇರಬೇಕಿತ್ತು ಸಾರ್."

"ಇರಬೇಕಿತ್ತು, ನಾನೇನು ಇರಬೇಡ ಅಂದಿದ್ನ?"

"ಅವರ ಸಾವು ಅದನ್ನೆ ಹೇಳುತ್ತಲ್ಲ ಸಾರ್?"

"ಹಳೆ ವಿಷಯನೆಲ್ಲಾ ಯಾಕ್ರಿ ಕೆದಕ್ತೀರಿ? ನಾನೀಗ ಕರ್ನಾಟಕದ ಬಡವರು, ಮಹಿಳೆಯರು, ಮಕ್ಕಳು ಎಲ್ಲರೂ ನೆಮ್ಮದಿಯಾಗಿ ನಿದ್ದೆ ಮಾಡೊತರ ಯಾವುದಾದ್ರೂ ಕಾರ್ಯಕ್ರಮಯಿದ್ರೆ ಹಾಯ್ಕೊಳನಾ ಅಂತ ಯೋಚನೆ ಮಾಡ್ತಯಿದ್ದೀನಿ."

"ಅದಕ್ಕೆ ಒಂದೇ ಒಂದು ಕಾರ್ಯಕ್ರಮ ಸಾಕು ಸಾರ್."

"ಹೇಳ್ರಿ ಯಾವುದದು?"

"ತಾಯಿಯಿಲ್ಲದ ನಿಮ್ಮನ್ನು ತಂದೆ ರೀತಿ ಸಾಕಿದ ಆರೆಸೆಸ್ ಕಾರ್ಯಕ್ರಮ ಹಬ್ಬಿಸಿದ್ರೆ ಸಾಕು. ಲಾಟ ಬೀಸಿ ಸುಸ್ತಾದ ಜನ ಬಿಸಿ ಊಟ ಉಂಡು ಮಲಗ್ತರೆ. ಐದೂವರೆ ಕೋಟಿ ಲೂಟಿ, ಅಷ್ಟೇ ಕ್ವಿಂಟಾಲ್ ಅಕ್ಕಿ ಸಾಕು!"

"ನೋಡನಿರಿ, ಖಂಡಿ ಹಾಸಂಗ ಸಭೇಲಿ ಘೋಷಣೆ ಮಾಡ್ತೀನಿ."

"ಥೂತ್ತೇರಿ!!!" ■



ಮನೆ ಮಠ ಸುತ್ತ ಹಠ



ಚಿತ್ರದುರ್ಗದ ಮುರುಘಾಮಠದ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್‌ರನ್ನು ಪದಚ್ಯುತಗೊಳಿಸುವುದರೊಂದಿಗೆ ಮುರುಘಾಮಠದ ವಿದ್ಯಮಾನಗಳು ನಿರ್ಣಾಯಕ ತಿರುವು ಪಡೆದುಕೊಂಡಿವೆ. ಕಳೆದ 13 ವರ್ಷಗಳಿಂದ ಬೃಹನ್ಮಠದ ಆಡಳಿತಾಧಿಕಾರಿಯಾಗಿ ಬೃಹನ್ಮಠ ಹಾಗೂ ಎಸ್‌ಜೆಎಂ ವಿದ್ಯಾಸಂಸ್ಥೆಗಳ ಆಗುಹೋಗುಗಳನ್ನೆಲ್ಲಾ ನಿಭಾಯಿಸುತ್ತಿದ್ದ ಬಸವರಾಜನ್‌ರನ್ನು ಏಕಾಏಕಿ ಪದಚ್ಯುತಿಗೊಳಿಸಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಕಳೆದ ಜುಲೈನಲ್ಲಿ ಅಂಥದ್ದೊಂದು ಪ್ರಯತ್ನ ನಡೆದಿತ್ತಾದರೂ ಅದೂ ಆಡಳಿತಾಧಿಕಾರಿಯಾಗಿದ್ದ ಬಸವರಾಜನ್‌ರನ್ನು ಕಾರ್ಯದರ್ಶಿ ಸ್ಥಾನಕ್ಕಿಳಿಸುವಲ್ಲಿ ಪರ್ಯಾವಸಾನವಾಗಿತ್ತು. ಮೊನ್ನೆ ಬುಧವಾರ ಸಂಜೆಯಿಂದಲೇ ಮುರುಘಾಮಠದಲ್ಲಿ ಬಸವರಾಜನ್ ಪದಚ್ಯುತಿಯ ಪ್ರಸ್ತಾವದ ಸುದ್ದಿ ಮತ್ತೆ ಚಾಲನೆ ಪಡೆದುಕೊಂಡಿತು. ಆನಂತರದ ಬೆಳವಣಿಗೆಗಳು ಮಠದಲ್ಲಿ ಬಿಗುವಿನ ವಾತಾವರಣಕ್ಕೆ ದಾರಿ ಮಾಡಿದವು. ಪೊಲೀಸರ ಸರ್ಪಗಾವಲು ಬೇರೆ. ಮಠದ ಪಾರ್ಕಿನಲ್ಲಿ ಬಸವರಾಜನ್ ಬೆಂಬಲಿಗರ ಸಭೆ ನಡೆದರೆ ಮಠದ ಒಳಗೆ ವೀರಶೈವ ಸಮಾಜದ ಮುಖಂಡರ ಜೊತೆ ಶಿವಮೂರ್ತಿ ಮುರುಘಾಶರಣರು ಸಮಾಲೋಚನೆ ನಡೆಸಿದರು. ಬಸವರಾಜನ್ ಮತ್ತು ಶರಣರ ನಡುವೆ ರಾಜೀ ಮಾಡಿಸುವ ಪ್ರಯತ್ನಗಳು ಎಡಬಿಡದೇ ನಡೆದರೂ ಅವ್ಯಾವೂ ಫಲ ಕೊಡಲಿಲ್ಲ.

ಅಂತಿಮವಾಗಿ ಶುಕ್ರವಾರ ಮಾಧ್ಯಮದವರೊಂದಿಗೆ ಕೆಲವೇ ಮಾತನಾಡಿದ ಶರಣರು ಬಸವರಾಜನ್‌ರನ್ನು ಆಡಳಿತಾಧಿಕಾರಿ ಹುದ್ದೆಯಿಂದ ತೆರವುಗೊಳಿಸಿರುವ ತಮ್ಮ ಆದೇಶದ ಪ್ರತಿ ನೀಡಿದರು. ಮನೆ ತೆರವುಗೊಳಿಸುವಂತೆಯೂ ಅದರಲ್ಲಿ ಸೂಚಿಸಿದ್ದರು. ಶನಿವಾರ ಬಸವರಾಜನ್ ಮನೆ ತೆರವುಗೊಳಿಸದಂತೆ ನ್ಯಾಯಾಲಯ ಮೊರೆಹೋಗಲಿದ್ದಾರೆಂಬ ಸುದ್ದಿ ತಿಳಿದ ನಂತರ ಶರಣರು ಪೊಲೀಸರ ಮೂಲಕ ಬಸವರಾಜನ್‌ಗೆ ಕೂಡಲೇ ಮನೆ ತೊರೆಯುವಂತೆ ಸೂಚಿಸಿದ್ದರಿಂದ ಬಸವರಾಜನ್ ಅನಿವಾರ್ಯವಾಗಿ ಮಠದ ಆವರಣದಲ್ಲಿನ ಮನೆ ತೊರೆದು ಹೊರಬಂದಿದ್ದಾರೆ.



ಬಸವರಾಜನ್

ಬಸವರಾಜನ್ ಪದಚ್ಯುತಿಯನ್ನು ಸಮರ್ಥಿಸುವವರು ಮತ್ತದೇ ರಾಜಕೀಯ ಕಾರಣ ಮುಂದೆ ಮಾಡುತ್ತಿದ್ದಾರೆ. ಬಸವರಾಜನ್ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಿಕೊಂಡು ಹೋಗಿದ್ದರೆ ಯಾವ ತಕರಾರು ಇರುತ್ತಿರಲಿಲ್ಲ.

ಮೇ. ನಾ. ಆಹೋಬಳಪತಿ

ಬಸವರಾಜನ್ ಯಾವುದೇ ಪಕ್ಷದ ಜೊತೆ ಗುರುತಿಸಿಕೊಳ್ಳದೇ ನಿರ್ಲಿಪ್ತವಾಗಿದ್ದರೆ ಶ್ರೀಮಠವನ್ನು ರಾಜಕೀಯ ಲೇಪನದಿಂದ ನೋಡುವ ಪರಿಪಾಠವೇ ಬೆಳೆಯುತ್ತಿರಲಿಲ್ಲ. ಬಸವರಾಜನ್‌ರ ರಾಜಕೀಯಕಾಂಕ್ಷೆಯಾದ್ದರಿಂದ ಬೃಹನ್ಮಠವನ್ನು ರಾಜಕೀಯ ಪಕ್ಷವೊಂದರ ಅಡ್ಡೆಯೆಂಬಂತೆ ನೋಡಲು ದಾರಿ ಮಾಡಿತು. ಬಸವರಾಜನ್ ಮೊದಲು ಎಂಎಲ್‌ಸಿ ಚುನಾವಣೆಗೆ ನಿಂತಾಗಲೇ ಇಂತಹ ಅಪಸ್ವರಗಳು ವ್ಯಕ್ತವಾಗಿದ್ದವು. ಆನಂತರ ನೇರವಾಗಿ ಸಕ್ರಿಯ ರಾಜಕೀಯಕ್ಕಿಳಿದಾಗಲೂ ಶ್ರೀಮಠದ ಭಕ್ತರು, ಅನುಯಾಯಿಗಳು ಅಸಮಾಧಾನಗೊಂಡಿದ್ದರು. ಆದರೆ ಬಸವರಾಜನ್ ಯಾರ ಅಭಿಪ್ರಾಯಗಳು-ವಿರೋಧಗಳನ್ನು ಲೆಕ್ಕಿಸದೇ ತಾನು ನಡೆದದ್ದೇ ದಾರಿ ಎಂಬಂತೆ ರಾಜಕೀಯದಲ್ಲಿ ಸಕ್ರಿಯವಾದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಂತೂ ಶಾಸಕ ತಿಪ್ಪಾರೆಡ್ಡಿಗೆ ತಾನೇನೂ ಕಡಿಮೆ ಇಲ್ಲವೆಂಬಂತೆ ತಂತ್ರಕ್ಕೆ ಪ್ರತಿತಂತ್ರ ರೂಪಿಸಿ ಹಣಬಲ-ತೋಳ್ಬಲ ಎಲ್ಲವನ್ನೂ ಬಳಸಿ ಅಖಾಡಕ್ಕಿಳಿದರು. ಶಾಸಕ ತಿಪ್ಪಾರೆಡ್ಡಿ ಪುಂಡರ ಪಟಾಲಂನ್ನು ಜಮಾಯಿಸಿಕೊಂಡ ಹಾಗೆ ಎಸ್.ಕೆ. ಬಸವರಾಜನ್ ಕೂಡಾ ಪುಂಡರ ಪಟಾಲಂನ್ನು ಜಮಾಯಿಸಿಕೊಂಡು ಚುನಾವಣಾ ಪ್ರಚಾರಕ್ಕಿಳಿದರು. ಧಾರ್ಮಿಕ ಪೀಠವೊಂದರ ಆಡಳಿತಾಧಿಕಾರಿಯಾಗಿದ್ದವರು ಹೀಗೆ ಸಾರ್ವಜನಿಕ ಜೀವನದಲ್ಲಿ ನೇರವಾಗಿ ಗುರುತಿಸಿಕೊಳ್ಳುವುದನ್ನು ಬಹಳಷ್ಟು ಜನ ಅರಗಿಸಿಕೊಳ್ಳಲಿಲ್ಲ. ಮುಖ್ಯವಾಗಿ ಚುನಾವಣೆಯ ಹೆಸರಲ್ಲಿ ಖರ್ಚು ಮಾಡಿದ ಕೋಟಿಗಟ್ಟಲೇ ಹಣ ಎಲ್ಲಿಂ ಬಂತು? ಮಠದ ಹಣವನ್ನು ಖರ್ಚು ಮಾಡುವ ಅಧಿಕಾ ಈತನಿಗೆ ಕೊಟ್ಟವರಾರು ಎಂಬಂಥ ಪ್ರಶ್ನೆಗಳು-ಟೀಕೆಗ ವ್ಯಕ್ತವಾದವು. ವಿಪರ್ಯಾಸವೆಂದರೆ ಬಸವರಾಜನ್ ಇಂತಹ ಅಭಿಪ್ರಾಯಗಳಿ ಕವಡೆ ಕಾಸಿನ ಕಿಮ್ಮತ್ತನ್ನೂ ಕೊಡಲಿಲ್ಲ.



ಪತ್ರಿಕಾಗೋಷ್ಠಿಯಲ್ಲಿ ಶರಣರು

ಈ ನಡುವೆ ಶ್ರೀಮಠದಲ್ಲಿ ಅನ್ಯಜಾ ಮುಖಂಡರುಗಳಿಗೆ ಸಿಗುವ ಸ್ಥಾನಮಾನ-ಪ್ರಾ ಲಿಂಗಾಯತ ಮುಖಂಡರಿಗೆ ಸಿಗುತ್ತಿಲ್ಲ ಎಂಬ ಕೂಡಾ ವ್ಯಾಪಕವಾಗಿತ್ತು. ಬಸವರಾಜನ್ ರಾಜಕೀಯ ತೆವಲಿಗೆ ಹೀಗೆ ಬೇರೆ ಬೇರೆ ಜಾ ಮುಖಂಡರನ್ನು ಓಲೈಸುತ್ತಾ ತಮ್ಮನ್ನು ಕಡೆಗಣಿಸು

ಸೌಭಾಗ್ಯಮ್ಮಳ ಪಾತ್ರ

ಬಸವರಾಜನ್ ಮನೆ ತೊರೆಯುವಂಥ ಬಿಕ್ಕಟ್ಟಿನ ಪರಿಸ್ಥಿತಿಗೆ ಅವರ ಶ್ರೀಮತಿ ಸೌಭಾಗ್ಯ ಬಸವರಾಜನ್ ಕಾರಣ ಎಂಬ ಚರ್ಚೆಗಳೂ ಮಹತ್ವ ಪಡೆದುಕೊಂಡಿವೆ. ಸೌಭಾಗ್ಯ ಬಸವರಾಜನ್ ಗ್ರಾಮ ಪಂಚಾಯ್ತಿಯಿಂದ ಜಿಲ್ಲಾ ಪಂಚಾಯತ್ ಅಧ್ಯಕ್ಷಗಾದಿವರೆಗೂ ಅಧಿಕಾರ ಅನುಭವಿಸಿದವರು. ಹಾಗೆ ಅಧಿಕಾರದಲ್ಲಿದ್ದಾಗ ತಮ್ಮ ಹೆಸರನ್ನೇನೂ ಕೆಡಿಸಿಕೊಳ್ಳಲಿಲ್ಲ, ಬದಲಿಗೆ ಬೆಂಬಲಿಗರು ಅದರ ಪ್ರಯೋಜನ ಪಡೆದರು.



ನೋಡಲು ಸರಳ ವ್ಯಕ್ತಿಯಂತೆ ಕಾಣುವ ಸೌಭಾಗ್ಯ ಬಸವರಾಜನ್ ರಾಜಕೀಯವಾಗಿ ಮಹತ್ವಾಕಾಂಕ್ಷೆ ಇರುವ ಹೆಣ್ಣುಮಗಳು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಿತ್ರದುರ್ಗದ ವಿಧಾನಸಭಾ ಕ್ಷೇತ್ರದಿಂದ ಬಸವರಾಜನ್ ಬದಲಿಗೆ ಸೌಭಾಗ್ಯಮ್ಮ ಅಖಾಡಕ್ಕಿಳಿದಿದ್ದರೆ ಖಂಡಿತ ಶಾಸಕಿಯಾಗುತ್ತಿದ್ದರು ಎಂಬ ಮಾತು ಜನಜನಿತವಾಗಿದೆ. ಇಂತಹ ಅಭಿಪ್ರಾಯಗಳಿಂದ ಪ್ರೇರಿತರಾಗಿದ್ದ ಸೌಭಾಗ್ಯ ಬಸವರಾಜನ್ ಬರಲಿರುವ ವಿಧಾನಸಭಾ ಚುನಾವಣೆಗೆ ಹೊಸದುರ್ಗದಿಂದ ಸ್ಪರ್ಧಿಸಲು ಅಖಾಡವನ್ನು ಸಜ್ಜುಗೊಳಿಸುತ್ತಿದ್ದಾರೆಂಬ ಅಭಿಪ್ರಾಯಗಳು ಕೇಳಿಬರುತ್ತಿದ್ದವು.

ಇದೇ ಕಾರಣಕ್ಕೆ ತಮ್ಮ ಸಂಬಂಧಿಯಾಗಿದ್ದ ಹೊಸದುರ್ಗ ಒಪ್ಪತ್ತಿನ ಮಠದ ಬಸವಶಾಂತವೀರ ಸ್ವಾಮೀಜಿಗೆ ಇನ್ನಿಲ್ಲದ ಪ್ರಾತಿನಿಧ್ಯ ನೀಡಿ ಬೆಂಬಲಿಸುತ್ತಿದ್ದರು. ಸೌಭಾಗ್ಯ ಬಸವರಾಜನ್‌ರ ಬೆಂಬಲದಿಂದಲೇ ಶಾಂತವೀರ ಸ್ವಾಮಿ ತುಂಬಾ ದಾರ್ಷ್ಟ್ಯದ ನಡವಳಿಕೆಯಿಂದ ಶಿವಮೂರ್ತಿ ಮುರುಘಾ ಶರಣರಿಗೆ ಬೇಸರ ತರಿಸುತ್ತಿದ್ದರೆನ್ನಲಾಗಿದೆ. ಇದು ಮುಂದುವರಿದು ಇದೇ ಶಾಂತವೀರ ಸ್ವಾಮೀಜಿಯನ್ನು ಮುರುಘಾಮಠಕ್ಕೆ ಪೀಠಾಧಿಪತಿ ಮಾಡುವ ಹುನ್ನಾರಗಳು ನಡೆದಿವೆಯೆಂಬ ಸುದ್ದಿ ಕೂಡಾ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಇದನ್ನು ಪುಷ್ಟೀಕರಿಸುವಂತೆ ಮೊನ್ನೆ ಶಾಂತವೀರ ಸ್ವಾಮೀಜಿ ಬಸವರಾಜನ್ ಪರವಾಗಿ ತಮ್ಮ ಬೆಂಬಲಿಗರನ್ನು ಕರೆದುಕೊಂಡು ಬಂದಿದ್ದರೆಂಬ ಸುದ್ದಿಗೂ ಮಹತ್ವ ಬಂದಿತ್ತು.

ಇದರ ಜೊತೆಗೆ ಮಠದ ಶಿಕ್ಷಣ ಸಂಸ್ಥೆಗಳಲ್ಲಿನ ಕುಂಚಟಿಗ ಸಮುದಾಯದ ನೌಕರರಿಗೆ ಸೌಭಾಗ್ಯ ಬಸವರಾಜನ್ ಇನ್ನಿಲ್ಲದ ಆದ್ಯತೆ ನೀಡಿ ಅವರು ಸೊಂಪಾಗಿ ಮೇಯಲು ಅವಕಾಶ ಮಾಡಿಕೊಟ್ಟಿದ್ದಾರೆಂಬುದು ಮತ್ತೊಂದು ಆರೋಪ. ಪರ್ಚೇಸಿಂಗ್ ಆಫೀಸರ್ ರುದ್ರಪ್ಪ ಮ್ಯಾನೇಜರ್ ವಿರುಪಾಕ್ಷಪ್ಪ, ಕೆ.ಎಂ. ರಮೇಶ್ ಅಲಿಯಾಸ್ ತಿಮ್ಮಿ ರಮೇಶ ಮುಂತಾದವರ ಹೆಸರುಗಳು ಈ ಯಾದಿಯಲ್ಲಿವೆ. ಕೆಲ ಲಿಂಗಾಯತ ಮುಖಂಡರು ಈ ಬಗ್ಗೆ ಶಿವಮೂರ್ತಿ ಶರಣರಬಳಿ ಅನೇಕ ಬಾರಿ ತಮ್ಮ ಅಸಮಾಧಾನವನ್ನು ತೋಡಿಕೊಂಡಿದ್ದರಂತೆ.

ಪ್ರಗತಿಪರ ನಿಲುವು-ಆಶಯಗಳಿಗೆ ಧಕ್ಕೆ ಇಲ್ಲ

ಶಿವಮೂರ್ತಿ ಮುರುಘಾ ಶರಣರ ಪ್ರತಿಕ್ರಿಯೆ ಬಯಸಿ 'ಲಂಕೇಶ್' ಭೇಟಿ ಮಾಡಿದಾಗ ಬಸವರಾ ಪದಚ್ಯುತಿ ಕುರಿತಂತೆ ಶರಣರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡಲಿಲ್ಲ. "ಪ್ರತಿಕ್ರಿಯೆ ನೀಡುವಂತಾದ್ದೇ ಇಲ್ಲ, ವದಂತಿಗಳಿಗೆಲ್ಲಾ ಏನೂ ಮಾಡಲಾಗದು. ಕೆಲ ದಿನಗಳ ನಂತರ ಎಲ್ಲಾ ಸರಿ ಹೋಗುತ್ತದೆ" ಎಂದು ಹೇಳಿದರು.

ಬಸವರಾಜನ್ ವಿರೋಧದ ನೆಪದಲ್ಲಿ ಸಂಘಟಿತವಾಗುತ್ತಿರುವ ಕೆಲ ಲಿಂಗಾಯತ ಮುಖಂಡರಿಗೆ ಶ್ರೀಮಠ ಕೇವಲ ಲಿಂಗಾಯತ ಮಠವನ್ನಾಗಿ ಪರಿವರ್ತಿಸಬೇಕೆಂಬ ಹುನ್ನಾರಗಳಿದ್ದಂತಿವೆ. ಹಾಗಾದಲ್ಲಿ ತಮ್ಮ ಪ್ರಗತಿ ನಿಲುವು-ಆಶಯಗಳಿಗೆ ತಡೆಯಾಗಬಹುದಲ್ಲವೇ? ಈಗಿರುವಂತೆ ಎಲ್ಲಾ ಜಾತಿ-ಜನಾಂಗದವರಿಗೆ ಮುಕ್ತ ಪ್ರವೇಶ ಅವಕಾಶವಿರುವುದಿಲ್ಲ ಎಂಬಂತಹ ಅಭಿಪ್ರಾಯಗಳು ಕೇಳಿಬರುತ್ತಿವೆಯಲ್ಲಾ....? ಎಂಬ ಪ್ರಶ್ನೆಗೆ ಶರ ಮುಕ್ತವಾಗಿ ಪ್ರತಿಕ್ರಿಯಿಸಿದರು.

ಶ್ರೀಮಠ ಪ್ರಸ್ತುತ ಪರಿಪಾಲಿಸಿಕೊಂಡು ಬರುತ್ತಿರುವ ಪ್ರಗತಿಪರ ನಿಲುವು-ಆಶಯಗಳಿಗೆ ಧಕ್ಕೆ ಬ ಮಾತೇ ಇಲ್ಲ, ಈ ನಿಲುವಿಗೂ ಹೊರತಾಗಿ ಶರಣ ಪರಂಪರೆಯನ್ನು ಮುಂದುವರಿಸಲಿಕ್ಕೆ ಸಾಧ್ಯವಿಲ್ಲ. ಜ ಕಾಳಜಿಯ ವೃತ್ತಿಗಳನ್ನು ಒಟ್ಟುಗೂಡಿಸುವ ಪ್ರಯತ್ನ ನಡೆಯುತ್ತಲೇ ಇದೆ. ಇದಕ್ಕೆ ತಡೆಯುಂಟು ಮಾ ಯಾವುದೇ ಪ್ರಯತ್ನಗಳಿಗೆ ತಾವು ಆಸ್ಪದ ನೀಡುವುದಿಲ್ಲ ಎಂದರು.

You can sit on a mountain but not on a pin....

ಜಾತ್ಯಾತೀತ ದಳದ ದೇವೇಗೌಡರು ಅಗ್ರಗಣ್ಯ ನಾಯಕನೇ ಇರಬಹುದು. ಒಂದು ಸರ್ಕಾರವನ್ನು ಆಡಿಸಿ ಬೀಳಿಸಿ ನೋಡುವ ತಾಕತ್ತೂ ಅವರಿಗಿರಬಹುದು. ಆದರೆ ಅಂತಹವರೂ ಒಂದಲ್ಲಾ ಒಂದು ಅಸಹಾಯಕತೆಯುಳ್ಳ ಪರಿಸ್ಥಿತಿಗಳ ಒತ್ತಡಕ್ಕೆ ತಲೆ ಬಾಗಲೇ ಬೇಕಾಗುತ್ತವೆ ತಾನೆ.

ಯಡ್ಡಿ ಈಗ ಸಿಎಂ ಆಗಿರುವುದು ಕೂಡಾ ಗೌಡರ ಅನಾನುಕೂಲತೆ ಹಾಗೂ ಒಟ್ಟಾರೆ ಸಂದರ್ಭದ ಅನುಕೂಲತೆಯಿಂದಲೇ. ಹಾಗೆ ಸಿಕ್ಕ ಅವಕಾಶವನ್ನು ಲಬಕ್ಕೆಂದು ಬಾಚಿಕೊಂಡಿರುವ ಯಡಿಯೂರಪ್ಪ ಮುಖ್ಯಮಂತ್ರಿಯಾದವನೊಬ್ಬ ತನ್ನ ಕುರ್ಚಿ ರಕ್ಷಣೆಗೆ ಏನೇನು ರಕ್ಷಣಾ ವ್ಯವಸ್ಥೆ ಮಾಡಿಕೊಳ್ಳಬೇಕೋ ಅದನ್ನೇ ಮೊದಲು ಮಾಡಿದ್ದಾರೆ.



ಅಪ್ಪಟ ಲಿಂಗಾಯತ ಶಂಕರ್ ಬಿದರಿಯನ್ನು ತಮ್ಮ ಗೂಢಾಚಾರಿ ಪಡೆಯ ನಾಯಕನನ್ನಾಗಿ ಯಡ್ಡಿ ಕರೆದು ಪಕ್ಕ ನಿಲ್ಲಿಸಿಕೊಂಡಿರುವುದೂ ಅದರಲ್ಲೊಂದು.

ಹಾಗೆ ನೋಡಿದರೆ ಬರೀ ಬಿದರಿ ಮಾತ್ರವಲ್ಲ ಈಗ ಯಡ್ಡಿಯ ಒಳಕೋಟೆಯ ಅಧಿಕಾರಿಗಳಾಗಿ ಬಂದಿರುವ ವಿ.ಪಿ. ಬಳಿಗಾರ್, ದಯಾಶಂಕರ್, ವಿರೂಪಾಕ್ಷಪ್ಪ, ಚಂದ್ರಮೌಳಿ ಕೂಡಾ ಲಿಂಗಾಯತ ರೇಸ್. ಆದರೆ ಇವರ್‍ಯಾರೂ ಬಿದರಿ ರೀತಿ ಲಿಂಗಾಯತ ಜಾತಿ ವೈರಸ್ ತಗುಲಿಸಿಕೊಂಡವರಲ್ಲ.

ದೇವೇಗೌಡರಿಗೆ ಯಡ್ಡಿ ಬಗ್ಗೆ ಕಸಿವಿಸಿಯಾಗುತ್ತಿರುವ ಅಂಶಗಳಲ್ಲಿ ಈಗ ಬಿದರಿ ವಿಚಾರವೂ ಸೇರಿದೆ. ರಾಜಕಾರಣದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಓಟು, ಶಾಸಕರ ಸಂಖ್ಯಾ ಬಲ ಹೇಗೆ ಮುಖ್ಯವೋ ಅದೇ ರೀತಿ ಸಿಎಂ ಅಧಿಕಾರ ಸಿಕ್ಕ ಮೇಲೆ ಶತ್ರು ಮಿತ್ರರೆನ್ನದೆ ಎಲ್ಲರ ಚಟುವಟಿಕೆಗಳ ಮೇಲೂ ಒಂದು ಕಣ್ಣು ಇಟ್ಟಿರಲೇಬೇಕಾಗುತ್ತದೆ.

ಶಂಕರ ಬಿದರಿ ಅದರಲ್ಲಿ ಪಳಗಿರುವ ಅಧಿಕಾರಿ. ರಾಜಕಾರಣಿಗಳಿಗಿಂತಾ ಒಂದು ಕೈ ಮೇಲೇ ಅಂತಲೇ ಹೇಳಬಹುದು.

ಬಿದರಿಗೆ ಹೆದರಿದ ಗೌಡ

ಗೌಡ ಮತ್ತೆ ಯಡ್ಡಿ ಮೇಲೆ ಕೆಂಡ

ಮೊದಲಿಗೆ 12 ಆಮೇಲೆ 21 ಕ್ಕೇರಿರುವ ದೇವೇಗೌಡರ ಶರತ್ತುಗಳಿಗೆ ಬಿಜೆಪಿ ಕಿಲುಬು ಕಾಸಿನ ಬೆಲೆಯನ್ನು ನೀಡುತ್ತಿಲ್ಲ ಎನ್ನುವುದು ಮೇಲ್ನೋಟಕ್ಕಂತೂ ಗೊತ್ತಾಗುತ್ತಿದೆ. ಹೀಗೆ ದಳದವರು ಬಹಿರಂಗವಾಗಿ ಬೇಡಿಕೆ ಇಟ್ಟಮೇಲೂ ಬಿಜೆಪಿ ಅದನ್ನು ನಿರ್ಲಕ್ಷಿಸುತ್ತಾ ಹೋಗಲು ಕಾರಣ ಏನು ಗೊತ್ತೆ? ದಳದ ಬಹುತೇಕ ಶಾಸಕರಿಗೆ ಗೌಡರ ಶರತ್ತುಗಳಿಗಿಂತ ಅಧಿಕಾರ ಹಾಗೂ ತಿನ್ನಲು ಏನೇನು ಸಿಗುತ್ತದೆ ಎಂಬುದರ ಕಡೆಗೇ ಜಾಸ್ತಿ ಗಮನ ಇದೆ. ದಳದೊಳಗೆ ಗೌಡರ ಕುಟುಂಬದ ದಬ್ಬಾಳಿಕೆ ಬಗ್ಗೆ ಶಾಸಕರ-ಅದರಲ್ಲೂ ಲಿಂಗಾಯತ ಶಾಸಕರ-ಅಸಹನೆ ಕುದಿಯುತ್ತಿದೆ ಎಂಬ ಖಚಿತ ಮಾಹಿತಿ ಯಡ್ಡಿಗಿದೆ.

ಹೀಗೆ ಪ್ರತಿ ಶಾಸಕನ ಆಸೆ, ಹತಾಶೆಗಳನ್ನು ಪತ್ತೆಹಚ್ಚಿ, ವಿಶ್ಲೇಷಿಸಿ ಯಡ್ಡಿಗೆ ನೀಡುವುದೇ ಬಿದರಿ ಕೆಲಸ. ಈ ಬಿದರಿಯ ಗೂಢಚರ್ಯೆ ಸಾಮರ್ಥ್ಯ ಎಷ್ಟೆಂಬುದು ದೇವೇಗೌಡರಿಗೆ ಚೆನ್ನಾಗೇ ಗೊತ್ತಿದೆ. ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗಲೂ ಗೌಡರ ಕಿರುಕುಳದಿಂದ ಪಾರಾಗಲು ಪಟೇಲರು ಇದೇ ಬಿದರಿ, ವಿ. ಸೋಮಣ್ಣನನ್ನು ಹತ್ತಿರ ಇರಿಸಿಕೊಂಡಿದ್ದರು.



ನವೆಂಬರ್ 19ರ ವಿಶ್ವಾಸಮತ ಯಾಚನೆಯಲ್ಲಿ ಯಡ್ಡಿ ಯಶ ಕಾಣುವುದು ಖಚಿತ. ಆದರೆ ಅದಕ್ಕಿಂತ ಮುಖ್ಯ ವಿಚಾರಗಳು ಮೇಲೇಳುವುದೇ ಆನಂತರ. ಖಾತೆ ಹಂಚಿಕೆ, ಬಿಜೆಪಿಯೊಳಗೇ ಏಳುತ್ತಿರುವ ಭಿನ್ನಮತ, ಗೌಡರ ಅಂಕುಶ, ಅನಂತ್ ಕುಮಾರ್ ಗುಂಪಿನ ಚಟುವಟಿಕೆಗಳನ್ನು ನಿಭಾಯಿಸಬೇಕಿರುವ ಯಡ್ಡಿಗೆ ನೆಮ್ಮದಿಯಿಂದ ಅಧಿಕಾರ ಅನುಭವಿಸುವ ಅವಕಾಶ ಸಿಗಲಿಕ್ಕಿಲ್ಲ. ಇಂತದ್ದ ಕ್ಕೆಲ್ಲಾ ತಲೆ ಕೊಟ್ಟು ಅಸಹಾಯಕ ಮುಖ್ಯಮಂತ್ರಿಯಾಗಿರುವುದಕ್ಕಿಂತ ತಾನೇ ಆಕ್ರಮಣಕಾರಿ ಧೋರಣೆ ತೋರಿಸಿದರೆ ಪರಿಸ್ಥಿತಿ ಕಂಟ್ರೋಲಿಗೆ ಸಿಗುತ್ತದೆಂಬುದು ಯಡ್ಡಿಗೆ ಚೆನ್ನಾಗಿ ಮನವರಿಕೆಯಾಗಿ ಹೋಗಿದೆ. ಹಾಗಾಗಿ ಸಿಎಂ ಆದ ತಕ್ಷಣ ಯಾರ ಅನುಮತಿಗೂ ಕಾಯದೆ ಬಿದರಿ, ಬಳಿಗಾರ್ ಮುಂತಾದವರನ್ನು ತಮ್ಮ ಆಪ್ತವಲಯಕ್ಕೆ ತಂದಿಟ್ಟುಕೊಂಡಿದ್ದಾರೆ.



ಯಡ್ಡಿಗೆ ಬೆಂಬಲ ನೀಡಲು ಗೌಡರು ಒಪ್ಪಿಕೊಂಡಾಗ ಹಿರಿಯ ಅಧಿಕಾರಿಗಳ ವರ್ಗಾವಣೆ, ನೇಮಕಾತಿ ಮಾಡುವಾಗ ಕುಮಾರಸ್ವಾಮಿಯೂ ಅದಕ್ಕೆ ಒಪ್ಪಬೇಕೆಂಬ ಶರತ್ತಿತ್ತಲ್ಲ. ಯಡ್ಡಿ ಅದನ್ನು ಕೇರ್ ಮಾಡಲೇ ಇಲ್ಲ. ಹಾಗೇ ನೇಮಕಗೊಂಡ ಬಿದರಿ ತಮ್ಮ ಕೆಪಾಸಿಟಿ ಏನೆಂಬುದನ್ನು ಈಗಾಗಲೇ ತೋರಿಸಿದ್ದಾರೆ. ಇತ್ತೀಚೆಗೆ ಜೆಡಿಎಸ್ ಶಾಸಕಾಂಗ ಸಭೆಯೊಳಗೆ ನಡೆದ ಜಗಳ, ರೇವಣ್ಣನ ಆರ್ಭಟ, ಗೌಡರ ಏಕಪಕ್ಷೀಯ ನಿರ್ಧಾರಗಳ ಬಗ್ಗೆ ದಳ ಶಾಸಕರು ರೇಗಿ ಬಿದ್ದ ವಿಚಾರಗಳೆಲ್ಲಾ ಮೀಡಿಯಾಗಳಿಗೆ ತಲುಪಿಸಿದ್ದೂ ಸಹ ಬಿದರಿಯವರ ಇಂಟಲಿಜೆನ್ಸ್ ಕೆಲಸದ ಒಂದು ಭಾಗವೇ ಆಗಿತ್ತು. ಇದರಿಂದ ಹಾನಿಯಾಗಿರುವುದು ಗೌಡರ ಫ್ಯಾಮಿಲಿಗೆ ವಿನಃ ಯಡ್ಡಿಗಲ್ಲ.

ನಾಳೆ ಆ ಶರತ್ತು ಈ ಶರತ್ತೆಂದು ದೇವೇಗೌಡರು ದಾಳ ಉರುಳಿಸುತ್ತಲೇ ಹೋದರೆ ತಾನು ಕೇವಲ ಡಮ್ಮಿ ಸಿಎಂ ಆಗಿರಬೇಕಾಗುತ್ತದೆಂಬುದನ್ನು ಅರಿತಿರುವ ಯಡ್ಡಿ ಅದಕ್ಕೆ ಪ್ರತಿತಂತ್ರ ಹೆಣೆಯುವುದು ಗ್ಯಾರಂಟಿ. ನಿರ್ಣಾಯಕ ಸಂದರ್ಭ ಬಂದುಬಿಟ್ಟರೆ ಖೇಣಿ-ಜನಾರ್ದನ ರೆಡ್ಡಿ ಕಾಂಬಿನೇಷನ್ನಿನಲ್ಲಿ ದಳ ವಿಭಜಿಸುವ ಒಂದು ಸ್ಕೆಚ್ಚೂ ಬಿಜೆಪಿ ಪಾಳೆಯದಲ್ಲಿದೆ. ಗೌಡರಿಗೆ ಆ ಅಪಾಯ ಗೊತ್ತಿರುವುದರಿಂದಲೇ ರೆಡ್ಡಿ-ಶ್ರೀರಾಮುಲುಗೆ ಅಧಿಕಾರ ಸಿಗದಂತೆ ಶರತ್ತು ವಿಧಿಸಿ, ನಗರಾಭಿವೃದ್ಧಿ (ಬಿಡಿಎ ಮೂಲಭೂತ ಸೌಕರ್ಯ ಸೇರಿದಂತೆ) ಇಲಾಖೆ ದಳಕ್ಕೆ ಬೇಕೆಂದು ಹಠ ಮಾಡುತ್ತಿದ್ದಾರೆ. ಖೇಣಿಯನ್ನು ಸಹಾಯಿಸಿ ಸುಸ್ತು ಮಾಡಿಸುವುದು ಹಾಗೂ ಆ ಮೂಲಕ ಖೇಣಿಗೆ ಯಡ್ಡಿ ನೆರವು ಸಿಗದಂತೆ ನೋಡಿಕೊಳ್ಳುವುದು ಗೌಡರ ಪ್ಲಾನ್.

ಇದರ ಜೊತೆಗೆ ಗೌಡರು ಗೃಹ ಖಾತೆಯನ್ನು ಕೇಳಿರುವುದರ ಹಿಂದೆ ಒಟ್ಟಾರೆ ಆಡಳಿತ ಯಂತ್ರ ದಳದ ಕೈಲಿರಬೇಕೆಂಬ ಉದ್ದೇಶದ ಭಾಗವಾಗಿದೆ. ನಾಳೆ ಅಕಸ್ಮಾತ್ ಗೃಹ ಖಾತೆ ದಳಕ್ಕೆ ಸಿಕ್ಕರೂ ಇಂಟಲಿಜೆನ್ಸ್ ಚೀಫ್ ಬಿದರಿ ಅವರ ಕಂಟ್ರೋಲಿಗೆ ಸಿಗುವುದಿಲ್ಲ. ಏಕೆಂದರೆ ಕರ್ನಾಟಕದಲ್ಲಿ ಮೊದಲಿಂದಲೂ ಗೂಢಚರ್ಯೆ ಮುಖ್ಯಸ್ಥರು ಗೃಹ ಸಚಿವರಿಗಿಂತ ನೇರ ಸಿಎಂರೊಂದಿಗೇ ವ್ಯವಹರಿಸುವ ಪರಿಪಾಠ ಬೆಳೆದು ಬಂದಿದೆ.

ಯಾವ ಶಾಸಕ ಇವತ್ತು ಯಾರನ್ನು ಭೇಟಿ ಮಾಡಿದ, ಯಾರ್‍ಯಾರು ಭಿನ್ನಮತೀಯ ಚಟುವಟಿಕೆ ನಡೆಸುತ್ತಿದ್ದಾರೆ, ಕುಮಾರಸ್ವಾಮಿಯ ಸದಾಶಿವನಗರದ ಗೆಸ್ಟ್ ಹೌಸಿಗೆ ಇವತ್ತು ಯಾರ್‍ಯಾರು ಬಂದು ಹೋದರು, ಅಲ್ಲಿ ಏನೇನು ಚರ್ಚೆಯಾಯಿತು, ಗೌಡರ ಹೊಸ ಮಸಲತ್ತು ಲೆಕ್ಕಾಚಾರಗಳೇನು, ಯಾವ್ಯಾವ ನಾಯಕ, ಶಾಸಕರ ವೀಕ್‌ನೆಸ್ ಏನೇನಿದೆ ಎಂಬಂಥ ತಲೆಬುಡಗಳನ್ನೆಲ್ಲಾ ಶೋಧಿಸುವ ಕೆಲಸ ಸುಲಭದ್ದಲ್ಲ. ಅದು ಎಷ್ಟೇ ಕಷ್ಟವಾದರೂ ಯಡ್ಡಿಗಂತೂ ಕುರ್ಚಿ ಉಳಿಸಿಕೊಳ್ಳಲು ಅವೆಲ್ಲಾ ಬೇಕೇ ಬೇಕಾಗುತ್ತದೆ. ಮತ್ತು ಬಿದರಿಗೆ ಅದನ್ನು ನಿಭಾಯಿಸುವಷ್ಟು ನೈಪುಣ್ಯತೆಯೂ ಇದೆ.

ಅಂದ ಹಾಗೆ ಗೆಸ್ಟ್‌ಹೌಸ್ ಅಂತ ಇರುವುದು ಬರೀ ಕುಮಾರಸ್ವಾಮಿ ಒಬ್ಬರಿಗೇ ಅಲ್ಲ.

ಗೂಢಚರ್ಯೆ ಮುಖ್ಯಸ್ಥ ಶಂಕರ್ ಬಿದರಿಯವರೂ ಈಗ ಒಂದು ಗೆಸ್ಟ್‌ಹೌಸ್ ಮೈಂಟೇನ್ ಮಾಡುತ್ತಿದ್ದಾರೆ.

ಯಡ್ಡಿ ಸಿಎಂ ಆಗಿ ಮುಂದುವರೆದಷ್ಟೂ ದಿನ ದೇವೇಗೌಡರು ತಂತ್ರ, ಪ್ರತಿತಂತ್ರ, ಪಿತೂರಿ ಮಾಡುವಾಗ ಬರೀ ಯಡ್ಡಿಯನ್ನು ಮಾತ್ರವಲ್ಲ ಶಂಕರ್ ಬಿದರಿಯ ಪ್ರತಿ ಸವಾಲನ್ನು ಎದುರಿಸಬೇಕಾಗುತ್ತದೆ.

-ಬಿಳಿದಾಳೆ ಈಶ

ರೆಂಬುದು ಇದಕ್ಕೆ ಪ್ರಮುಖ ಕಾರಣವಾಗಿತ್ತು.

ಇದು ಲಿಂಗಾಯತರ ಮುಖಂಡರ ಅಳಲಾದರೆ ಮತ್ತೊಂದು ಕಡೆ ಬಸವರಾಜನ್‌ರ ರಾಜಕೀಯ ಇಮೇಜು ಹಾಗೂ ನಿರ್ದಿಷ್ಟ ಪಕ್ಷವೊಂದರ ಜೊತೆ ಗುರುತಿಸಿಕೊಂಡದ್ದು ಶಿವಮೂರ್ತಿ ಮುರುಘಾಶರಣರಿಗೆ ಬಹಳಷ್ಟು ಸಂದರ್ಭಗಳಲ್ಲಿ ಮುಜುಗರದ ಪ್ರಸಂಗಗಳನ್ನೆದುರಿಸುವಂತಹ ಸಂದಿಗ್ಧತೆ ಹುಟ್ಟು ಹಾಕುತ್ತಿತ್ತೆನ್ನಲಾಗಿದೆ.

ಅದರಲ್ಲೂ ಉತ್ತರ ಕರ್ನಾಟಕದ ಕೆಲ ಪ್ರಮುಖ ಭಕ್ತಾದಿಗಳು ಶ್ರೀಮಠದಲ್ಲಿ ಶಿವಮೂರ್ತಿ ಮುರುಘಾಶರಣಗಿಂತ ಬಸವರಾಜನ್‌ರ ಕಾರುಬಾರುಗಳೇ ಪ್ರಾಬಲ್ಯ ಪಡೆದುಕೊಂಡಿವೆ ಎಂದು ತೀವ್ರ ಅತೃಪ್ತಿ ವ್ಯಕ್ತಪಡಿಸುತ್ತಿದ್ದರೆನ್ನಲಾಗಿದೆ.

ರಾಜಕೀಯ ಕಾರಣ ಹೊರತುಪಡಿಸಿದರೆ ಮುಂಚೂಣಿಗೆ ಬರುವ ಮತ್ತೊಂದು ಕಾರಣವೆಂದರೆ ಹಣಕಾಸಿನದ್ದು. ಬಸವರಾಜನ್ ಎಡ-ಬಲ ತಿರುಗಾಡಿಕೊಂಡಿರುವವರು ಮಠದ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಬರಿಗೈದಾಸರಾಗಿ ಬಂದವರೆಲ್ಲಾ ಲಕ್ಷಾಧೀಶರಾಗಿ, ಕೋಟ್ಯಾಧೀಶರುಗಳಾಗಿ ಮಿಂಚುತ್ತಿದ್ದಾರೆ. ಇದಕ್ಕೆಲ್ಲಾ ಬಸವರಾಜನ್ ಚತಾವಣೆಯೇ ಕಾರಣ ಎಂಬುದು ಪ್ರಮುಖ ಆರೋಪ. ಸದ್ಯಕ್ಕೀಗ ಉದಾಹರಣೆಯಾಗಿರುವವರು ವೀರಶೈವ ಸಮಾಜದ ಅಧ್ಯಕ್ಷ ಸುರೇಶ್‌ಬಾಬು ಅಲಿಯಾಸ್ ಸೈಟ್‌ಬಾಬು ಹಾಗೂ ಈತನ ಸಹೋದರ ಚಂದ್ರಪ್ಪ, ತಿಪ್ಪೇಸ್ವಾಮಿ ಅಲಿಯಾಸ್ ಉಂಗುರದ ತಿಪ್ಪಣ್ಣ, ಬಸವರಾಜನ್ ಬೆಂಗಳೂರು ಸೇರಿದಂತೆ ಕೆಲ ಪ್ರಮುಖ ನಗರಗಳಲ್ಲಿ ಮಾಡುತ್ತಿದ್ದರೆನ್ನಲಾಗಿರುವ ರಿಯಲ್ ಎಸ್ಟೇಟ್ ವ್ಯವಹಾರಗಳೆಲ್ಲಾ ಈ ಸೈಟ್ ಬಾಬು ಹೆಸರಲ್ಲೇ ಬೇನಾಮಿಯಾಗಿ ನಡೆಯುತ್ತಿವೆ ಎಂಬುದು ಪ್ರಮುಖ ಆರೋಪ. ಇದರ ಜೊತೆಗೆ ಮೈನಿಂಗ್ ವ್ಯವಹಾರವನ್ನೂ ಬೇನಾಮಿಯಾಗಿ ಮಾಡುತ್ತಿದ್ದಾರೆಂಬುದು ಮುಂದುವರಿದ ಆರೋಪ.

ರಾಜಕೀಯ-ಹಣಕಾಸು ವ್ಯವಹಾರದ ಕಾರಣಗಳು ಒಂದು ಕಡೆಯಾದರೆ ಮತ್ತೊಂದು ಕಡೆ ಶಿವಮೂರ್ತಿ ಶರಣರಿಗೆ ನೋವುಂಟು ಮಾಡುವ ವಿದ್ಯಮಾನಗಳು ಮೇಲಿನಿಂದ ಮೇಲೆ ಮರುಕಳಿಸುತ್ತಿದ್ದವೆನ್ನಲಾಗಿದೆ. ಬಹಳ ಹಿಂದೆ ಇಂಥದ್ದೇ ಒಂದು ಸಂದರ್ಭದಲ್ಲಿ ಶಿವಮೂರ್ತಿ ಮುರುಘಾ ಶರಣರು ಬಾಡಿಗೆ ಕಾರಿನಲ್ಲಿ ತಮ್ಮ ಪ್ರವಾಸ ಕಾರ್ಯಕ್ರಮ ಹೊರಡಿಸುವಂತಹ ಪರಿಸ್ಥಿತಿ ಬಂದಿತ್ತೆಂಬುದು ಅದರಲ್ಲೊಂದು. ಮಠದ ವಿದ್ಯಮಾನಗಳನ್ನು ಅವಲೋಕಿಸುವವರು ಪೀಠಾಧಿಪತಿಯಾಗಿ ಶಿವಮೂರ್ತಿ ಶರಣರಿಗೆ ಯಾವ ಹಿಡಿತವೂ ಇಲ್ಲ, ಎಲ್ಲವೂ ಬಸವರಾಜನ್ ಆಣತಿಯಂತೆಯೇ ನಡೆಯುತ್ತಿವೆಯೆಂಬಂತೆ ತೀವ್ರ ಮುಜುಗರದ ಆರೋಪಗಳಿಗೂ ಗುರಿ ಮಾಡಿದರು. ಇಂತಹ ಕಾರಣಗಳೇ ಪ್ರಮುಖವಾಗಿ ಎಸ್.ಕೆ. ಬಸವರಾಜನ್‌ರ ಪ್ರಾಬಲ್ಯ ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದ ತೊಂದರೆಗಳಿಗೆ ದಾರಿ ಮಾಡಬಹುದೆಂಬ ಕಾರಣದಿಂದಲೇ ಶಿವಮೂರ್ತಿ ಮುರುಘಾ ಶರಣರು ಪದಚ್ಯುತಿಯಂತಹ ಕಠಿಣ ನಿರ್ಧಾರಕ್ಕೆ ಕೈಗೊಂಡಿದ್ದಾರೆನ್ನಲಾಗಿದೆಯಂತೆ. ಬಸವರಾಜನ್ ಸಕ್ರಿಯ ರಾಜಕೀಯದಲ್ಲಿದ್ದರೂ ಬೃಹನ್ಮಠದ ಅಭಿವೃದ್ಧಿಯನ್ನು ಎಂದೂ ಕಡೆಗಣಿಸಿಲ್ಲ, ನೂರಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಅವುಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಬಸವರಾಜನ್ ಮಠದ ಹೆಸರಲ್ಲಿ ಸಾಲ ಮಾಡಿದ್ದಾರೆಂಬುದೆಲ್ಲಾ ಬಸವರಾಜನ್ ವಿರೋಧಿಗಳ ಅಪಪ್ರಚಾರ. ಮೆಡಿಕಲ್ ಕಾಲೇಜು ಸ್ಥಾಪನೆ ಹಾಗೂ ಅದಕ್ಕೆ ಮಾನ್ಯತೆ ಪಡೆಯುವ ಪ್ರಕ್ರಿಯೆಯಲ್ಲಿ ಬೃಹತ್ ಪ್ರಮಾಣದ ಹಣ ವ್ಯಯವಾಗಿದೆ. ಈಗ ಮೆಡಿಕಲ್ ಕಾಲೇಜಿಗೆ ಮಾನ್ಯತೆ ಸಿಕ್ಕಿದೆ. ಆ ಹಣ ವಾಪಸು ಬಂದೇಬರುತ್ತದೆ. ಈ ಶೈಕ್ಷಣಿಕ ವರ್ಷದಲ್ಲಿ ಮಠದ ಶಿಕ್ಷಣ ಸಂಸ್ಥೆಗಳಿಂದ ಸುಮಾರು 10 ಕೋಟಿಗೂ ಹೆಚ್ಚು ಲಾಭವಾಗಿದೆ. ಬಾಳ ಕೈಗೆಟುಕುವ ಸಂದರ್ಭದಲ್ಲಿ ತಕರಾರು ಮಾಡಲಾಗುತ್ತಿದೆ.



ಮಠದಲ್ಲಿ ಪೊಲೀಸರು

ಬಹಳ ಮುಖ್ಯವಾಗಿ ಶ್ರೀಮಠದ ಕೈತಪ್ಪಿ ಹೋಗಲಿದ್ದ ನೂರಾರು ಎಕರೆ ಆಸ್ತಿಪಾಸ್ತಿಯನ್ನು ಹೋರಾಟ ಮಾಡಿ ಸಂರಕ್ಷಿಸಿದ್ದಾರೆ. ದಾವಣಗೆರೆ, ಕೊಡಗು, ಬೆಂಗಳೂರು ಇಂತಲ್ಲೆಲ್ಲಾ ನೂರಾರು ಎಕರೆ ಜಮೀನಿದೆ. ಇವೆಲ್ಲಾ ಬಸವರಾಜನ್ ಹೆಸರಲಿಲ್ಲ, ಶ್ರೀಮಠದ ಹೆಸರಲ್ಲಿವೆ. ಮುರುಘಾಮಠ ಸೇರಿದಂತೆ ಕೋಟ್ಯಂತರ ಬೆಲೆಬಾಳುವ ಶಿಕ್ಷಣ ಸಂಸ್ಥೆಗಳ ನಿರ್ಮಾಣವಾಗಿದೆ. ರಾಜಕೀಯದಲ್ಲಿ ಹಣ ಖರ್ಚು ಮಾಡಿದಾಕ್ಷಣ ಅದೆಲ್ಲಾ ಮಠದ್ದೇ ಎಂದು ಹೇಳಲು ಬರುವುದಿಲ್ಲ. ಬಸವರಾಜನ್ ವಿರುದ್ಧ ಆರೋಪ ಮಾಡುವವರು ದಾಖಲೆ ಸಮೇತ ಮಾತನಾಡಲಿ ಎನ್ನುವವರೂ ಇದ್ದಾರೆ ಎಂಬ ಪ್ರತಿವಾದಗಳೂ ಇವೆ. ಕಾಲವೇ ಇದಕ್ಕೆ ಉತ್ತರ ಹೇಳಬೇಕಷ್ಟೆ.

ಬಸವರಾಜನ್ [illegible]

ಶಿಷ್ಪಾರೆಡ್ಡಿಗೆ ಸಂತಸ ಸಂದ ಜಗಳ

ಬಸವರಾಜನ್ ಪದಚ್ಯುತಿ ಪ್ರಹಸನದಿಂದ ನಿಜಕ್ಕೂ ಸಂತೋಷಗೊಂಡವರು ಹಾಲಿ ಶಾಸಕ ಜಿ.ಎಸ್. ಶಿಷ್ಪಾರೆಡ್ಡಿ ಮತ್ತವರ ಬೆಂಬಲಿಗರು. ಬಸವರಾಜನ್‌ಗೆ ಶ್ರೀಮಠದ ಆಡಳಿತಾಧಿಕಾರಿ ಎಂಬ ಇಮೇಜು ಚುನಾವಣೆಯಲ್ಲಿ ನಿರ್ಣಾಯಕವಾದ ಹಾಗೂ ಸಕಾರಾತ್ಮಕ ಪ್ರಭಾವ ಬೀರುತ್ತಿತ್ತು, ಜೊತೆಗೆ ಹಣದ ಖರ್ಚಿಗೂ ಶ್ರೀಮಠ ಬೆನ್ನಲುಬಾಗಿತ್ತು. ಈಗ ಅಂತಹ ಅವಕಾಶವೇ ಕೈತಪ್ಪಿರುವುದರಿಂದ ಬಸವರಾಜನ್ ವರ್ಚಸ್ಸು ರಾಜಕೀಯವಾಗಿ ಕ್ಷೀಣಿಸಲಿದೆ ಎಂಬುದು ಶಾಸಕ ಜಿ.ಎಚ್. ಶಿಷ್ಪಾರೆಡ್ಡಿ ಮತ್ತವರ ಬೆಂಬಲಿಗರ ಲೆಕ್ಕಾಚಾರ.



ಆದರೆ ಬಸವರಾಜನ್ ಬೆಂಬಲಿಗರ ಪ್ರಕಾರ ಬಸವರಾಜನ್ ರಾಜಕೀಯ ಜೀವನ ಅಬಾಧಿತ. ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ನೇರವಾಗಿ ಸಕ್ರಿಯ ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಹಲವು ರೀತಿಯ ಅಡೆತಡೆಗಳಿದ್ದವು. [illegible] ಸಮಯದ ಕೊರತೆ ಇತ್ತು, ಈಗ ಅಂತಹ ಯಾವುದೇ ನಿರ್ಬಂಧಗಳಿಲ್ಲ, ಇನ್ನು ಹೆಚ್ಚು ಜನ ಸಂಪರ್ಕ ಬೆಳೆಸಿಕೊಂಡು ಆಯ್ಕೆಯಾಗಲು ಅನುಕೂಲವಾಗಿದೆ ಎನ್ನುತ್ತಾರೆ.

ಇದಿಷ್ಟು ಅಭಿಪ್ರಾಯ ಬಸವರಾಜನ್ ಪರವಾಗಿ [illegible]

ಶಾಸಕಾಂಗದಂತೆ ಕೆಲ ಲಿಂಗಾಯತ ಮುಖಂಡರಗಳೂ ಕೂಡಾ ಈ ಬಸವರಾಜನ್ ರಾಜಕೀಯಕ್ಕೆ ಹೋದಾಗಿನಿಂದ [illegible]

ಗಂವ್ಹಾರದಲ್ಲೊಂದು ಸಹಸ್ರಚಂಡಿಯಾಗ

ಬಸವಾದಿ ಶರಣರ ನೆಲದಲ್ಲೂ ಪುರೋಹಿತರ ಅಟ್ಟಹಾಸ

[illegible] 'ಕೋ-ಖಾ' [illegible] ನಾಂಘಲ್' [illegible] ಮುಂತೆ ದುಡುಕಿನಲಿ ಯಾರಿಗೂ [illegible] ಕೈಗೆ ಸಿಕ್ಕಷ್ಟೇ ಜನರ ಜೇಬುಗಳನ್ನು [illegible] ಪುರೋಹಿತರು ಈಗ ಧಾರಾಳವಾಗಿಯೇ ಎಲ್ಲರ ಜೇಬುಗಳಿಗೆ ಕೈ ಹಾಕುತ್ತ ಮುನ್ನಡೆದಿದ್ದಾರೆ. ಇದು ಹೀಗೆಯೇ ಮುಂದುವರೆದರೆ ಮುಂದೊಂದು ದಿನ ಕರ್ನಾಟಕವು ಸಂಪೂರ್ಣವಾಗಿ ಪುರೋಹಿತಮಯವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಮಾಜಿ ಮುಖ್ಯ ಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಅವರ ಪಿತಾಮಹ ದೇವೇಗೌಡ ಹಾಗು ಸಹೋದರ ರೇವಣ್ಣ ಎಂಬ ತ್ರಿಮೂರ್ತಿಗಳು ಪುರೋಹಿತರಿಗೆ ತಗಲು ಬಿದ್ದಷ್ಟು ಯಾವ ಮುಖ್ಯಮಂತ್ರಿಗಳೂ, ಪ್ರಧಾನಿಗಳೂ ತಗುಲಿಕೊಂಡಿರಲಿಲ್ಲ. ದಿನಬೆಳಗಾದರೆ ಸಾಕು, ಇವರು ತಮ್ಮ ಬೂದಿ ಲೇಪಿತ ಮುಖ ಹೊತ್ತುಕೊಂಡು ಯಾವುದಾದರೂ ಗುಡಿ-ಗುಂಡಾರಕ್ಕೋ, ಅಥವಾ ಯಾವನೋ ಒಬ್ಬ ಜ್ಯೋತಿಷಿಯನ್ನೋ ಹುಡುಕಿಕೊಂಡು ಹೊರಡದಿದ್ದರೆ ಅವರ ಜನುಮ ಸಾರ್ಥಕವಾಗುವುದಿಲ್ಲ.

ಇನ್ನು ಈಗ ಮುಖ್ಯಮಂತ್ರಿಯಾಗಿರುವ ಯಡಿಯೂರಪ್ಪ ಎಂಬ ಆಸಾಮಿಯಂತೂ ತನ್ನ ಕೆಲಸವೇನಿದ್ದರೂ ಮಠಾಧೀಶರ, ಸ್ವಾಮಿಗಳ, ದೇವರುಗಳ ಪಾದಗಳಿಗೆ ಬೀಳುವುದೆಂದೇ ತೀರ್ಮಾನಿಸಿರುವಂತಿದೆ. ಎದ್ದರೆ, ಕುಳಿತರೆ, ಸೀನಿದರೆ, ಏನು ಮಾಡಿದರೂ ಪುರೋಹಿತರ ಆದೇಶದಂತೆಯೇ ಮಾಡುವ ಈತ ಇನ್ನು ಮುಂದೆ ಸರಕಾರವನ್ನೂ ಅದೇ ರೀತಿಯಲ್ಲಿ ನಡೆಸುವ ಸೂಚನೆಯನ್ನು ತೋರುತ್ತಿದ್ದಾನೆ. ವಿಧಾನಸೌಧದ ಮುಖ್ಯಮಂತ್ರಿಯ ಕೊಠಡಿಯಲ್ಲೇ ಹೋಮ ಹವನ ಮಾಡಿಸಿ ಅಲ್ಲೂ ಪುರೋಹಿತರ ದರ್ಬಾರಿಗೆ ನಾಂದಿ ಹಾಡಿದ್ದಾನೆ.



ಗಂವ್ಹಾರ ಮಠದಲ್ಲಿ ನಡೆದ ಸಹಸ್ರಚಂಡಿ ಯಾಗ

ಇದೆಲ್ಲದರಿಂದ ಉತ್ತೇಜಿತರಾದ ಪುರೋಹಿತರು ಮತ್ತೆ ಚಿಗಿತುಕೊಂಡು ತಮ್ಮ ಹಳೆಯ ವರಸೆಗಳಲ್ಲಿ ತೊಡಗಿ ಜನರ ತಲೆಗೆ ಎಣ್ಣೆ ತಿಕ್ಕುತ್ತಿದ್ದಾರೆ. ಇಂತಹ ಸಂದರ್ಭಕ್ಕಾಗಿಯೇ ಅಟ ಕಾಯಿಸಿಕೊಂಡು ಕುಳಿತುಕೊಂಡಿದ್ದಂತೆ ಕಲಬುರ್ಗಿಯ ಬಸವಾದಿ ಶರಣರ ನೆಲದಲ್ಲೂ ಈ ಪುರೋಹಿತರ ಅಟ್ಟಹಾಸ ಶುರುವಾಗಿದೆ. ಜಿಲ್ಲೆಯ ಜೇವರ್ಗಿ ತಾಲೂಕಿನಿಂದ 20 ಕಿ.ಮೀ ದೂರ ಇರುವ ಗಂವ್ಹಾರ ಎಂಬ ಸಣ್ಣ ಊರಿನಲ್ಲಿ ಸೋಪನಾಥ ಸ್ವಾಮಿಗಳ ಮಠವೊಂದು ಇದೆ.

ನಾಥ ಪರಂಪರೆಗೆ ಸಂಬಂಧಿಸಿದ ಈ ಮಠದ ಪೂರ್ವಜರು ಶ್ರೀ ತ್ರಿವಿಕ್ರಮಾನಂದ ಸರಸ್ವತಿ ಸ್ವಾಮಿಗಳು. ಅವರು ತೀರಾ ಇತ್ತೀಚಿನ ದಿನಗಳಲ್ಲಿ ಬದುಕಿ ಬಾಳಿ ಹೋದವರು. ವಾಸುದೇವ ನಾಯಕ ಎಂಬ ಸುರಪುರದ ದೊರೆಗಳ ದರ್ಬಾರಿನ ರಾಜಗುರುಗಳಾಗಿದ್ದವರು. ಜಾತಿಭೇದಗಳನ್ನು ಮೀರಿನಿಂತ ವ್ಯಕ್ತಿತ್ವ ಅವರದ್ದು. ಸ್ವತಃ ತಮ್ಮ ಮಗನಾದ ಶಂಕರಶಾಸ್ತ್ರಿಯೇ ತಪ್ಪು ಮಾಡಿದಾಗ ಅದನ್ನು ಯಾವ ಮುಲಾಜಿಲ್ಲದೆ ಖಂಡಿಸಿದ್ದವರು. ಜ್ಞಾನದಾಹದ ಜೊತೆಗೆ ಅನ್ನ ದಾಸೋಹವನ್ನು ಜನತೆಗೆ ಉಣಬಡಿಸಿದ್ದವರು.

ಆದರೆ ಇಂಥವರ ಮಠಕ್ಕೆ ಈಗ ಅಮರಿಕೊಂಡಿರುವ ಚಂದ್ರಭಟ್ಟರು ಉರ್ಫ್ ಸೋಪನಾಥ ಎಂಬ ಘಟಿಂಗ ಥೇಟ್ ತಲೆಬೋಳಿಸುವ ಕೆಲಸಕ್ಕೆ ಹೆಸರಾದವರು. ಈ ತಲೆಬೋಳಿಸುವುದು ಯಾರಿಗಾದರೂ ಕಾಣಿಸುತ್ತದೆ

ಹುಬ್ಬಳ್ಳಿಯ ಉರ್ದು ಶಾಲೆಗೆ ಗಂಟುಬಿದ್ದ ಚೆಡ್ಡಿಗಳು

ಹುಬ್ಬಳ್ಳಿಯ ನೆಮ್ಮದಿಗೆ ಬೆಂಕಿ ಇಟ್ಟೇ ತೀರುತ್ತೇವೆಂದು ಚೆಡ್ಡಿಗಳು ಪಣ ತೊಟ್ಟಂತಿದೆ. ಈದ್ಗಾ ಮೈದಾನ, ರಾಮಸೇತು, ಬಾಬಾಬುಡನ್‌ಗಿರಿ ಎಂದೆಲ್ಲಾ ಹುಚ್ಚರಂತೆ ಕಿಚ್ಚುಹಚ್ಚಿದ್ದು ಸಾಲದೆಂಬಂತೆ ಈಗ ಹೊಸದೊಂದು ಕ್ಯಾತೆ ತೆಗೆದಿದ್ದಾರೆ; ಮುಸ್ಲಿಮ್ ಮಕ್ಕಳು ಓದುವುದಕ್ಕೊಂದು ಉರ್ದು ಶಾಲೆಯಿರಲಿ ಎಂದು ಹಲವಾರು ಜನ ಕಷ್ಟಪಟ್ಟು ಪ್ರಯತ್ನ ನಡೆಸುತ್ತಿದ್ದರೆ ಈ ಚೆಡ್ಡಿವೀರರು ಹೇಗಾದರೂ ಮಾಡಿ ಅದಕ್ಕೆ ಕಲ್ಲುಹಾಕಲು ಹೊರಟಿದ್ದಾರೆ. ಈ ಚೆಡ್ಡಿ ಚತುರರಿಗೆ ನಾಯಕತ್ವ ವಹಿಸುತ್ತಿರುವವನು ಸಂಜು ಬಡಾಸ್ಕರ್ ಎಂಬ ಮೊದ್ದು ವಕೀಲ. ಅವನ ಮಂಗಾಟಗಳಿಗೆ ಹುಬ್ಬಳ್ಳಿಯ ಪೊಲೀಸರೂ ಬೆಂಬಲವಾಗಿ ನಿಂತಿರುವುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ.

ಹುಬ್ಬಳ್ಳಿಯಲ್ಲಿ ಉಣಕಲ್ ಎಂಬ ಗ್ರಾಮವೊಂದಿದೆ. ಈ ಹಿಂದೆ ಶಹರದ ಹೊರಗಿದ್ದ ಈ ಪ್ರದೇಶ ಈಗ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬಂದಿದ್ದರೂ ಅಲ್ಲಿನ ಜನಕ್ಕೇನೂ ಅದರಿಂದ ವಿಶೇಷ ಉಪಯೋಗವಾಗಿಲ್ಲ. ಜೀವನಾಧಾರಕ್ಕಾಗಿ ಒಕ್ಕಲುತನವನ್ನೇ ಆಶ್ರಯಿಸಿದ್ದ ಈ ಜನ ಜಾತಿ, ಮತ, ಧರ್ಮಗಳ ತಾರತಮ್ಯವಿಲ್ಲದೆ ಅನ್ಯೋನ್ಯವಾಗಿ, ಸೌಹಾರ್ದವಾಗಿ ಬದುಕುತ್ತಿರುವ ಇವರನ್ನು ಅವರ ಪಾಡಿಗೆ ಬದುಕಲು ಈ ಚೆಡ್ಡಿಗಳು ಬಿಡಬೇಕಲ್ಲ? ಹೇಗಾದರೂ ಸರಿ ಈ ಅನ್ಯೋನ್ಯತೆಗೆ ಬೆಂಕಿಯಿಡಬೇಕೆಂದು ಈಗ ಸಂಜು ಬಡಾಸ್ಕರ್ ಅಂಡ್ ಗ್ಯಾಂಗ್ ಕಿತಾಪತಿ ಮಾಡುತ್ತಿದೆ. ಅದಕ್ಕಾಗಿಯೇ ಈ ಉರ್ದು ಶಾಲೆಯ ವಿಚಾರವನ್ನು ವಿವಾದವನ್ನಾಗಿ ಸೃಷ್ಟಿಸಲು ಹೊರಟಿದೆ.

[illegible]

ಉಣಕಲ್ ಗ್ರಾಮದ ಬಡ ಮುಸ್ಲಿಮ್ ರೈತಾಪಿ ಜನರ ಮಕ್ಕಳಿಗೆ ಅನುಕೂಲವಾಗಲೆಂದು 75 ವರ್ಷಗಳ ಹಿಂದೆಯೇ ಅಲ್ಲೊಂದು ಉರ್ದುಶಾಲೆ ಪ್ರಾರಂಭವಾಗಿತ್ತು. ಈ ಕುಟುಂಬಗಳ ಮಾತೃಭಾಷೆ ಉರ್ದು ಆಗಿರುವುದರಿಂದ ಮಕ್ಕಳೂ ಉರ್ದುಶಾಲೆಯಲ್ಲಿ ಓದುವುದು ಸಹಜವೂ, ನ್ಯಾಯಸಮ್ಮತವೂ ಅಲ್ಲದೆ ಅವರ ಹಕ್ಕೂ ಆಗಿತ್ತು. ಈ ಶಾಲೆ ಪ್ರಾರಂಭದಲ್ಲಿ ರಾಜಣ್ಣ ಪಾಟೀಲ್ ಎಂಬುವವರ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿತ್ತು. ತೀರಾ ಶಿಥಿಲವಾಗಿದ್ದ ಈ ಕಟ್ಟಡ 1992ರ ಮಳೆಗಾಲದಲ್ಲಿ ಬಿದ್ದುಹೋಯಿತು; ಅದರ ಜಾಗವೂ ಮಾರಾಟವಾಯಿತು. ಸರ್ಕಾರವಂತೂ ಈ ಬಡ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಏಕೆಂದರೆ ಒಟ್ಟಾರೆಯಾಗಿ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ಕೊಡಬೇಕೆಂದರೇನೇ ಸರ್ಕಾರಕ್ಕೆ ಹೊಟ್ಟೆನೋವು ಶುರುವಾಗಿಬಿಡುತ್ತೆ; ಅದರಲ್ಲೂ ಮುಸ್ಲಿಮ್ ಮಕ್ಕಳು ಓದುವ ಉರ್ದು ಶಾಲೆಯೆಂದರೆ ಕೇಳಬೇಕೆ? ಬೇಧಿಯೇ ಶುರುವಾಗುತ್ತದೆ. ಹೀಗಾಗಿ ಸರ್ಕಾರವನ್ನು ನಂಬಿಕೊಂಡ [illegible] ಕೊನೆಗೆ ಊರಿನ ಜನರೇ [illegible] ದೇವರನ್ನು ಕೂಡಿಸುವ ಜಾಗದಲ್ಲಿಯೇ [illegible] ಶಾಲೆಯನ್ನು ಪ್ರಾರಂಭಿಸಿದರು.


ಎಷ್ಟು ದಿನ ಅಂತ ಅಲ್ಲೇ ಶಾಲೆ ನಡೆಸೋಕಾಗುತ್ತೆ ಅಂತ ಯೋಚಿಸಿ ಸಮುದಾಯದವರು ಎಲ್ಲಾ ರಾಜಕೀಯ ಪಕ್ಷಗಳ ಬಾಗಿಲನ್ನು ತಟ್ಟಿಯಾಯಿತು. ಯಾರೂ ಕಿವಿಗೊಡಲಿಲ್ಲ. ಕೊನೆಗೆ, ಉರ್ದು ಶಾಲೆಯನ್ನು ನಡೆಸುವುದಕ್ಕಾಗಿ ಯಾರಿಂದಲಾದರೂ ಜಮೀನನ್ನು ಬಾಡಿಗೆಗೆ ಪಡೆಯಬಹುದೆಂಬ ನಿರ್ಧಾರಕ್ಕೆ ಬಂದರು. ಅದೂ ಬಹಳ ದಿನ ನಡೆಯಲಿಲ್ಲ.

ದಾನವಾಗಿ ಬಂದ ಜಾಗಕ್ಕೂ ಚೆಡ್ಡಿಗಳ ಕ್ಯಾತೆ

ಮುಸ್ಲಿಮ್ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಶಾಲಾ ಕಟ್ಟಡ ನಿರ್ಮಾಣಕ್ಕೆ ಉಣಕಲ್ ಗ್ರಾಮದ ಕೃಷಿಕ ಮಹಿಳೆ ಶಬಾನಾಭಾನು ದಾಮಸಾಬ್ ನದಾಫ್ ಅವರು ಕ್ಷೇತ್ರ ಶಿಕ್ಷಣಾಧಿಕಾರಿ ಹುಬ್ಬಳ್ಳಿ ಇವರಿಗೆ ದಿನಾಂಕ 13.9.2007ರಂದು 26 ಗುಂಟೆ 5 ಆಣೆ ಜಾಗವನ್ನು ದಾನವಾಗಿ ಕೊಟ್ಟಿದ್ದಾರೆ. ಇದು ಹುಬ್ಬಳ್ಳಿಯ ಅಧಿಕಾರಿ ಎದುರು ನೊಂದಣಿ ಕೂಡ ಆಗಿದೆ. ಇಲ್ಲಿ ಎರಡು ಶಾಲಾ ಕೊಠಡಿಗಳನ್ನು ಕಟ್ಟುವುದಕ್ಕಾಗಿ ನಲವತ್ತು ಸಾವಿರ ರೂಪಾಯಿ ಮಂಜೂರಾಗಿದೆ. ಕಟ್ಟಡ ನಿರ್ಮಾಣಕ್ಕೆ ಹಿಂದಿನ ಶಿಕ್ಷಣ ಸಚಿವರಾದ ಬಸವರಾಜ್ ಹೊರಟ್ಟಿಯವರು ಗುದ್ದಲಿ ಪೂಜೆ ಕೂಡ ಮಾಡಿಹೋದರು.



ಸರ್ಕಾರಿ ಉರ್ದು ಶಾಲೆ



ರಾತ್ರೋರಾತ್ರಿ ಉದ್ಭವವಾದ ದೇವಸ್ಥಾನ


ಕಟ್ಟಡ ನಿರ್ಮಾಣ ಕಾರ್ಯ ಇನ್ನೇನು ಪ್ರಾರಂಭವಾಗಬೇಕು ಎನ್ನುವಷ್ಟರಲ್ಲಿ ಬಸವರಾಜ್ ಬಡಾಸ್ಕರ್ ಅಂಡ್ ಗ್ಯಾಂಗ್ ಕ್ಯಾತೆ ತೆಗೆದುಕೊಂಡು ಕುಳಿತಿದೆ. ಈ ಜಾಗಕ್ಕೂ ಹೊಂದಿಕೊಂಡಂತೆ ಪಾರ್ಕ್‌ಗಾಗಿ ಮೀಸಲಿಟ್ಟ ಜಾಗ ಇದೆ. ಇದರ ಜೊತೆಗೆ ಇನ್ನೊಂದೆಡೆ ಹನುಮಂತಗೌಡ ಎಂಬುವವರ ಖಾಸಗಿ ಜಾಗ ಕೂಡ ಇದೆ. ಶಾಲಾ ಕಟ್ಟಡದ ಮುಖ್ಯದ್ವಾರದ ಎದುರೇ ಬಡಾಸ್ಕರ್‌ನ ಗ್ಯಾಂಗ್ ರಾತ್ರೋರಾತ್ರಿ ದೇವಸ್ಥಾನವೊಂದನ್ನು ಎಬ್ಬಿಸಿದೆ. ಪಾರ್ಕ್ ಜಾಗದಲ್ಲಿ ಉರ್ದುಶಾಲೆ ಕಟ್ಟಲಾಗಿದೆ, ಇದು ತಪ್ಪು ಎಂದು ಹಸಿಹಸಿ ಸುಳ್ಳುಗಳನ್ನು ಹರಡಿ ಪ್ರಚಾರ ಮಾಡುತ್ತಿದ್ದಾರೆ. ಆ ಮೂಲಕ ಇಡೀ ಹುಬ್ಬಳ್ಳಿ ಜನರ ದಿಕ್ಕುತಪ್ಪಿಸಿ ಕೋಮುಗಲಭೆ ಹಚ್ಚಲು ಪ್ರಯತ್ನಿಸುತ್ತಿದ್ದಾರೆ. ವಾಸ್ತವದಲ್ಲಿ ಅದೇ ಪಾರ್ಕ್ ಜಾಗದಲ್ಲಿ ಇವರು ದೇವಾಲಯ ಕಟ್ಟಿದ್ದೇ ತಪ್ಪು ಎಂದು ಅವರಿಗೆ ಉಗಿದು ಹೇಳುವವರ್‍ಯಾರು? ಅದನ್ನು ಮಾಡಬೇಕಾದ ಪೊಲೀಸರು ಇಂದು ಅವರ ಜೊತೆ ಕೈಜೋಡಿಸಿದ್ದಾರೆ. ಏಕೆಂದರೆ, ಇದೇ 16ರಂದು ಅದರ ಸರ್ವೆ ನಡೆಯಬೇಕಿತ್ತು, ಆದರೆ ಪೊಲೀಸರು ಸ್ಥಳದಲ್ಲಿಯೇ ಇದ್ದರೂ ಸರ್ವೆ ನಡೆಸುವುದಕ್ಕೆ ಅವಕಾಶವನ್ನೇ ಕೊಟ್ಟಿಲ್ಲ. ಈಗ ಉರಿಯುತ್ತಿರುವ ಬೆಂಕಿಗೆ ತುಪ್ಪ ಸವರಲು ತಿಪ್ಪಣ್ಣ ಮದ್ದಿಗ್ಗಿ ಎಂಬ ಕಾರ್ಪೊರೇಟರ್ ಎಂಟ್ರಿಯಾಗಿದ್ದಾನೆ. ಅದೇನು ರಂಪ ಮಾಡುತ್ತಾನೋ ನೋಡಬೇಕು.

ಒಟ್ಟಿನಲ್ಲಿ, ಹುಬ್ಬಳ್ಳಿಗೆ ಬೆಂಕಿ ಹಚ್ಚೇ ತೀರುತ್ತೇವೆಂದು ಹೊರಟಿರುವ ಚೆಡ್ಡಿಗಳ ಹುನ್ನಾರವನ್ನು ಮತ್ತವರಿಗೆ ಬೆಂಗಾವಲಾಗಿ ನಿಂತಿರುವ ಪೊಲೀಸರನ್ನು ಜನತೆಯ ಮುಂದೆ ಬಯಲುಗೊಳಿಸಿ ಹೋರಾಡುವುದಕ್ಕಾಗಿ ಹುಬ್ಬಳ್ಳಿಯ ಪ್ರಜ್ಞಾವಂತ ಪ್ರಜೆಗಳು, ಪ್ರಗತಿಪರರು ಸಜ್ಜಾಗಿದ್ದಾರೆ. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಬ್ಯಾನರ್‌ನಡಿಯಲ್ಲಿ ಒಂದು ಪ್ರಬಲ ಹೋರಾಟವನ್ನು ಕಟ್ಟುವ ತಯಾರಿಯಲ್ಲಿದ್ದಾರೆ. ಪೊಲೀಸ್ ಕಮೀಶನರ್ ನಾರಾಯಣ ನಡುಮನಿ ಮತ್ತು ಮಹಾನಗರ ಪಾಲಿಕೆ ಆಯುಕ್ತ ಡಾ. ಅಜಯ್ ಅವರು ಉರ್ದು ಶಾಲೆಯ ವಿಚಾರದಲ್ಲಿ ಮುಸ್ಲಿಮ್ ಸಮುದಾಯಕ್ಕೆ ನ್ಯಾಯ ಒದಗಿಸುತ್ತಾರೋ ಅಥವಾ ಹುಬ್ಬಳ್ಳಿಯನ್ನು ರಕ್ತಸಿಕ್ತ ಮಾಡುವುದಕ್ಕೆ ಅವಕಾಶ ನೀಡುತ್ತಾರೋ ಎಂಬುದನ್ನು ಕಾದು ನೋಡಬೇಕಷ್ಟೆ.

-ವರದಿಗಾರ

ಹಜರತ್ ಅಲಿ ದೊಡ್ಡಮನಿ ಎಂಬ ಖೋಮೇನಿ!

ಹುಬ್ಬಳ್ಳಿಯಲ್ಲಿ ಹಜರತ್ ಅಲಿ ಎಂಬ ಖೋಮೇನಿಯೊಬ್ಬನಿದ್ದಾನೆ. ಮುಸ್ಲಿಮ್ ಸಮುದಾಯವನ್ನು ಉದ್ಧಾರ ಮಾಡುತ್ತೇನೆಂದು ಪುಂಗಿ ಊದುತ್ತಲೇ ಮುಸಲ್ಮಾನರ ಮತಗಳನ್ನು ಕಿತ್ತು ಎರಡು ಬಾರಿ ಮಹಾನಗರ ಪಾಲಿಕೆಗೆ ಆಯ್ಕೆಯಾಗಿದ್ದಾನೆ. ತನ್ನ ಹೊಟ್ಟೆಕಡೆ ಜಾಸ್ತಿ ಗಮನ ಕೊಡುತ್ತಾ ತನ್ನನ್ನು ಗೆಲ್ಲಿಸಿದ ಜನರನ್ನು, ಸಮುದಾಯವನ್ನು ಮರೆತು ಕುಳಿತಿದ್ದಾನೆ. ಸಮುದಾಯಕ್ಕೆ ಹಿರಿಯ ಪಂಚ ಎಂದು ಬೋರ್ಡು ತಗಲು ಹಾಕಿಕೊಂಡಿರುವ ಈತ ಉರ್ದು ಶಾಲೆಯ ವಿಚಾರದಲ್ಲಿ ಮುಸಲ್ಮಾನರಿಗೆ ನ್ಯಾಯ ಒದಗಿಸುತ್ತಾನೆ ಎಂದು ಜನ ನಂಬಿಕೊಂಡಿದ್ದರು. ಆದರೆ ಈ ವಿಚಾರದಲ್ಲಿ ಈತ ಈವರೆಗೆ ಬಾಯಿಬಿಡದೆ ಕೌದಿ ಹೊದ್ದುಕೊಂಡು ಮೂಲೆ ಸೇರಿಕೊಂಡಿದ್ದಾನೆ.



ದೊಡ್ಡಮನಿ

ಇನ್ನೊಂದೆಡೆ, ಈತ ಮುಸ್ಲಿಮರ ನಡುವೆ ತನ್ನ ಪ್ರಭಾವ ಮತ್ತು ಅಧಿಕಾರವನ್ನು ಕಾಯ್ದುಕೊಂಡು ಬರುವುದಕ್ಕೆ ಏನು ಬೇಕಾದರೂ ಮಾಡಲು ಸಿದ್ಧನಾಗುತ್ತಾನೆ. ತನಗಾಗದವರನ್ನು ತುಳಿಯುವುದಕ್ಕೆ ಫತ್ವಾ ಎಂಬ ಗುರಾಣಿಯನ್ನು ಇಟ್ಟುಕೊಂಡಿದ್ದಾನೆ. ಈಗಾಗಲೇ ಇವನ ವಿರುದ್ಧ ಮಾತನಾಡಿದ್ದಕ್ಕೆ, ಎರಡು ಮುಸ್ಲಿಮ್ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾನೆ. ಬಹಿಷ್ಕಾರಕ್ಕೊಳಗಾದ ಮನೆಗಳಲ್ಲಿ ನಡೆಯುವ ಶುಭಕಾರ್ಯಗಳಿಗೆ, ಶವಸಂಸ್ಕಾರಕ್ಕೆ ಸಮುದಾಯದ ಯಾರೂ ಹೋಗಬಾರದೆಂದು ಒತ್ತಡ ತರುತ್ತಾನೆ. ಈತ ಹೀಗೇ ಮುಸ್ಲಿಮ್ ಸಮುದಾಯಕ್ಕೆ ಶನಿಯಂತೆ ಕಾಡುತ್ತಿದ್ದರೆ ಮುಸ್ಲಿಮರೇ ಇವನನ್ನು ಒದ್ದು ಮೂಲೆ ಸೇರಿಸುವ ದಿನಗಳು ದೂರವಿಲ್ಲ.


ಎಂದು ನೀವು ಭಾವಿಸುವುದಾದರೆ ಅದು ನಿಮ್ಮ ದಡ್ಡತನವಾಗುತ್ತದೆ. ಯಾರಿಗೂ ಗೊತ್ತಾಗದಂತೆ, ಅತ್ಯಂತ ಸೂಕ್ಷ್ಮವಾಗಿ ನಿಮಗರಿವಿಲ್ಲದೆ ನಿಮ್ಮ ಜೇಬು ಕತ್ತರಿಸುವ ದಂಧೆಯನ್ನು ಈತ ಶುರುವಿಟ್ಟುಕೊಂಡು ಬಹಳ ವರ್ಷಗಳೇ ಸಾಗಿಬಿಟ್ಟಿವೆ.

ಈಗಾಗಲೇ 'ಮಹಾರುದ್ರಯಾಗ', 'ಸೋಮ ಯಾಗ', 'ಋಗ್ವೇದ ಸ್ನಾತಕಾರ' ಹಾಗೂ 'ಲಕ್ಷ ದೀಪೋತ್ಸವ' ಎಂಬ ಮುಂಡಾ ಮೋಚುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಸಾಮಾನ್ಯರ ಜೇಬುಗಳನ್ನು ಹಾಡುಹಗಲೇ ಕತ್ತರಿಸುತ್ತಿದ್ದಾನೆ. ಜೊತೆಗೆ ಜನತೆಯ ಇದ್ದಬದ್ದ ಬುದ್ಧಿಗೆ 'ಜಂಗು' ಹಿಡಿಸಿದ್ದಾನೆ. ಈಗ ಮುಂದಿನ ಜನವರಿ 30ರಿಂದ ಸುಮಾರು ಏಳು ದಿನಗಳ ಪರ್ಯಂತ 'ಸಹಸ್ರ ಚಂಡಿಯಾಗ' ಎಂಬ ಮತ್ತೊಂದು ಯಾಗವನ್ನು ಮಾಡುವ ಹುನ್ನಾರದ ಸಿದ್ಧತೆಯಲ್ಲಿದ್ದಾನೆ. ಆಕಾಶದ ಓಜೋನ್ ಪರದೆ ದಿನಗಳೆದಂತೆಲ್ಲ ಹಾಳಾಗುತ್ತಿದೆ ಎಂದು ವಿಜ್ಞಾನಿಗಳು ಹೇಳುತ್ತಿರುವುದನ್ನು ಅರಿತುಕೊಂಡಿರುವ ಈ ಘಟಿಂಗ ಅದನ್ನು ರಿಪೇರಿ ಮಾಡಲಿಕ್ಕಾಗಿಯೇ ಈ ಸಹಸ್ರ ಚಂಡಿಯಾಗ ಮಾಡುತ್ತಾನಂತೆ! ಇದನ್ನು ಕೇಳಿ ನಗಬೇಕೋ? ಅಳಬೇಕೋ? ತಿಳಿಯುತ್ತಿಲ್ಲ.



ಪೇಜಾವರರ ಜೊತೆ ಚಂದ್ರಭಟ್ಟ

ಈ ಹಿಂದೆ ತಾನು ಮಾಡಿದ ಮಹಾರುದ್ರಯಾಗ ಮತ್ತು ಸೋಮಯಾಗದಿಂದ ಪರಿಸರಕ್ಕೆ ಮಹಾ ಉಪಕಾರವಾಗಿದೆಯೆಂದು ಬೂಟಾಟಿಕೆಯ ಮಾತುಗಳನ್ನು ಈತ ಆಡುತ್ತಾನೆ. ಸಂಸ್ಕೃತದ ಶಾಸ್ತ್ರಗಳನ್ನು ಗಿಳಿಪಾಠ ಮಾಡಿಕೊಂಡಿರುವ ಈತ ಜನರ ಎದುರು ತಾನೊಬ್ಬ ಮಹಾಮೇಧಾವಿ ಎಂದು ತೋರಿಸಿಕೊಳ್ಳುತ್ತಲೇ ಅವರಿಗರಿವಿಲ್ಲದಂತೆ ಅವರ ಜೇಬಿಗೆ-ಮೆದುಳಿಗೆ ಕೈ ಹಾಕಿರುತ್ತಾನೆ. ವಿಚಿತ್ರವೆಂದರೆ ಇವನ ಜೊತೆಗಿರುವ ಜನ ಇಲ್ಲಿನವರ ತಲೆಗೆ 'ಎಣ್ಣೆ' ಹಚ್ಚುತ್ತಲೇ ಗಂವ್ಹಾರದಂತ ಹಳ್ಳಿಯ ಮೂಲೆ ಮೊಡಕಿನಲ್ಲೂ ತಮ್ಮ ಅನ್ನಬ್ರಹ್ಮನನ್ನು ಹುಟ್ಟಿಸಿಕೊಂಡು ಆರಾಮಾಗಿದ್ದಾರೆ. ಸೋಪನಾಥ ಮಠದ ತುಂಬ ಹೆಂಡಿರು, ಮಕ್ಕಳನ್ನು ಕಟ್ಟಿಕೊಂಡು ಇವರೆಲ್ಲ ನಡೆಸುವ ಲೋಲುಪ ಜೀವನವನ್ನು ನೋಡಿಯೇ ಇದನ್ನು ಅರಿತುಕೊಳ್ಳಬಹುದು.



ಸೋಪನಾಥ ಸ್ವಾಮಿ

ಗಾಳಿಶುದ್ಧವಾಗಿ, ಆಮ್ಲಜನಕದ ಕೊರತೆಯಾಗದಂತೆ ತಡೆಯಲು ಯೋಜಿಸಲಾಗಿರುವ ಸಹಸ್ರ ಚಂಡಿಯಾಗಕ್ಕೆ ಈಗಾಗಲೇ ದೂರ ದೂರದ ಊರುಗಳಿಂದ 500 ಜನ ಋತ್ವಿಕರನ್ನು ಕರೆಸಲು ಹವಣಿಸಿದ್ದಾನೆ ಈ ಮಠದ ಸ್ವಾಮಿ. ದೂ(ದಾ)ರದರ್ಶನದಲ್ಲಿ ಈ ಕಾರ್ಯಕ್ರಮ ಬಿತ್ತರಿಸಲು ತಮ್ಮ ದಾರ ಮೂಲದ ಡೈರೆಕ್ಟರ್ ಜನರಲ್‌ನನ್ನು ಸಂಪರ್ಕಿಸಿಯಾಗಿದೆ. ವಿಜಯ ಕರ್ನಾಟಕದ ಭಟ್ಟ ಎಂಬ ಸನಾತನಿಯೂ ಇದನ್ನು ತನ್ನ ಪತ್ರಿಕೆಯ ಮುಖಪುಟಕ್ಕೆ ಹಾಕಲು ಫರ್ಮಾನು ಹೊರಡಿಸಿದ್ದಾನಂತೆ. ಆ ಪತ್ರಿಕೆಯ ಸ್ಥಳೀಯ ಕಾರ್ಯಾಲಯದ ಸಿಬ್ಬಂದಿಗಳು ಅವನ ಅಣತಿಯನ್ನು ಹೊತ್ತು ತುದಿಗಾಲ ಮೇಲೆ ಸುದ್ದಿಗಾಗಿ ಕಾಯುತ್ತಿವೆ.

ಸರಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು, ಗೋವುಗಳ ಹೆಸರಿನಲ್ಲಿ ತನ್ನ 'ಗೋಪಾಳ' ತುಂಬಿಕೊಳ್ಳುತ್ತಿರುವ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮಿ ಇಲ್ಲಿ ಇಣುಕಿಹಾಕುತ್ತಾನಂತೆ. ಪೇಜಾವರ ಎಂಬ ಮತ್ತೊಬ್ಬ ಸನಾತನಿ ತನ್ನ 'ಭೋಂಗು' ಬಿಡಲು ಬರುತ್ತಾನಂತೆ. ಶೃಂಗೇರಿಯ 'ಮರಿ ಆನೆ'ಯೂ ಇಲ್ಲಿ ಘೀಳಿಡಲಿದೆ. ಇನ್ನುಳಿದಂತೆ 'ಕರ್ಮಕಾಂಡ', 'ಉಪಸಭಾ ಭಾಗ', 'ಜ್ಞಾನಕಾಂಡ' ಎಂಬ ಸುಂದರ ಹೆಸರುಗಳ ಹಿನ್ನೆಲೆಯಲ್ಲಿ ಅದೇ ತೌಡುಕುಟ್ಟುವ ಕಾರ್ಯ ಜರುಗಲಿದೆ. ಇದೆಲ್ಲಕ್ಕೂ ಖರ್ಚಾಗುವ ಒಟ್ಟು ಮೊತ್ತ ಕೇವಲ ಒಂದೂವರೆ ಕೋಟಿ ರೂಪಾಯಿಗಳಂತೆ!

ಹಣ ಸಂಪೂರ್ಣವಾಗಿ ಗಂವ್ಹಾರದ ಚಂದ್ರಭಟ್ಟರು ಉರ್ಫ್ ಸೋಪನಾಥ ಸ್ವಾಮಿಗಳು ದುಡಿದು ಖರ್ಚು ಮಾಡುವುದಾಗಿದ್ದರೆ ಇದನ್ನು ಬರೆಯುವ ಪ್ರಮೇಯವೇ ಬರುತ್ತಿರಲಿಲ್ಲ, ಆದರೆ ಈ ಹಣ ಸಂಪೂರ್ಣವಾಗಿ ಸಾರ್ವಜನಿಕರದು. ಸಾರ್ವಜನಿಕರ ಹಣ ಖರ್ಚು ಮಾಡುವುದೆಂದರೆ ಪ್ರಜ್ಞೆ ಇಟ್ಟುಕೊಂಡು ಖರ್ಚು ಮಾಡಬೇಕು. 'ಯಾರದೋ ರೊಕ್ಕ ಎಲ್ಲಮ್ಮನ ಜಾತ್ರೆ' ಆಗಬಾರದು.

ರಾಜ್ಯದ ಮುಖ್ಯಮಂತ್ರಿಯಾಗಿರುವವನೇ ರಾಜ್ಯದ ಬೊಕ್ಕಸದಿಂದ ಮಠಗಳಿಗೆ ಕೋಟ್ಯಂತರ ರೂಪಾಯಿಗಳನ್ನು ನೀಡುತ್ತಾನೆಂದರೆ, ಸಾರ್ವಜನಿಕರ ದುಡ್ಡನ್ನು ಈ ಪುರೋಹಿತಶಾಹಿಗಳು ಕಬಳಿಸದೆ ಇರುತ್ತಾರೆಯೇ.

ಈ ದಂಡಪಿಂಡಗಳಿಂದ ಬಸವಣ್ಣನ ನಾಡಿಗೆ ಮುಕ್ತಿಯೆಂದು?

-ವರದಿಗಾರ

ಕಲಬುರ್ಗಿ ಕನ್ನಡ ಸಾಹಿತ್ಯ ಪರಿಷತ್ತಿನ ವೀರಭದ್ರ ಸಿಂಪಿ

ಕೆಲ ವರ್ಷಗಳ ಕಾಲ ಕಲಬುರ್ಗಿಯ ಕನ್ನಡ ಸಾಹಿತ್ಯ ಪರಿಷತ್ತಿನ ಕಡೆಗೆ ಮುಖ ಮಾಡಿ ನೋಡುವುದಕ್ಕೂ ಹೇಸಿಗೆಯಾಗುತ್ತಿತ್ತು. ಇದಕ್ಕೆ ಕಾರಣ ಅದರ ಅಧ್ಯಕ್ಷ ಸ್ಥಾನಕ್ಕೆ ಅಮರಿಕೊಂಡಿದ್ದ ಪೆಡಂಭೂತಗಳಿಂದಾಗಿ ಅದು ಕುಲಗೆಟ್ಟು ಹೋಗಿದ್ದದ್ದು. ಕೆಲವು ಬಾಲಬಡುಕರು ಅಧ್ಯಕ್ಷರ ತುತ್ತೂರಿ ಊದುವುದನ್ನೇ ಸಾಹಿತ್ಯ ಸೇವೆ ಎಂದುಕೊಂಡಿದ್ದರಿಂದ ಇಲ್ಲಿನ ಸಾಹಿತ್ಯ ಪರಿಷತ್ತು ನಿಜಕ್ಕೂ ಮಕಾಡೆ ಮಲಗಿತ್ತು.

ವಿಚಿತ್ರವೆಂದರೆ, ಹೀಗೆ ಗಬ್ಬು ನಾರುತ್ತಿದ್ದ ಸಾಹಿತ್ಯ ಪರಿಷತ್ತನ್ನೇ ತಮ್ಮ ಏಣಿಯನ್ನಾಗಿ ಮಾಡಿಕೊಂಡು ಬದುಕಬೇಕೆಂದು ಹವಣಿಸಿದವರು ಬಹಳಷ್ಟು ಜನ. ಆದರೆ ಯಾವಾಗ ವೀರಭದ್ರ ಸಿಂಪಿ ಎಂಬ ಯುವ ಬರಹಗಾರರ ಬಳಗದ ಮಾಜಿ ಅಧ್ಯಕ್ಷ ಇತ್ತ ಇಣುಕಿ ಹಾಕಿದರೂ ಆಗಲೇ ಬಹಳಷ್ಟು 'ಸಾಇತಿ'ಗಳು ಥಂಡಾ ಹೊಡೆದರು. ನಿರೀಕ್ಷಿಸಿದಂತೆ ಸಿಂಪಿ ಕಳೆದ ಬಾರಿಯ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗೆದ್ದು ಬಂದರು.

ಹಾಗೆ ನೋಡಿದರೆ ವೀರಭದ್ರಸಿಂಪಿ ಸಾಹಿತ್ಯ ರಚಿಸಿ ತನ್ನ ಛಾಪು ಮೂಡಿಸಿದವರಲ್ಲ, ಆದರೆ ಅದೇ ವೇಳೆಗೆ ತನ್ನ ಸಂಘಟನಾ ಚಾತುರ್ಯದಿಂದಾಗಿ ಜನಮಾನಸವನ್ನು ಗೆದ್ದವರು. ಸ್ಥಳೀಯ ನಗರಸಭೆಯ ನೌಕರನಾಗಿದ್ದರೂ ತನ್ನ ಪ್ರಾಮಾಣಿಕ ತುಡಿತ ಹಾಗೂ ಕಾಳಜಿಗಳಿಂದ ಕಲಬುರ್ಗಿಯ ಎಲ್ಲರಿಗೂ ಚಿರಪರಿಚಿತರಾದವರು.

ಅಂದಂತೆ ಈ ಸಿಂಪಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಇವರ ಹೆಗಲ ಮೇಲೆ ಸಾಕಷ್ಟು ಜವಾಬ್ದಾರಿಗಳಿದ್ದವು. ಅವನ್ನು ಒಂದೊಂದಾಗಿ ನೀಗಿಸಿಕೊಳ್ಳುತ್ತ ಸಾಗಿದ್ದಾರೆ. ಎಲ್ಲರೂ ನೋಡನೋಡುತ್ತಿದ್ದಂತೆ ತನ್ನ ಮೂರು ವರ್ಷಗಳ ಅಧಿಕಾರ ಅವಧಿಯನ್ನು ಯಾವುದೇ ತಕರಾರುಗಳಿಲ್ಲದೆ ಕಳೆದಿದ್ದಾರೆ.

ಅರ್ಧಕ್ಕೆ ನಿಂತಿದ್ದ ಬಾಪುಗೌಡ ರಂಗಮಂದಿರದ ಎರಡನೆಯ ಅಂತಸ್ತಿನ ಕಟ್ಟಡ ಕಾಮಗಾರಿ ಆರಂಭಿಸಲು ಹೆಣಗಿದ್ದಾರೆ. ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಯಾರಾದರೂ ಬಂದರೆ ಕುಳಿತುಕೊಳ್ಳುವುದಕ್ಕೆ ಯಾವುದೇ ರೀತಿಯ ಆಸನಗಳೇ ಇರಲಿಲ್ಲ. ಇದನ್ನು ಚೆನ್ನಾಗಿ ಮನಗಂಡ ಸಿಂಪಿ ದಾನಿಗಳಲ್ಲಿ ಈ ಕೊರತೆಗಳ ಬಗ್ಗೆ ಹೇಳಿಕೊಂಡು ಸಾಹಿತ್ಯ ಪರಿಷತ್ತಿಗೆ ಒಂದು ಕಂಪ್ಯೂಟರ್, ಪ್ರಿಂಟರ್, ಕುರ್ಚಿ, ಮೇಜು, ಮೈಕ್ ಮುಂತಾದವುಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಜಿಲ್ಲೆಯ ತುಂಬ ವಿವಾದ ಮುಕ್ತ ಸಮ್ಮೇಳನಗಳನ್ನು ಏರ್ಪಡಿಸಿದ್ದಾರೆ. ಪರಿಷತ್ತಿನ ಅಂಗಳದಲ್ಲಿ ಹಸಿರು ಚಿಗುರೊಡೆದು ಬೆಳೆಯುವ ವಾತಾವರಣ ಸೃಷ್ಟಿಸಿದ್ದಾರೆ.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಎಂದೂ ತಲೆಗೇರಿಸಿಕೊಳ್ಳದ ಸಿಂಪಿ ಎಲ್ಲರೊಂದಿಗೂ ಸಹಜವಾಗಿ ಬೆರೆಯುವ ಉತ್ಸಾಹಿ ಯುವಕ. ಏನನ್ನಾದರೂ ಸಾಧಿಸಬೇಕೆಂಬ ಉತ್ಸಾಹವಿರುವವರು ಸಾಧಿಸಿಯೇ ತೋರಿಸುತ್ತಾರೆ ಎನ್ನಲು ಸಿಂಪಿ ಒಂದು ಉದಾಹರಣೆಯಾಗಿದ್ದಾರೆ.

- ವಿಶ್ವಾರಾಧ್ಯ ಸತ್ಯಂಪೇಟೆ

ಕುಷ್ಟಗಿ ಪ್ರವೀಣನ ಹುಚ್ಚಾಟಕ್ಕೆ ಕೊನೆ ಎಂದು?

ಕುಷ್ಟಗಿಯ ಹುಡುಗಿಯರ ಪಾಲಿಗೆ ಕಂಟಕವಾಗುತ್ತಿರುವ ಪ್ರವೀಣ ಅಮರಾವತಿ ಹುಡುಗಿಯೊಬ್ಬಳನ್ನು ಚುಡಾಯಿಸಿ, ಪ್ರತಿಭಟಿಸಿದ ಆವಳಪ್ಪನಿಗೆ ತಲೆಗೆ ಏಟು ಕೊಟ್ಟು ಜೈಲು ಕಂಡುಬಂದಿದ್ದಾನೆ.

ಕಳೆದ ನಾಲ್ಕೈದು ವರ್ಷಗಳಿಂದ ಕುಷ್ಟಗಿಯ ಹುಡುಗಿಯರಿಗೆ, ಅವರ ತಂದೆ-ತಾಯಿಗಳಿಗೆ ಸ್ವಪ್ನದಲ್ಲೂ ಬಂದು ಕಾಡುವ ವಿಕೃತ ಗಿರಾಕಿ ಪ್ರವೀಣನಿಗೆ ಚುಡಾಯಿಸುವುದೇ ಫುಲ್‌ಟೈಂ ಕಾಯಕ. ಹುಡುಗಿಯರು ಎದುರಾದರಂತೂ ಯಾವ ಕಲರ್ ಬ್ರಾ ಹಾಕಿದ್ದಿ? ವಾರಕ್ಕೆ ಎಷ್ಟು ಸಲ ಲಿಪ್‌ಸ್ಟಿಕ್ ಹಚ್ಚುತ್ತಿ? ಎ-ಚಾನಲ್ ನೋಡ್ತಿಯಾ? ಅಂತ ಅವರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದ ಪ್ರವೀಣನನ್ನು ಕೂಡಲೇ ಧಾರವಾಡದ ಹುಚ್ಚಾಸ್ಪತ್ರೆಗೋ, ಬೆಂಗಳೂರಿನ ನಿಮ್ಹಾನ್ಸ್‌ಗೋ ಒಯ್ದು ಕರೆಂಟ್ ಶಾಕ್ ಕೊಡಿಸದಿದ್ದರೆ ಇವನು ಸೀದಾ ಆಗಲಾರ.

ಕಳೆದ ಕೆಲ ವರ್ಷಗಳಿಂದ ಕುಷ್ಟಗಿಯಲ್ಲಿ ಚುಡಾಯಿಸುವಿಕೆ ಸಾಮಾಜಿಕ ಪಿಡುಗು ಆಗಿಬಿಟ್ಟಿದೆ. ಚುಡಾವಣೆಗಳಿಂದ ಹೊಡೆದಾಟಗಳಾಗಿದ್ದರೂ ಎಷ್ಟೋ ಪ್ರಕರಣಗಳು ಬಯಲಿಗೇ ಬಂದಿಲ್ಲ, ಇಲ್ಲಿ ಹುಡುಗಿಯರು ಶಾಲೆಗೆ, ಹೊರಗೆ ಕೆಲಸಕ್ಕೆ ಹೋಗುವಂತಿಲ್ಲ. ಇಂತಹವರ ಕಾಟದಿಂದ. ಚುಡಾಯಿಸಿದ ರೋಡ್ ರೋಮಿಯೋನನ್ನು ಅಪ್ಪಿತಪ್ಪಿ ಪೊಲೀಸರೇನಾದರೂ ಬಂಧಿಸಿದರೆ ಸಾಕು ರಾಜಕಾರಣಿಗಳ ಒತ್ತಡ ಆರಂಭವಾಗಿ ಬಿಡುತ್ತದೆ. ಚರಂಡಿಯಲ್ಲಿ ಎರಡು ಹಂದಿಗಳು ಜಗಳಾಡತೊಡಗಿದರೆ ಸಾಕು ಒಂದೊಂದು ಹಂದಿಯ ಪಕ್ಷ ಒಬ್ಬೊಬ್ಬ ಪುಡಿ ಲೀಡರ್ ಹಾಜರಾಗಿಬಿಡುವ ಮಟ್ಟಕ್ಕೆ ಇಲ್ಲಿನ ರಾಜಕಾರಣ ಹದಗೆಟ್ಟು ಹೋಗಿದೆ. ಹಾಡುಹಗಲೇ ಒಬ್ಬಳನ್ನು [illegible] ರೇಪ್ ಮಾಡಬಹುದು. ಹುಡುಗಿಯರನ್ನು ಚುಡಾಯಿಸಬಹುದು. ಅಡ್ಡಬಂದ ಹುಡುಗಿಯ ತಂದೆ-ತಾಯಿಗಳಿಗೆ ಗಾಲು, ಏಟು ಕೊಡಬಹುದು. ಹಿಂದರೆ ಇದು ಕುಷ್ಟಗಿ. ಆದರೆ ಈ [illegible] ಅಮರೇಶ್ ಕೊನೆಗೂ ಪ್ರವೀಣನನ್ನು ಜೈಲಿಗೆ ಕಳಿಸುವ ಧೈರ್ಯ ಮಾಡಿದ್ದಾರೆ. ಆ ಕಾರಣಕ್ಕೆ, ಇಡೀ ಕುಷ್ಟಗಿ ಒಳಗೊಳಗೆ ಖುಷಿಯಾಗಿದೆ.

[illegible]

ಕಾಲೇಜ್ ಹತ್ತಿರ ಸುಳಿದಾಡುವುದು, ಮಧ್ಯಾಹ್ನ ಹೈಸ್ಕೂಲ್‌ಗಳನ್ನು ಸುತ್ತು ಹಾಕುವುದು, ಸಂಜೆಯಾದರೆ ಬೈಕಲ್ಲಿ ಊರಿನ ಗಲ್ಲಿಗಳಲ್ಲಿ ರ್‍ಯಾಲಿ ಹೊರಡುವುದು, ಕಂಡಕಂಡ ಹುಡುಗಿಯರಿಗೆ ಇಲ್ಲಿ ಬರೆಯಲಾಗದಷ್ಟು ಅಸಹ್ಯಕರ ರೀತಿಯಲ್ಲಿ ಚುಡಾಯಿಸುವುದು, ಹೀಯಾಳಿಸುವುದು ನಡೆದೇ ಇತ್ತು, ಮರ್ಯಾದೆಗಂಜಿದ ಎಷ್ಟೋ ಕುಟುಂಬಗಳು ನೋವು ನುಂಗಿಕೊಂಡು ಸುಮ್ಮನಾಗಿದ್ದವು.

ವರ್ಷದ ಹಿಂದೆ ಇವನ ಅಡ್ಡೆಯೆಂದರೆ ಕೊಪ್ಪಳ ರಸ್ತೆಯ ಹೈಸ್ಕೂಲ್ ಹತ್ತಿರದ ಎಸ್‌ಟಿಡಿ ಬೂತ್. ಅಲ್ಲಿ ಬರುವ ಹೋಗುವ ಹುಡುಗಿಯರಿಗೆಲ್ಲ ಯಾವ ಕಲರ್ ಚೆಡ್ಡಿ ತೊಟ್ಟಿದ್ದಿ ತೋರಿಸು ಅಂದು ಸಾರ್ವಜನಿಕರಿಂದಲೇ ಒದೆ ತಿಂದಿದ್ದ. ಅರ್ಧಂಬರ್ಧ ಡಿಪ್ಲೋಮಾ ಕಲಿತಿರುವ ಪ್ರವೀಣ ಹನುಮಸಾಗರದಲ್ಲಿ ಸಾವಜಿ ಜನಾಂಗದ ಹುಡುಗಿ ತಡವಿ ಒದೆ ತಿಂದು, ಇಳಕಲ್‌ನ ಪಿಯು ಕಾಲೇಜಿನಲ್ಲಿ ಹುಡುಗಿಯರಿಂದಲೇ ಚಪ್ಪಲಿ ಸೇವೆ ಮಾಡಿಸಿಕೊಂಡಿದ್ದ. 2005ರ ಜನವರಿ ತಿಂಗಳಲ್ಲಿ ಸರ್ಕಾರಿ ನೌಕರನೊಬ್ಬನ ಮಗಳನ್ನು ಚುಡಾಯಿಸಿದ್ದ. ಆ ಹುಡುಗಿಯ ಅಣ್ಣಂದಿರು, ಅವರ ಗೆಳೆಯರು ಸೇರಿ ಪ್ರವೀಣನನ್ನು ಕುಷ್ಟಗಿ ತುಂಬ ಓಡಾಡಿಸಿ ತದುಕಿದ್ದರು. ಆಮೇಲೆ ತಾನು ಹುಡುಗಿಯನ್ನು ಚುಡಾಯಿಸಿಯೇ ಇಲ್ಲ ಎಂದು ವಾದ ಮಾಡತೊಡಗಿದ. ಇವನ ಚುಡಾಯಿಸುವಿಕೆಯಿಂದ ಮಾನಸಿಕವಾಗಿ ಕುಗ್ಗಿ ಹೋಗಿದ್ದ ಆ ಹುಡುಗಿಯನ್ನು ಕರೆತಂದರೆ ಉತ್ತರ ಕುಮಾರ ಪ್ರವೀಣ ನಾಪತ್ತೆಯಾಗಿ ಬಿಟ್ಟಿದ್ದ. ಸಿಟ್ಟಿಗೆದ್ದ ಅವರೆಲ್ಲ ಪ್ರವೀಣನ ಮನೆಗೆ ಹೋದರೆ ನುರಿತ ಪಿಕ್‌ಪಾಕೆಟ್‌ರುಗಳ ತರಹ ಬೆರಳುಗಳಲ್ಲಿ ಬ್ಲೇಡ್ ತುಂಡಿಟ್ಟುಕೊಂಡು ಬಂದವರ ಮೇಲೆ ದಾಳಿ ಮಾಡಿ ಕತ್ತಿನಲ್ಲಿ 9 ಹೊಲಿಗೆ ಬೀಳುವಂತೆ ಮಾಡಿದ್ದ.

ಮಗ ಇಂತಹ ಅಸಹ್ಯಕರ ಕೆಲಸ ಮಾಡಿಬಂದರೂ ಪ್ರವೀಣನ ಅಪ್ಪ ಪರಸಪ್ಪ ಎಂಬಾತ, "ಕೆಲವು ಯುವಕರು ನಮ್ಮ ಮನೆಗೆ ನುಗ್ಗಿ ಟಿವಿ ಒಡೆದು ಹಾಕಿ, ಹೆಣ್ಣುಮಕ್ಕಳ ಮೇಲೆ ಹಲ್ಲೆ ನಡೆಸಿ, ಮನೆಯೊಳಗಿದ್ದ 50 ಸಾವಿರ ದುಡ್ಡು ಒಯ್ದಿದ್ದಾರೆ" ಎಂದು ದೂರು ನೀಡಲು ಹೋಗಿದ್ದ. ಮೊದಲು ಆಲಮಟ್ಟಿಯಲ್ಲಿ ಆಡಿಟರ್ ನೌಕರಿ ಮಾಡುತ್ತಿದ್ದವನು, ಈಗ ಕೊಪ್ಪಳ ಜಿಲ್ಲಾ ಪಂಚಾಯ್ತಿನಲ್ಲಿ ಅಮರಿಕೊಂಡಿದ್ದಾನೆ. ಕುಷ್ಟಗಿಗೆ ಯಾವುದೇ ನಾಟಕ ಕಂಪನಿಗಳು ಬರಲಿ ಅದರಲ್ಲಿನ ನರ್ತಕಿಯರಿಗೆ ರೊಕ್ಕ ಎರಚಲು ಮೊದಲ ಸಾಲಿನಲ್ಲಿ ಕುಳಿತುಕೊಳ್ಳುವ ವ್ಯಕ್ತಿಯೇ ಈ ಪರಸಪ್ಪ, ಅಂದರೆ ಇದೇ ಪ್ರವೀಣನ ತಂದೆ. ಅಂದಮೇಲೆ ಯಾರಿಗೆ ಉಗಿದು ಯಾರಿಗೆ ಬುದ್ಧಿ ಹೇಳಬೇಕು?

ಹೀಗಿದ್ದಾಗಲೇ ಹುಡುಗಿಯರನ್ನು ಚುಡಾಯಿಸಿದ್ದೂ ಅಲ್ಲದೇ, ಕೇಳಲು ಹೋದವರ ಮೇಲೆ ಸುಳ್ಳು ದೂರು ನೀಡಲು ಹೋದಾಗ ಇಡೀ ಕುಷ್ಟಗಿ ಗರಂ ಆಗಿತ್ತು. ಇದನ್ನರಿತ ಕೆಲ ಸ್ವಾರ್ಥಿಗಳು ಸರ್ವಧರ್ಮ ಸೌಹಾರ್ದ ಸಮಿತಿ ಎಂಬ ಅಪ್ಪಟ ನಾಟಕ ಕಂಪನಿ ಮಾಡಿ ಇಡೀ ಪ್ರಕರಣಕ್ಕೆ ತಿಪ್ಪೆ ಸಾರಿಸಿದ್ದರು. ಆದರೆ ಈಗ ಪ್ರವೀಣ ಮತ್ತೆ ಬಾಲ ಬಿಚ್ಚಿದ್ದಾನೆ. ಕುಷ್ಟಗಿಯ ವಾಸುಸಾ ಎಂಬುವವರ ಮಗಳನ್ನು ಚುಡಾಯಿಸಿದ. ನಿತ್ಯ ಇದೇ ಕಿರುಕುಳವಾದಾಗ ವಾಸುಸಾ ಅವರು ಪ್ರತಿಭಟಿಸಿದರೆ ಪ್ರವೀಣ ಅವರ ತಲೆಗೆ ಹೊಡೆದ ಏಟಿಗೆ 7 ಹೊಲಿಗೆ ಬಿದ್ದಿವೆ. ವಿಷಯ ಗೊತ್ತಾಗಿ ಮತ್ತೆ ಕುಷ್ಟಗಿ ರಾಂಗ್ ಆಗಿದೆ. ಬಂಧಿಸಲು ಹೋದ ಪೊಲೀಸರಿಗೆ ಎಲ್ಲಿಂದಲೋ ಒತ್ತಡಗಳು. ಆದರೆ [illegible] ಅಮರೇಶ್ ಅವನನ್ನು ಜೈಲಿಗೆ ಕಳಿಸಿ ಒಳ್ಳೆ ಕೆಲಸ ಮಾಡಿದ್ದರೆ ಪ್ರವೀಣ ಬೇಲ್ ತಗೊಂಡು ಹೊರಬಂದಿದ್ದಾನೆ. ಮತ್ತೆ ಯಾವ ಹುಡುಗಿನ ಚುಡಾಯಿಸುತ್ತಾನೋ, ಯಾವ ಹುಡುಗಿ ಅಪ್ಪನಿಗೆ ಏಟು ಹಾಕುತ್ತಾನೋ, ಮತ್ತೆ ಅದೆಂತಹ ಗಲಾಟೆಗೆ ಕಾರಣನಾಗುತ್ತಾನೋ!

ಇದಕ್ಕೆ ಕೊನೆಯಿಲ್ಲವೇ? ಪದೇಪದೇ ಹುಡುಗಿಯರನ್ನು ಚುಡಾಯಿಸುವ ಈ ವಿಕೃತನಿಗೆ ಧಾರವಾಡ [illegible] ಕರೆಂಟ್ ಶಾಕ್ ಕೊಡಬೇಕು [illegible]

-ವರದಿಗಾರ

ಸಿಂಧನೂರು ಘಟನೆ ಕುಷ್ಟಗಿಯಲ್ಲೂ ಆಗಬೇಕೆ?

ಕಳೆದ ನಾಲ್ಕೈದು ತಿಂಗಳ ಹಿಂದೆ ಇಡೀ ರಾಜ್ಯದ ಗಮನ ಸೆಳೆದದ್ದು ಸಿಂಧನೂರಿನ ಸಾವಜಿ ಜನಾಂಗದ ಪ್ರೀತಿ ಎಂಬ ಹುಡುಗಿ ತನ್ನನ್ನು ಪ್ರೀತಿಸಲು ನಿರಾಕರಿಸಿದ್ದಕ್ಕೆ ಯುವಕ ಅವಳನ್ನು ಹಾಡುಹಗಲೇ ಕೊಚ್ಚಿಕೊಚ್ಚಿ ಸಾಯಿಸಿದ್ದು. ಮಟನ್ ಖಾನಾವಳಿಯಲ್ಲೇ ಕೆಲಸಕ್ಕೆ ಇದ್ದ ಶರಣಪ್ಪ ಎಂಬ ವಿಕೃತ ತನ್ನ ಮಾಲೀಕರ ಮಗಳನ್ನು ಪ್ರೀತಿಸತೊಡಗಿದ್ದ. ಆಕೆ ನಿರಾಕರಿಸಿದ್ದಕ್ಕೆ ಎಲ್ಲರೆದುರೇ, ಖಾನಾವಳಿಯಲ್ಲಿ 10ಕ್ಕೂ ಹೆಚ್ಚು ಸಲ ತಿವಿದು ಕೊಂದಿದ್ದ ಆ ವಿಕೃತ ಪ್ರೇಮಿ. ಘಟನೆ ನಂತರ ಅನೇಕ ಸಂಘಟನೆಗಳು ಈ ಪ್ರಕರಣದ ವಿರುದ್ಧ ಪ್ರತಿಭಟಿಸಿದ್ದವು.

ಇವತ್ತು ಕುಷ್ಟಗಿಯ ಈ ಪ್ರವೀಣ ಮಾಡುತ್ತಿರುವ ವರ್ತನೆ ನೋಡಿದರೆ ಇಂದಲ್ಲ ನಾಳೆ ಇವನು ಇಂತಹದ್ದೇ ಕೆಲಸಕ್ಕೆ ಕೈ ಹಾಕಿಯಾನು. ಅವನ ಆ ಕೃತ್ಯಕ್ಕೆ ಎಲ್ಲಿ ನಮ್ಮ ಮಗಳೇ ಬಲಿಯಾಗುತ್ತಾಳೋ ಅಂತ ಕುಷ್ಟಗಿಯಲ್ಲಿ ಪಾಲಕರುಗಳು ಚಿಂತಾಕ್ರಾಂತರಾಗಿದ್ದಾರೆ. [illegible] ಹೋದ ವಿದ್ಯಾರ್ಥಿನಿ, ಟೈಲರಿಂಗ್ [illegible] ಹೋದ ಯುವತಿ, ಟ್ಯೂಷನ್‌ಗೆ ಹೋದ ವಿದ್ಯಾರ್ಥಿ[illegible] ಯಾರು ಇವನಿಗೆ ಬಲಿಯಾಗುತ್ತಾರೋ? ಪ್ರವೀಣನ ಇಂತಹ ವಿಕೃತ ಚೇಷ್ಟೆಗಳಿಗೆ ಕೊನೆ ಎಂದು? [illegible] ಘಟನೆ ಕುಷ್ಟಗಿಯಲ್ಲೂ ಆದಮೇಲಾ?

ದಲಿತರ ಜೀವನದ ಮಹಾಪ್ರಸ್ಥಾನ 'ಅಂಟರಾನಿ ವಸಂತಂ'

■ ರಮಣಿ

'ಅಸ್ಪೃಶ್ಯ ವಸಂತ'ದ (ಅಂಟರಾನಿ ವಸಂತಂ) ಬಗ್ಗೆ ತೆಲುಗಿನಲ್ಲಿ ಬಂದ ಕೆಲವು ಅತ್ಯುತ್ತಮ ವಿಮರ್ಶೆಗಳ ಆಯ್ದ ಭಾಗಗಳು

ಮುಂದಿನ ವಾರದಿಂದ ಕಾದಂಬರಿ ಪ್ರಾರಂಭ


'ಅಂಟರಾನಿ ವಸಂತಂ' ತೆಲುಗು ಸಾಹಿತ್ಯದಲ್ಲಿಯೇ ಒಂದು ವಿನೂತನ ಸೃಷ್ಟಿ. ಗತಕಾಲದಲ್ಲಿ ಗತಿಸಿಹೋದ ದಲಿತ ಜೀವನವನ್ನು, ಆಗಿಹೋದ ಜೀವಗಳನ್ನು, ನಡೆದ ಹೋರಾಟಗಳನ್ನು, ಉಳಿದ ಜ್ಞಾಪಕಗಳನ್ನು ವರ್ತಮಾನದ ದಲಿತರ ಕಣ್ಣ ಮುಂದೆ ನಿಲ್ಲಿಸುವ ಕಾದಂಬರಿ. ಕಳೆದ ಶತಮಾನದಲ್ಲಿ ನಡೆದ ಹೋರಾಟಗಳ ಪರಿಣಾಮವಾಗಿ ಈ ಶತಮಾನದಲ್ಲಿ ನಾವು ವಿಜಯಗಳನ್ನು ಪಡೆಯುತ್ತಲೇ ಹೋಗಬಹುದೆಂದು ವರ್ತಮಾನದ ಜೀವಿತದ ಬಗ್ಗೆ ದಲಿತರಲ್ಲಿ ಆಶೆಗಳನ್ನು, ಆಕಾಂಕ್ಷೆಗಳನ್ನು ಹುಟ್ಟಿಸುವ ಲೇಖಕನಿಗೆ ಕೃತಜ್ಞತೆಗಳು.

"ನೀವು ಹೊಸ ಮನುಷ್ಯನ ಕನಸು ಕಾಣುತ್ತಿದ್ದೀರಿ. ಆ ಚಾರಿತ್ರಿಕ ಸತ್ಯಕ್ಕಾಗಿ ಎಲ್ಲಾ ಕಾಲದಲ್ಲೂ, ಎಲ್ಲಾ ದೇಶಗಳಲ್ಲೂ ಹೋರಾಡುವವರು ಕನಸುಗಳನ್ನು ಕಾಣುತ್ತಲೇ ಇದ್ದಾರೆ. ಆ ಕನಸುಗಳು ಒಂದು ವಿಪ್ಲವ ಸಂಕಲನ. ಆ ಸಂಕಲನದ ತುಂಬಾ ಪ್ರೇಮ, ಹೋರಾಟ, ತ್ಯಾಗಗಳು ಹಾಡುಗಳಾಗಿ ತುಂಬಿಕೊಂಡಿರುತ್ತವೆ. ವಿಜಯವನ್ನು ಕಣ್ಣಾರೆ ನೋಡುತ್ತೀರಿ. ನನ್ನ ವಿಶ್ವಾಸ ಸುಳ್ಳಲ್ಲ. ನೀವು ಪ್ರಪಂಚವನ್ನೇ ಜಯಿಸುತ್ತೀರಿ. ನನ್ನ ನಂಬಿಕೆ ಸುಳ್ಳಲ್ಲ." (ಪುಟ 229)

ಇದು 'ಅಂಟರಾನಿ ವಸಂತಂ' ಕಾದಂಬರಿಯ ಸಾರಾಂಶ. ಚರಿತ್ರೆಯುದ್ದಕ್ಕೂ ನಡೆದುಕೊಂಡೇ ಬಂದಿರುವ ದಲಿತರ ಹೋರಾಟದ ಕ್ರಮಗತಿಯನ್ನು ವಿವರಿಸುವ ಕಾದಂಬರಿಯಿದು. ದಲಿತರ ಹೋರಾಟದಿಂದಲೇ ಆತ್ಮಗೌರವವು ಸಿದ್ಧಿಸುತ್ತದೆಂದು, ಹೋರಾಟವು ದಲಿತರನ್ನು ಹೊಸ ರೀತಿಯ ಮನುಷ್ಯರನ್ನಾಗಿ ಪುನರ್ ಸೃಷ್ಟಿಸುತ್ತದೆಂದು ಘೋಷಿಸುವ ಕಾದಂಬರಿಯಿದು.

ಈ ಕಥೆಯ ಲೇಖಕರಾದ ಜೆ. ಕಲ್ಯಾಣರಾವ್ ಸದಸ್ಯರಾಗಿರುವ ವಿಪ್ಲವ ರಚಯಿತಲ ಸಂಘಂ -ವಿರಸಂ (ಕ್ರಾಂತಿಕಾರಿ ಬರಹಗಾರರ ಸಂಘ)ಗೆ ಮೂರು ದಶಕಗಳ ಚರಿತ್ರೆಯಿದೆ. ಈ ಕಾಲಾವಧಿಯಲ್ಲಿ ವಿರಸಂ ಹಲವಾರು ಸುಖ-ದುಃಖಗಳನ್ನು ಎದುರಿಸಿದೆ; ಬಡತನದ ಪರವಾಗಿ ನಿಂತು ಸಾಹಿತ್ಯವನ್ನು ಸೃಷ್ಟಿಸಿದೆ; ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರತಿಭಟಿಸಿದೆ; ತೆಲುಗು ಸಾಹಿತ್ಯದಲ್ಲಿ ಅನೇಕ ಸಾಹಿತಿಗಳನ್ನು, ಮೇಧಾವಿಗಳನ್ನು ಸೃಷ್ಟಿಸಿದೆ. ಇದರ ಸಾಹಿತ್ಯ ಮತ್ತು ಸಾಮಾಜಿಕ ಹೋರಾಟಗಳಿಗೆ "ಅರುಣತಾರ" ಪತ್ರಿಕೆ ಪ್ರಚಾರ ಸಾಧನವಾಗಿದೆ. ಕ್ರಾಂತಿಕಾರಿ ಸಾಹಿತ್ಯವನ್ನು ಪ್ರಚಾರ ಮಾಡಿದೆ. ಈ ಸಂಸ್ಥೆಯೇ 2000ನೇ ಇಸ್ವಿಯಲ್ಲಿ 'ಅಂಟರಾನಿ ವಸಂತಂ'ನನ್ನು ಪ್ರಕಟಿಸಿತು.

ಈ ಕಾದಂಬರಿಯನ್ನು ಬರೆದ ಜೆ. ಕಲ್ಯಾಣರಾವ್ ಅವರು ವೃತ್ತಿಯಲ್ಲಿ ಇಂಗ್ಲಿಷ್ ಉಪನ್ಯಾಸಕರು. ಇದು ಕಾದಂಬರಿಯ ರೂಪದಲ್ಲಿ ಪ್ರಕಟಗೊಳ್ಳುವ ಮುಂಚೆ 'ಅರುಣತಾರ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಲ್ಪಟ್ಟಿತ್ತು. ಈ ಕಾದಂಬರಿಯು ಆಂಧ್ರದ ಪೂರ್ವ ಕರಾವಳಿ ಪ್ರಾಂತ್ಯದ ದಲಿತರ ಒಂದೂವರೆ ಶತಮಾನದ ಬದುಕನ್ನು ಸ್ಥೂಲ ರೂಪದಲ್ಲಿ ಚಿತ್ರಿಸುತ್ತದೆ. ಇದು ದಲಿತರ ಜೀವನ ಕ್ರಮದಲ್ಲಿ ನಡೆದ ಹೋರಾಟಗಳನ್ನು, ಅನುಭವಿಸಿದ ಸುಖ-ದುಃಖಗಳನ್ನು, ಪಡೆದ ಚೈತನ್ಯವನ್ನು, ಸಾಧಿಸಿಕೊಂಡ ಹಕ್ಕುಗಳನ್ನು ಒಳಗೊಂಡು ಹದಿನೆಂಟು ಅಧ್ಯಾಯಗಳಲ್ಲಿ ಹರಿಯುವ ಇನ್ನೂರು ನಲವತ್ತು ಪುಟಗಳಷ್ಟು ಸುದೀರ್ಘವಾದ ದಲಿತ ಕಾದಂಬರಿ. ಐದು ತಲೆಮಾರುಗಳಲ್ಲಿ ಈ ಕಾದಂಬರಿ ಹಾದು ಹೋಗುತ್ತದೆ. ಪಾತ್ರಗಳು ಪ್ರಧಾನವಾಗಿರದೇ ಸಮಸ್ಯೆಗಳನ್ನು ಆಧರಿಸಿ ನಡೆಯುವ ಕಾದಂಬರಿಯಿದು.



ಆಂಧ್ರ ಪ್ರದೇಶದಲ್ಲಿ ಪೂರ್ವ ಕರಾವಳಿಗೆ ಪ್ರತ್ಯೇಕ ಸ್ಥಾನವಿದೆ. ಅಲ್ಲಿ ನೀರಾವರಿ ಸಂಪನ್ಮೂಲ ಹೆಚ್ಚಿರುವುದರಿಂದ ಸಂಪನ್ನತೆಯೂ ಅಧಿಕವಾಗಿಯೇ ಇದೆ. ಚೈತನ್ಯವೂ ಅಧಿಕವಾಗಿದೆ. ಆಂಧ್ರ ಪ್ರದೇಶದಲ್ಲಿ ನಡೆದ ಹಲವಾರು ಹೋರಾಟಗಳು, ಚಳವಳಿಗಳು ಅಲ್ಲಿಂದಲೇ ಹುಟ್ಟಿಕೊಂಡಿವೆ. ಸುಮಾರು ಒಂದೂವರೆ ಶತಮಾನದಷ್ಟು ಹಿಂದೆಯೇ ಕ್ರೈಸ್ತ ಮಿಷನರಿಗಳು ಆ ಪ್ರದೇಶವನ್ನು ಪ್ರವೇಶಿಸಿದರು. ಒಂದೆಡೆ, ಬಡಜನತೆಗೆ ಸಹಾಯಕವಾಗುವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲೇ ಮತ್ತೊಂದೆಡೆ ಮತಾಂತರವನ್ನು ಮಾಡಿದರು. ಈ ಮಿಷನರಿಗಳ ನೆರಳಲ್ಲಿಯೇ ದಲಿತರ ವಿಕಾಸವೂ ಪ್ರಾರಂಭಗೊಂಡಿತು. ದಲಿತ ವರ್ಗವು ವಿದ್ಯೆ, ಉದ್ಯೋಗ, ಸಾಂಸ್ಕೃತಿಕ ರಂಗಗಳಲ್ಲಿ ಪರಿಪಕ್ವತೆಯನ್ನು ಹೊಂದಿ ಹೋರಾಟ ಸ್ಫೂರ್ತಿಯನ್ನು ಮತ್ತು ಆತ್ಮಸ್ಥೈರ್ಯವನ್ನು ಪಡೆದುಕೊಂಡಿತು. ಆನಂತರ ಬಂದ ಮಾರ್ಕ್ಸಿಸ್ಟ್ ಚಳವಳಿಯು ದಲಿತ ವರ್ಗವನ್ನು ಪ್ರಶ್ನಿಸುವ ಮಟ್ಟಕ್ಕೆ ಕೊಂಡೊಯ್ಯಿತು. ಈ ಹಿನ್ನಲೆಯಲ್ಲಿ ಕಾರಂಚೇಡು ಘಟನೆಯ ನಂತರ 'ದಲಿತ ಮಹಾಸಭಾ' ರಚನೆಯಾಗಿ ಉನ್ನತ ಕುಲದ ಸಿದ್ಧಾಂತಗಳನ್ನೇ ಪ್ರತಿರೋಧಿಸುವ ಮಟ್ಟಕ್ಕೆ ದಲಿತ ವರ್ಗ ಮುಟ್ಟಿತು. ದಲಿತರ ಐಕ್ಯತೆಯ ಘೋಷಣೆಗಳು ಪ್ರಾರಂಭವಾದವು. ಆನಂತರ ಚೆಂಡೂರು ಘಟನೆ ಸಂಭವಿಸಿತು. ಈ ಬಲಿದಾನಗಳ ತ್ಯಾಗ ಮತ್ತು ಅದರಿಂದ ಉದ್ಭವಿಸಿದ ಹೋರಾಟ ಸ್ಫೂರ್ತಿಗಳು ಆಂಧ್ರ ಪ್ರದೇಶದ ಇತರೆ ಪ್ರದೇಶಗಳಿಗೂ ತಟ್ಟಿತು. ಒಂದು ಕಾಲದಲ್ಲಿ ಕೂಲಿಗಳಾಗಿ, ಗುಲಾಮರಾಗಿ ಬದುಕಿದ ದಲಿತರು ನಂತರ ಒಕ್ಕಲುದಾರರಾಗಿ ಪರಿವರ್ತನೆ ಹೊಂದಿ ವಿದ್ಯೆ, ಉದ್ಯೋಗ, ರಾಜಕೀಯ ಮತ್ತು ಸಾಹಿತ್ಯ ರಂಗಗಳಲ್ಲಿ ಶಕ್ತಿಯನ್ನು ಗಳಿಸಿ ಸಮಾನ ಹಕ್ಕನ್ನು ಸಾಧಿಸುವ ಹಾದಿಯಲ್ಲಿ ಪಯಣಿಸಿರುವುದು ಕಂಡುಬರುತ್ತದೆ. ಪ್ರಸ್ತುತದಲ್ಲಿ ಆಂಧ್ರದ

ಶಿಶಿಲರನ್ನು ಟೀಕಿಸಿದ್ದೇಕೆಂದರೆ....



ಪ್ರಭಾಕರ ಶಿಶಿಲ

ಒಂದು ಪತ್ರ

ನವೆಂಬರ್ 21 ರ ತಮ್ಮ ಪತ್ರಿಕೆಯಲ್ಲಿ ಸುಳ್ಯ ಸಾಹಿತ್ಯ ಸಮ್ಮೇಳನದ ವಿವಾದದಲ್ಲಿ ಡಾ. ಪ್ರಭಾಕರ ಶಿಶಿಲರನ್ನು ಅವರ ವಿದ್ಯಾರ್ಥಿಯಾದ ನಾನೇ ಟೀಕಿಸಬೇಕಾದ ಸಂದರ್ಭ ಬಂದಿರುವ ಬಗ್ಗೆ ಪ್ರಕಾಶ್ ಪಿಂಟೋ ಅವರು ಬರೆದಿದ್ದಾರೆ. ಆದರೆ ನಾನು ಯಾಕೆ ಟೀಕಿಸಬೇಕಾಗಿ ಬಂದಿದೆ ಎಂಬುದರ ಬಗ್ಗೆ ಸ್ಪಷ್ಟತೆ ಕಾಣಿಸದೇ ಇರುವುದರಿಂದ ಬರೆಯಬೇಕಾಗಿದೆ.

ಜೆ.ಎಸ್. ಉಬರಡ್ಕ ಅವರು ಜಯಪ್ರಕಾಶ್ ನಾರಾಯಣರ ಪ್ರಭಾವದಿಂದ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ನಡೆಸಿದವರು. ಅನ್ಯಾಯವನ್ನು ಪ್ರತಿಭಟಿಸಿ ಕಥೆ ಬರೆದದ್ದಕ್ಕೆ ಪೊಲೀಸ್ ಸ್ಟೇಷನ್ ಮೆಟ್ಟಿಲೇರಿದವರು. 15 ವರ್ಷ ರಾಜಕೀಯದಲ್ಲಿದ್ದು ಗ್ರಾಮ ಪಂಚಾಯತ್ ಅಧ್ಯಕ್ಷರೂ ಆಗಿದ್ದು ಗ್ರಾಮೀಣ ರಾಜಕೀಯಕ್ಕೆ ಸಂವೇದನಾಶೀಲತೆಯನ್ನು ತಂದವರು. ದಲಿತರಿಗೆ ಮನೆ ಕಟ್ಟಿಸಿಕೊಡಬೇಕು, ನಮ್ಮಲ್ಲಿ ಎಲ್ಲರೂ ಸಾಕ್ಷರರಾಗಬೇಕು ಎಂದೆಲ್ಲ ಕನಸು ಹೊತ್ತು ಕೆಲಸ ಮಾಡಿದವರು. "ನೀವು ದುಡ್ಡು ಮಾಡ್ಕೋಬೇಕು ಜೆಎಸ್" ಎಂದು ಯಾರಾದರೂ ಕೀಟಲೆ ಮಾಡಿದರೆ ಅದನ್ನು ಗಂಭೀರವಾಗಿ ತೆಗೆದುಕೊಂಡು "ಈ ಬಾರಿ ಬಿಡುವುದಿಲ್ಲ, ಮಂಗಳೂರಿಗೆ ಹೋಗಿ ಬಂದ ಟಿಎ ಬಿಲ್ ಹಾಕಿಯೇ ಬಿಡುತ್ತೇನೆ" ಎನ್ನುವಂತಹ ಪ್ರಾಮಾಣಿಕ ರಾಜಕಾರಣ ಅವರದು. ಕಡೆಗೆ ಬೇಸತ್ತು ರಾಜಕೀಯದಿಂದ ನಿವೃತ್ತಿ ಹೊಂದಿದವರು. ಒಳ್ಳೆಯ ಸಾಹಿತಿ, ಮೇಲಾಗಿ ಒಳ್ಳೆಯ ಮನುಷ್ಯ. ಅಂತಹವರಿಗೆ ಶಿಶಿಲರೂ, ಜಾಕೆ ಮಾಧವ ಗೌಡರೂ ಸೇರಿ ಅನ್ಯಾಯ ಮಾತ್ರ ಅಲ್ಲ; ಅವಮಾನವನ್ನೂ ಮಾಡಿದರು. ಜಾಕೆ ಮಾಧವ ಅವರು ಸಮಾರಂಭಗಳ ಮನೆಯಲ್ಲಿ, "ಅವನಿಂದ ಏನಾದೀತು?" ಎಂದು ಉಬರಡ್ಕರನ್ನುದ್ದೇಶಿಸಿ ಆಡಿಕೊಂಡಿದ್ದಾರೆಂಬ ವದಂತಿಗಳೂ ಇವೆ. ವದಂತಿ ಸುಳ್ಳಿರಬಹುದು. ಆದರೆ ಇವರು ನಡೆದುಕೊಂಡದ್ದು ಉಬರಡ್ಕರಿಂದ ಏನಾದೀತು ಎಂಬ ರೀತಿಯಲ್ಲೇ.

ಒಬ್ಬ ಒಳ್ಳೆಯ ಮನುಷ್ಯನ ಮೇಲೆ ಈ ರೀತಿ ದಾಳಿ ನಡೆಸಿದರೆ ಅಂತಾದ್ದನ್ನು ನಡೆಯಲು ಬಿಡುವುದಿಲ್ಲ; ಆ ಮಟ್ಟಿಗೆ ಮನುಷ್ಯ ಒಂಟಿಯಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಬೇಕಾಗಿತ್ತು, ಆ ಕೆಲಸವನ್ನು ನಾನು ಮಾಡಿದ್ದೇನೆ. ಶಿಷ್ಟ ಸಂಸ್ಕೃತಿ-ದುಷ್ಟ ಸಂಸ್ಕೃತಿ ಎನ್ನುವ ಶಿಶಿಲರು ತಮ್ಮದು ಯಾವ ಸಂಸ್ಕೃತಿ ಎಂದು ಹೇಳಬೇಕು. ಎರಡನೆಯದಾಗಿ ಶಿಶಿಲರು ಕ.ಸಾ.ಪ. ನಿರ್ದೇಶಕರು. ಅವರೇ ಆಯ್ಕೆ ಸಭೆಯಲ್ಲಿದ್ದು ತಮ್ಮನ್ನು ತಾವೇ ಆಯ್ಕೆ ಮಾಡಿಕೊಳ್ಳುವುದನ್ನು "ಶಿಶಿಲರಿಗೆ ಅರ್ಹತೆ ಇದೆ" ಎಂಬ ಕಾರಣಕ್ಕೆ ನಾವೀಗ ಸಹಿಸಿಕೊಳ್ಳಬಹುದು. ಆದರೆ ಈಗ ಇದನ್ನು ಸಹಿಸಿಕೊಂಡರೆ ಇನ್ನೊಮ್ಮೆ ಒಬ್ಬ ಅನರ್ಹ ಬಂದು ತನ್ನನ್ನು ತಾನೇ ಆಯ್ಕೆ ಮಾಡಿಕೊಂಡು ಶಿಶಿಲರ ಆಯ್ಕೆಯನ್ನು ಸಮರ್ಥನೆಯಾಗಿ ಕೊಡಲು ತೊಡಗುತ್ತಾನೆ. ಆಗ ಏನು ತಾನೇ ಮಾಡಲು ಸಾಧ್ಯ? ಆದ್ದರಿಂದ ಶಿಶಿಲರ ಅಪ್ರಜಾಸತ್ತಾತ್ಮಕ, ಅನೈತಿಕ ಆಯ್ಕೆ ವಿಧಾನವನ್ನು ಪ್ರತಿಭಟಿಸಲೇಬೇಕಾಗಿದೆ. ಸ್ವತಃ ಶಿಶಿಲರೇ ಅನ್ಯಾಯ ಮಾಡಿದರೆ ಅವರನ್ನೇ ಪ್ರತಿಭಟಿಸುವಂತಹ ವಿದ್ಯಾರ್ಥಿಗಳನ್ನು ಅವರು ರೂಪಿಸಿದ್ದಾರೆಂಬುದು ಶಿಶಿಲರಿಗೆ ಗೌರವ ತರುವ ಸಂಗತಿಯಾಗಬೇಕೆಂದೇ ನಾನು ಭಾವಿಸುತ್ತೇನೆ.

ಶಿಶಿಲರಲ್ಲಿ ಸಹಾಯ ಮಾಡುವ ಗುಣವಿದೆ. ಸ್ವತಃ ನನಗೇ ಅವರು ಸಹಾಯ ಮಾಡಿದ್ದುಂಟು. ಕಾರ್ಗಿಲ್ ನಿಧಿ, ಭೂಕಂಪ ನಿಧಿ ಎಂದೆಲ್ಲ ಒಳ್ಳೆಯ ಮೊತ್ತದ ದೇಣಿಗೆಯನ್ನು ಕೊಡುವ ಅವರು ತರಗತಿಗೆ ಬಂದರೆ ಚೆನ್ನಾಗಿ ಪಾಠ ಮಾಡುತ್ತಾರೆ. ಹಲವಾರು ಒಳ್ಳೆಯ ಆಫರ್‌ಗಳನ್ನು ಬಿಟ್ಟು ಕೆಲವು ಕಾಸುಗಳ ಸಂಬಳಕ್ಕೆ ಬಡವರ ಮಕ್ಕಳ ಶಾಲೆಯಲ್ಲೇ ಇರುತ್ತೇನೆಂಬ ನಿರ್ಧಾರವನ್ನು ನಾನು ತೆಗೆದುಕೊಳ್ಳಲು ಶಿಶಿಲರೇ ನನಗೆ ಆದರ್ಶ. ಅವರು ಯಾವ ಕಸರತ್ತು ಮಾಡದೆಯೂ ಗೌರವಗಳು ತಾನಾಗಿಯೇ ಅವರ ಬಳಿಗೆ ಬರಬಲ್ಲಷ್ಟು ಪ್ರತಿಭೆಯೂ ಅವರಿಗಿದೆ. ಆಷ್ಟಿದ್ದೂ ಅವರ ಕಸರತ್ತುಗಳು ಬೇಸರ ತರಿಸುತ್ತವೆ.

ತುಳು ಭಾಷೆಯಲ್ಲೇ ರಚನೆಯಾದ ಮೂಲಕೃತಿಗಾಗಿ ಇರುವ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆಯಲು ತನ್ನ ಕನ್ನಡ ಕಥೆಗಳನ್ನು ಬೇರೆಯವರಿಂದ ತುಳುವಿಗೆ ಅನುವಾದಿಸಿ ತನ್ನ ಹೆಸರಿನಲ್ಲಿ ಪ್ರಕಟಿಸುವುದು, ತಮ್ಮ ಕಾದಂಬರಿಯಲ್ಲಿ ನನ್ನ ಅಧ್ಯಾಪಕರೇ ಆಗಿರುವ ನೆಹರೂ ಮೆಮೋರಿಯಲ್ ಕಾಲೇಜಿನ ಅಧ್ಯಾಪಕರುಗಳನ್ನು ಹೆಸರು ಬದಲಾಯಿಸಿ ಚಿತ್ರಿಸಿ ಅವರೆಲ್ಲ ಪ್ರತಿಭೆ ಇಲ್ಲದವರು; ತನ್ನನ್ನು ಸೂಚಿಸುವ ಪಾತ್ರ ಮಾತ್ರ ಪ್ರತಿಭಾವಂತ ಎಂದೆಲ್ಲ ಚಿತ್ರಿಸುವುದರ ಬಗ್ಗೆ ನನ್ನ ಆಕ್ಷೇಪವಿದೆ. ಇನ್ನು ಅವರು ಸೃಷ್ಟಿಸುತ್ತಿರುವ ಜೋಕುಗಳ ಬಗ್ಗೆ ಸಹಾನುಭೂತಿ ಇದೆ.


ಮೊನ್ನೆಮೊನ್ನೆ ಶಿಶಿಲರು ಕೆಲವು ವಿದ್ಯಾರ್ಥಿಗಳು ಮತ್ತು ಸ್ನೇಹಿತರನ್ನು ಕರೆದುಕೊಂಡು ಸುಳ್ಯದಿಂದ ಮಂಗಳೂರಿಗೆ ಸೈಕಲ್ ಜಾಥಾ ಮಾಡಿದರು. ಉಳಿದವರದ್ದೆಲ್ಲ ಪರಿಸರ ಸೈಕಲ್ ಅಂತೆ. ಶಿಶಿಲರದ್ದು ಮಾತ್ರ ಸಾಹಿತ್ಯ ಸೈಕಲ್ ಅಂತೆ! ಸುಳ್ಯದಿಂದ ಮಂಗಳೂರಿಗೆ ಸೈಕಲ್ ಮೆಟ್ಟಿಕೊಂಡು ಹೋದರೆ ಸಾಹಿತ್ಯದ ಬೆಳವಣಿಗೆಯಾಗುತ್ತದೆ ಎನ್ನುವ ಜಾನ್ ಮೆನಾರ್ಡ್ ಕೇನ್ಸ್ ಥಿಯರಿಯನ್ನು ಮೀರಿದ ಶಿಶಿಲರ ಥಿಯರಿಯ ತಲೆ-ಬುಡ ಒಂದೂ ನನಗರ್ಥವಾಗುತ್ತಿಲ್ಲ. ಸಾಹಿತ್ಯ ಪಾಣೆ ಮಂಗಳೂರು ಸೇತುವೆ ಬಳಿ ಮಾರ್ಗದ ಬದಿಯಲ್ಲಿ ಬಿದ್ದಿದೆಯೋ? ಆಯಿತು, ಅಲ್ಲಿಗೆ ಮುಗಿಯಲಿಲ್ಲ. ಮಂಗಳೂರಿಗೆ ಹೋಗಿ ಅಲ್ಲಿ ಪ್ರದೀಪ್‌ಕುಮಾರ್ ಕಲ್ಕೂರರ ಬಳಿ ಜಗಳವನ್ನೆಲ್ಲ ಆಡಿ ಅಲ್ಲಿಂದ ಇಲ್ಲಿಗೆ ಸೈಕಲ್‌ನಲ್ಲಿ ಬಂದದ್ದಕ್ಕಾಗಿ ಹಾರ ಹಾಕಿಸಿಕೊಂಡೇ ಬಂದುಬಿಟ್ಟರು. "ನಾನು ಸೈಕಲ್ ಮೆಟ್ಟಿಕೊಂಡು ಹೋಗುವುದು ಟೀವಿ 9 ನಲ್ಲಿ ಬರುತ್ತದೆ. ನೋಡಿ ಅದನ್ನು" ಎಂದು ಸಾಹಿತಿಗಳಿಗೆಲ್ಲ ಎಸ್‌ಎಂಎಸ್ ಕಳಿಸುವುದೇನು, ಫೋನ್ ಮಾಡಿ ಹೇಳುವುದೇನು; ಇದನ್ನೆಲ್ಲ ನೋಡಿ ಇವರು ಪ್ರೊಫೆಸರೋ-ಜೋಕರೋ ಎಂದು ಅರ್ಥವಾಗದೆ ನಾನು ಗೊಂದಲದಲ್ಲಿ ಮುಳುಗಿದ್ದೇನೆ.

ಈಗ ಮತ್ತೊಂದು ಜೋಕ್. ದೇವೇಗೌಡರು, ಸ್ಪೀಕರಿಗೆ ಕಳಿಸಬೇಕಾದ ಪತ್ರವನ್ನು ರಾಜ್ಯಪಾಲರಿಗೆ ಕಳಿಸಿದ್ದು ನಿಮಗೆ ನೆನಪಿರಬಹುದು. ಹಾಗೆಯೇ 'ಲಂಕೇಶ್' ಬಂದ ತಕ್ಷಣ ಶಿಶಿಲರು "ಲಂಕೇಶ್‌ನಲ್ಲಿ ನನ್ನ ತೇಜೋವಧೆ ಮಾಡಲಾಗಿದೆ. ಆದ್ದರಿಂದ ನಾನು ಸಮ್ಮೇಳನಾಧ್ಯಕ್ಷ ಆಗುವುದಿಲ್ಲ" ಎಂದು ಎಸ್‌ಎಂಎಸ್ ಟೈಪ್ ಮಾಡಿ ಸಾಹಿತಿಗಳಿಗೆಲ್ಲ ಕಳಿಸಿದರು. (ಕದನ ಕುತೂಹಲಿಯೊಬ್ಬರು ಅದನ್ನು ನನಗೂ ಫಾರ್ವರ್ಡ್ ಮಾಡಿರುವುದರಿಂದ ನಿಮಗೂ ಅದನ್ನು ಫಾರ್ವರ್ಡ್

ಕರಾವಳಿಯಲ್ಲಿ ಕ್ರೈಸ್ತ ಮಾರ್ಕ್ಸ್‌ವಾದಿ ಹಾಗೂ ಅಂಬೇಡ್ಕರ್‌ವಾದಗಳ ತಿಕ್ಕಾಟಗಳ ಸಮ್ಮಿಳನದಲ್ಲಿ ದಲಿತ ಪ್ರಜ್ಞೆ ಮುನ್ನಡೆಯುತ್ತಿದೆ. ಈ ಸುದೀರ್ಘ ಹಿನ್ನೆಲೆಯಲ್ಲಿಯೂ 'ಅಂಟರಾನಿ ವಸಂತಂ' ಕಾದಂಬರಿಯನ್ನು ವಿಶ್ಲೇಷಿಸ ಬೇಕಾಗುತ್ತದೆ.

ಆಂಧ್ರ ಪ್ರದೇಶದ ಪ್ರಕಾಶಂ ಜಿಲ್ಲೆಯಲ್ಲಿ ಮಾಲಮಾದಿಗರು ಬಡತನವನ್ನು ಅನುಭವಿಸುತ್ತಿರುವುದು, ಜಾನಪದ ಕಲೆಗಳನ್ನು ಪ್ರದರ್ಶಿಸುವುದು, ದೊಡ್ಡ ಕಲಾಕಾರರಾಗಿ ರಾಜ್ಯದಲ್ಲಿ ಪ್ರಖ್ಯಾತರಾಗುವುದು ಅವರ ಚರಿತ್ರೆಯ ಭಾಗವೇ ಆಗಿವೆ. ಮೇಲ್ಜಾತಿಗಳನ್ನು ವಿರೋಧಿಸುವುದು, ಮೇಲ್ಜಾತಿಯ ಜನ ಮಾಲಮಾದಿಗರ ಮೇಲೆ ದಾಳಿಗಳನ್ನು ನಡೆಸುವುದು, ನಂತರ ಬರಗಾಲ ಆವರಿಸುವುದು, ಹಳ್ಳಿಗಳು ಸ್ಮಶಾನವಾಗುವುದು, ಮಾಲಮಾದಿಗರಿಗಾಗಿ ಮಿಷನರಿ ಸಂಸ್ಥೆಗಳು ಕಾಲುವೆ ನಿರ್ಮಾಣವನ್ನು ದತ್ತಕ್ಕೆ ತೆಗೆದುಕೊಳ್ಳುವುದು,

ಜಿ. ಕಲ್ಯಾಣರಾವ್‌ರವರ



ಅನುವಾದ: ಪ್ರೊ. ನಗರಗೆರೆ ರಮೇಶ್

ಕೂಲಿಗಾಗಿ, ಉದ್ಯೋಗಕ್ಕಾಗಿ ಕರಾವಳಿ ದಲಿತರು ಕ್ರೈಸ್ತ ಧರ್ಮವನ್ನು ಸ್ವೀಕರಿಸುವುದು, ಪಾಶ್ಚಾತ್ಯ ನಾಗರಿಕತೆಯ ಪ್ರಭಾವ ಹಳ್ಳಿಗಳ ಮೇಲೆ ಬೀಳುವುದು, ವಸಾಹತುಶಾಹಿಯು ಜಾತಿ ವ್ಯವಸ್ಥೆಗೆ ಹೊಸ ಉಸಿರನ್ನು ನೀಡುವುದು, ಭಾರತ ದೇಶದಲ್ಲಿ ಜಾತಿ ನಿರ್ಮೂಲನೆಗಾಗಿ ಆತ್ಮಗೌರವದ ಹೋರಾಟಗಳು ಪ್ರಾರಂಭವಾಗುವುದು, ಮಿಷನರಿ ಸಂಸ್ಥೆಗಳು ಹೆಚ್ಚಾಗಿ ಬೆಳೆದು ಕಮ್ಯೂನಿಸ್ಟ್ ಚಳವಳಿ ಬಲವನ್ನು ಪಡೆದುಕೊಳ್ಳುವುದು, ಶ್ರೀಕಾಕುಳಂನಲ್ಲಿ ಸಶಸ್ತ್ರ ಹೋರಾಟ ನಡೆಯುವುದು, ಗಾಂಧಿಯುಗದಲ್ಲಿ ಹರಿಜನೋದ್ಧಾರಕ್ಕಾಗಿ ಸುಧಾರಣೆಗಳು ಪ್ರಾರಂಭವಾಗುವುದು, ಮಾರ್ಕ್ಸಿಸ್ಟ್ ಚಳವಳಿಯ ನೆರಳಿನಲ್ಲಿಯೇ ದಲಿತರ ಚೈತನ್ಯ ಬೆಳೆಯುವುದು, ಕಾರಂಚೇಡು ಘಟನೆ ನಡೆಯುವುದು, ರಾಜ್ಯದಲ್ಲಿ ತೆಲುಗುದೇಶಂ ಹಲವಾರು ಸುಧಾರಣೆಗಳನ್ನು ಕೈಗೊಳ್ಳುವುದು.... ಹೀಗೆ ಹೆಚ್ಚುಕಡಿಮೆ ಒಂದೂವರೆ ಶತಮಾನದಷ್ಟು ದಲಿತ ಚರಿತ್ರೆಯ ಹಿನ್ನೆಲೆಯಲ್ಲಿ ಹುಟ್ಟಿದ ಕಾದಂಬರಿ 'ಅಂಟರಾನಿ ವಸಂತಂ'. ಈ ಕಾದಂಬರಿಯ ಪ್ರಧಾನ ಕೇಂದ್ರ ಪ್ರಕಾಶಂ ಜಿಲ್ಲೆಯ ಎನ್ನಲದಿನ್ನೆ ಎಂಬ ಗ್ರಾಮ. ಸಮಸ್ಯೆ ಅಸ್ಪೃಶ್ಯತೆ.

ಈ ಕಾದಂಬರಿಯಲ್ಲಿ ಒಂದೂವರೆ ಶತಮಾನದ ಹಿಂದೆ ಕರಾವಳಿ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಅಸ್ಪೃಶ್ಯತೆಯ ಸ್ವರೂಪ ಮತ್ತು ಸ್ವಭಾವಗಳು ಕಂಡುಬರುತ್ತವೆ. ದಲಿತರು ಜಾನಪದ ಕಲಾವಿದರುಗಳೆಂದು, ಇವರ ಜಾನಪದ ಕಲೆ ಮತ್ತು ಸಂಸ್ಕೃತಿಗಳು ಮಹೋನ್ನತವಾದವುಗಳೆಂದು, ದಲಿತರ ಚರಿತ್ರೆಯೆಲ್ಲಾ ರಕ್ತಸಿಕ್ತವಾದದ್ದೇ ಎಂದು, ಈ ದೇಶದಲ್ಲಿ ಉಸಿರಾಡುವ ಗಾಳಿಗೆ, ಬೆಳೆಯುವ ಬೆಳೆಗೆ, ಆಹಾರ ಮತ್ತು ಉಡುಪುಗಳಿಗೆ, ಕಾನೂನಿಗೆ, ನ್ಯಾಯಕ್ಕೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ ಜಾತಿಯು ಅಂಟಿಕೊಂಡಿದೆಯೆಂದು, ಹೋರಾಟವು ಭವಿಷ್ಯದ ಬಗ್ಗೆ ಭರವಸೆಯನ್ನು ಬೆಳೆಸುತ್ತದೆಯೆಂದು, ದಲಿತರ ಜೀವನದಲ್ಲಿ ಪ್ರೇಮ, ಹೋರಾಟ ಮತ್ತು ತ್ಯಾಗಗಳು ಬೆಸೆದುಕೊಂಡಿದೆಯೆಂದು, ಕಳೆದ ಶತಮಾನದ ದಲಿತರ ಜೀವನವೆಲ್ಲ ಹೋರಾಟವೇ ಎಂದು, ಈ ಹೋರಾಟದ ಪರಿಣಾಮ ವಾಗಿಯೇ ದಲಿತರು ಈ ಶತಮಾನದಲ್ಲಿ ದಲಿತರು ವಿಜಯವನ್ನು ಪಡೆಯುತ್ತಾರೆಂಬ ಅಂತರಾರ್ಥ ಈ ಕಾದಂಬರಿಯಲ್ಲಿ ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ ತಲೆಮಾರುಗಳು ಬದಲಾಗುತ್ತವೆ. ಕಾಲವೂ ಬದಲಾಗುತ್ತದೆ. ಶತಮಾನಗಳು ಆಗಿಹೋಗುತ್ತವೆ. ಆದರೆ, ಅದೇ ಅಸ್ಪೃಶ್ಯತೆ, ಅದೇ ಗುಲಾಮಿತನ, ಅದೇ ಜೀವನ, ಅದೇ ಚರಿತ್ರೆ, ಅದೇ ಸಂಸ್ಕೃತಿ, ಅದೇ ಅವಮಾನಗಳ ಪರಂಪರೆ. ಕಾಲ ಬದಲಾದರೂ, ಧರ್ಮ ಬದಲಾದರೂ, ಜೀವನ ಬದಲಾಗಲಿಲ್ಲ, ಎಲ್ಲವೂ ಅನ್ವೇಷಣೆಯೆ. ಆಂಧ್ರದಲ್ಲಿ ಮಾಲಮಾದಿಗರು, ತಮಿಳುನಾಡಿನಲ್ಲಿ ಪಾಲರುಗಳು, ಕರ್ನಾಟಕದಲ್ಲಿ ಹೊಲೆಮಾದಿಗರು, ಮಹಾರಾಷ್ಟ್ರದಲ್ಲಿ ಮಾಂಗ್‌ಗಳು, ಮಹರ್‌ಗಳು, ಭಂಗಿಗಳು, ಚಮಾರ್‌ಗಳು.... ಹೀಗೇ ಯಾವುದೇ ಹೆಸರಿನಲ್ಲಿ ಕರೆಯಲ್ಪಟ್ಟರೂ ಸಮಾಜವು ಅಪವಿತ್ರವೆಂದೂ, ಅಸಹ್ಯವೆಂದೂ ಕಂಡವರ, ತಿರಸ್ಕೃತವಾದ ಬದುಕುಗಳೆ, ಗಲ್ಲಿಗೇರಿಸಲ್ಪಟ್ಟ ನಾಗರಿಕತೆಗಳೆ. ಹೀಗೆ ವಂಚಿತ ಜೀವಿತಕ್ಕೆ ಹೋರಾಟವೇ ಮಾರ್ಗವೆಂಬ ಪಾಠವನ್ನು ಲೇಖಕ ಬೋಧಿಸುತ್ತಾರೆ. ಹೀಗೆ, 'ಅಂಟರಾನಿ ವಸಂತಂ' ಕಾದಂಬರಿ ಒಂದೂವರೆ ಶತಮಾನದ ತೆಲುಗು ದಲಿತರ ಜೀವಿತವನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಈ ಒಂದೂವರೆ ಶತಮಾನದಲ್ಲಿ ತೆಲುಗು ದಲಿತರಲ್ಲಿ ಬೆಳೆದ ಚೈತನ್ಯ ನಡೆದ ಘರ್ಷಣೆಗಳು, ಹೋರಾಟಗಳು, ಸಂಭವಿಸಿದ ಕ್ರಾಂತಿಕಾರಕ ಬದಲಾವಣೆಗಳು ಕಂಡುಬರುತ್ತವೆ.

ಈ ಕಾದಂಬರಿಯಲ್ಲಿ ಫ್ಯಾಂಟಸಿ ಸ್ವರೂಪದ ಕಥನಕ್ರಮವಿದೆ. ವಾಸ್ತವಿಕತೆಯ ಆಧಾರದಲ್ಲಿ ಊಹಾಪ್ರಪಂಚಕ್ಕೆ ತೆರಳುವುದು ಫ್ಯಾಂಟಸಿ. ಕಾದಂಬರಿಯಲ್ಲಿ ರೂಥ್, ತನ್ನ ನೆನಪುಗಳನ್ನು ತನ್ನ ಮೊಮ್ಮಗಳು ಜಸ್ಸಿಗೆ ಕಥೆಯಾಗಿ ಹೇಳುತ್ತಾಳೆ. ಗತದ ನೆನಪುಗಳು ಕಣ್ಣಮುಂದೆ ಚಲಿಸುತ್ತಿರುವಂತೆ ಕಾದಂಬರಿ ಸಾಗುತ್ತದೆ.

ದಲಿತರ ಸ್ವಾಭಿಮಾನವನ್ನು ಎತ್ತಿಹಿಡಿಯುವ 'ಅಂಟರಾನಿ ವಸಂತಂ'

■ ಡಾ. ಸತ್ಯನಾರಾಯಣ

'ವಿರಸಂ' ಸಂಘಟನೆಯ ನಾಯಕರಾದ ಮತ್ತು 'ಅರುಣತಾರ'ದ ಸಂಪಾದಕರಾದ ಜಿ. ಕಲ್ಯಾಣರಾವ್ ಬರೆದ 'ಅಂಟರಾನಿ ವಸಂತಂ' ಕಾದಂಬರಿಯನ್ನು ದಲಿತರು, ಶೋಷಿತ ಜಾತಿಗಳ ಜನರು, ಪ್ರಜಾತಂತ್ರವಾದಿಗಳು ಮತ್ತು ಸ್ವಾಭಿಮಾನಿಗಳು ತಪ್ಪದೇ ಓದಬೇಕು. ದಲಿತರಿಗೆ ತ್ಯಾಗಗಳ ಚರಿತ್ರೆಯಿದೆ, ಹೋರಾಟದ ಚರಿತ್ರೆಯಿದೆ. ಈ ವಾಸ್ತವವನ್ನು ದಲಿತ ಚಳವಳಿ ಮತ್ತು ದಲಿತ ಸಾಹಿತ್ಯ ಚಳವಳಿ ಜನರ ಗಮನಕ್ಕೆ ತಂದಿದೆ. ಇಂತಹ ಚರಿತ್ರೆಯನ್ನು ಹೇಗೆ ಬರೆಯಬೇಕೆಂಬುದನ್ನು 'ಅಂಟರಾನಿ ವಸಂತಂ' ಕಾದಂಬರಿಯನ್ನು ಬರೆದು ಕಲ್ಯಾಣರಾವ್ ತೋರಿಸಿಕೊಟ್ಟಿದ್ದಾರೆ.

ದಲಿತರ ಹೋರಾಟದಲ್ಲಿ ಸ್ವಾಭಿಮಾನದ ಹೋರಾಟ ಮುಖ್ಯವೋ ಅಥವಾ ಹಸಿವಿನ ಹೋರಾಟ ಮುಖ್ಯವೋ ಎಂಬ ಚರ್ಚೆಯಿದೆ. ದಲಿತ ಸಾಹಿತ್ಯ ಚಳವಳಿಯಲ್ಲೂ ಕೂಡ ಈ ಅಂಶದ ಬಗ್ಗೆ ತೀವ್ರವಾದ ಚರ್ಚೆ ನಡೆದಿದೆ. 'ಅಂಟರಾನಿ ವಸಂತಂ' ಕಾದಂಬರಿಯಲ್ಲಿ ಸ್ವಾಭಿಮಾನದ ಹೋರಾಟ ಮತ್ತು ಹಸಿವಿನ ಹೋರಾಟ ಜೊತೆಜೊತೆಯಾಗಿಯೇ ನಡೆಯುತ್ತದೆ. ಈ ಹೋರಾಟಗಳು ಬೇರೆ ಬೇರೆಯಾಗಿರುವುದಿಲ್ಲ.

ದಲಿತರ ಹೋರಾಟ ಮತ್ತು ಜೀವನಗಳೆರಡೂ ವಸಂತಗಳೆ. ಆದ್ದರಿಂದಲೇ ಈ ಕಾದಂಬರಿ ದಲಿತರನ್ನು ವೀರರನ್ನಾಗಿ, ಕಲಾವಿದರನ್ನಾಗಿ, ರೋಮ್ಯಾಂಟಿಕ್ ಆಗಿ ಚಿತ್ರಿಸಿದೆ ಎನ್ನುವವರೂ ಇದ್ದಾರೆ. ಇದು ನಿಜವಲ್ಲ. 'ಅಂಟರಾನಿ ವಸಂತಂ' ಕಾದಂಬರಿಯು ಮಾಲಮಾದಿಗರನ್ನು ರೋಮ್ಯಾಂಟಿಕ್ ಆಗಿ ಚಿತ್ರಿಸಿಲ್ಲ; ಅವರ ಬದುಕನ್ನು ಪ್ರವಾಹದಲ್ಲೂ, ಬರಗಾಲದಲ್ಲೂ ಕಣ್ಣೀರನ್ನೂ ಕಷ್ಟವನ್ನೂ ಸಹಿಸಿ ಸಹಿಸಿ ಸತ್ತು ಸತ್ತು ಬದುಕಿದ್ದನ್ನು ವಾಸ್ತವ ರೀತಿಯಲ್ಲಿ ಕಟ್ಟಿಕೊಡುತ್ತದೆ. ದಲಿತರು ಸ್ವಾಭಿಮಾನಿ ಜೀವನಕ್ಕಾಗಿ ತಲೆ ಎತ್ತಿ ನಡೆದರೆ ಹತ್ಯೆಗೊಳಗಾಗುತ್ತಾರೆ. ಅಸ್ಪೃಶ್ಯರು ಇಷ್ಟೊಂದು ಕಷ್ಟ, ಕಣ್ಣೀರುಗಳನ್ನು ಸಹಿಸಿದರೂ ಕೂಡ ಹೋರಾಡುತ್ತಾ ತ್ಯಾಗ-ಬಲಿದಾನಗಳನ್ನು ಮಾಡುತ್ತಾ ಮುಂದುವರೆಯುತ್ತಲೇ ಇದ್ದಾರೆ. ಅವರ ತ್ಯಾಗಗಳು, ಹೋರಾಟಗಳು ಒಂದು ವಸಂತವೆ. ಅವರ ಸಂಸ್ಕೃತಿ, ಅವರ ಕಲಾರೂಪಗಳೂ ವಸಂತವೆ. ಕಲ್ಯಾಣರಾವ್ ಚಿತ್ರಿಸುವ ದಲಿತರು ಕಷ್ಟಗಳಿಗೆ, ಕಣ್ಣೀರುಗಳಿಗೆ ಕುಗ್ಗಿಹೋಗುವವರಲ್ಲ; ದುಃಖವನ್ನು ನುಂಗಿಕೊಂಡು ಬಾಧೆಗಳೆಲ್ಲವನ್ನೂ ಸಹಿಸಿಕೊಂಡು ಸಿಡಿಲ ನೃತ್ಯದೊಂದಿಗೆ ಪ್ರಳಯವನ್ನೇ ಸೃಷ್ಟಿಸುವವರು.

ದಲಿತರಿಗೆ ತಮ್ಮ ಜೀವನದ ಬಗ್ಗೆ ಪ್ರೇಮವನ್ನೂ, ತಮ್ಮ ಸಂಸ್ಕೃತಿಯ ಬಗ್ಗೆ ಗೌರವವನ್ನೂ, ತಮ್ಮ ಹೋರಾಟದ ಬಗ್ಗೆ ನಂಬಿಕೆಯನ್ನೂ ಗಳಿಸಿಕೊಡುವುದೇ 'ಅಂಟರಾನಿ ವಸಂತಂ' ಸಾಧಿಸಿದ ದೊಡ್ಡ ವಿಜಯ. ಸಾಹಿತ್ಯಕ್ಕೆ ಇದಕ್ಕಿಂತ ಮಿಗಿಲಾದ ಪ್ರಯೋಜನ ಉಂಟೆ?

ಮಾಡುತ್ತಿದ್ದೇನೆ). ನಿಜವಾಗಿಯೂ ಅವರಿಗೆ ಸಮ್ಮೇಳನಾಧ್ಯಕ್ಷ ಆಗುವುದಿಲ್ಲ ಎಂದೆನಿಸಿದ್ದರೆ ಅಧಿಕೃತ ಪತ್ರವನ್ನು ಕ.ಸಾ.ಪ. ಅಧ್ಯಕ್ಷರಿಗೆ ರವಾನಿಸಿ; ಬೇಕಾದರೆ ಪ್ರತಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಬಹುದಿತ್ತು. ಹಾಗೆ ಮಾಡದೆ ಸಾಹಿತಿಗಳಿಗೆ ಎಸ್‌ಎಂಎಸ್ ಕಳಿಸುವುದರ ಅರ್ಥ ಏನು? ಯಾರಾದರೊಬ್ಬರು, "ಇಲ್ಲ, ನೀವೇ ಆಗಬೇಕು" ಎನ್ನಬೇಕು. ಆಮೇಲೆ ಬಹುಜನರ ಒತ್ತಾಯದ ಮೇರೆಗೆ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳಬೇಕಾಯಿತು ಎಂದು ಅವರು ಹೇಳಬೇಕು ಎಂಬ ದೇವೇಗೌಡರ ತಂತ್ರ ಇದು. ಆದರೆ ಕಿಲಾಡಿ ಸಾಹಿತಿಯೊಬ್ಬರು, "ನೀವು ಅಧ್ಯಕ್ಷರಾಗಿ ಎಂದು ನಾನು ಹೇಳಲೂ ಇಲ್ಲ, ರಾಜೀನಾಮೆ ಕೊಡಿ ಎಂದು ಕೇಳಲೂ ಇಲ್ಲ, ರಾಜೀನಾಮೆ ಕೊಟ್ಟರೆ ನನ್ನ ಆಕ್ಷೇಪವೇನೂ ಇಲ್ಲ" ಎಂದು ತಿರುಗಿ ಎಸ್‌ಎಂಎಸ್ ಕಳಿಸಿದರಂತೆ! (ಇದು ಸೃಷ್ಟಿಸಲ್ಪಟ್ಟ ಜೋಕೂ ಇರಬಹುದು). ನಂತರ ಜಾಕೆ ಮಾಧವಗೌಡರು ಶಿಶಿಲರನ್ನು ರಾಜೀನಾಮೆ ಕೊಡಬೇಡಿ ಎಂದು ಸಮಾಧಾನಪಡಿಸಿದರಂತೆ. ಶಿಶಿಲರು ಫ್ರಾನ್ಸ್‌ಗೆ ಹೋಗಿ ಬರುವವರೆಗೆ ಸರಿಯಾಗಿಯೇ ಇದ್ದರು. ಫ್ರಾನ್ಸ್‌ನಿಂದ ಬಂದು ಹೊಸ ಮನೆ ಕಟ್ಟಿಸಿ ಮನೆ ಬಾಗಿಲಿಗೆ ಶಾಂತಿ-ನೆಮ್ಮದಿಯ ಸಂಕೇತವಾದ ಬುದ್ಧನ ಚಿತ್ರ ಕೊರೆಸಿದರು ನೋಡಿ, ಅಲ್ಲಿಂದ ಪ್ರಾರಂಭವಾಯಿತು ಶಾಂತಿ ನೆಮ್ಮದಿಯನ್ನು ಕೆಡಿಸಿಕೊಂಡು ಇತರರ ನೆಮ್ಮದಿಯನ್ನೂ ಕೆಡಿಸುವ ಶಿಶಿಲರ ಕೆಲಸಗಳು!

ಈಗ ವೈಯುಕ್ತಿಕ ದ್ವೇಷದಿಂದ ನಾನು ಶಿಶಿಲರನ್ನು ಟೀಕಿಸುತ್ತಿದ್ದೇನೆ, ಉಬರಡ್ಕರಿಗೆ ಅಧ್ಯಕ್ಷತೆ ಕೊಡಿಸಲು ಟೀಕಿಸುತ್ತಿದ್ದೇನೆ ಎಂದೆಲ್ಲ ಹೇಳಿ ಬಾಯಿಮುಚ್ಚಿಸುವ ಪ್ರಯತ್ನಗಳು ನಡೆಯುತ್ತಿದೆ. ನನಗೆ ವೈಯುಕ್ತಿಕ ದ್ವೇಷ ಬರಬೇಕಾದರೆ ಶಿಶಿಲರು ನನಗೇನಾದರೂ ಅನ್ಯಾಯ ಮಾಡಿರಬೇಕಲ್ಲ. ಏನು ಅನ್ಯಾಯ ಮಾಡಿದ್ದಾರೆಂದು ಹೇಳಲಿ ಹಾಗಾದರೆ. ವೈಯುಕ್ತಿಕ ದ್ವೇಷದಿಂದ

BAARANE: *An Anthology of Short Stories in Tulu Language by Dr. Prabhakara Shishila Dept. of Economics Nehru Memorial College Sullia D.K. Karnataka, 574239. Published by Swanthika Sahithya Balaga, 4/299, Dr. B. R. Ambedkar colony Road, Karra, Kanthamangala, P.O. Ajjawara Sullia, D.K. 574246 Phone: 20633 STD: 08257.*

YIRUVUDELLAVA BITTU – A novel in Kannada by Dr. B. Prabhakara Shishila, Director, Dr. P.R. Brahmananda Amarasulya Arthashastra Adhyana Kendra, No. 4/303, Shishila Road, Kanthamangala, P.O. Ajjawara, Sullia Tq, D.K. – 574246 Phone 08257230663, Mobile : 9448725818, Published by Damini Sahithya No. 559, 9th Main, M.C. Layout, Vijayanagar, Bangalore – 560 040.

ಅಂಬೇಡ್ಕರ್ ರಸ್ತೆಯನ್ನು ಶಿಶಿಲ ರಸ್ತೆಯನ್ನಾಗಿಸಿದ ಶಿಶಿಲರ ಚಮತ್ಕಾರ

ಹೇಳಲು ಹೊರಟರೆ ಶಿಶಿಲರ ಎಂತೆಂತಹ ಬಂಡವಾಳಗಳು ನನ್ನ ಬಳಿ ಇವೆ; ಅದರಲ್ಲಿ ಒಂದೇ ಒಂದನ್ನೂ ನಾನು ಡಿಸ್ಕ್ಲೋಸ್ ಮಾಡುತ್ತಿಲ್ಲ ಎಂದು ಶಿಶಿಲರಿಗಿಂತ ಚೆನ್ನಾಗಿ ಬಲ್ಲವರು ಬೇರಾರೂ ಇಲ್ಲ. ಆದರೆ ನೋವು ಇದೆ. ಕೆ.ಪಿ. ಸುರೇಶರು ನನ್ನನ್ನು ಅವಮಾನಿಸಿದಾಗ "ಇದನ್ನೆಲ್ಲ ಸೌಹಾರ್ದಯುತ ಟೀಕೆ" ಎಂದು ತೆಗೆದುಕೊಳ್ಳಬೇಕೆಂದ ಶಿಶಿಲರು ನಾನವರನ್ನು ಟೀಕಿಸಿದಾಗ "ತೇಜೋವಧೆ" ಎಂದು ಬಡಬಡಿಸುತ್ತಿರುವುದರ ಬಗ್ಗೆ ವಿಷಾದವಿದೆ.

ನಾಯಿಗೆ ಅನ್ನ ಹಾಕಿದ್ದೇನೆ ಎನ್ನುವ ಹಾಗೆ "ಅವನಿಗೆ ನಾನು ನನ್ನ ಮನೆಗೆ ಬಂದಿದ್ದಾಗ ಅನ್ನ ಹಾಕಿದ್ದೇನೆ" ಎಂದು ಶಿಶಿಲರು ಈಗ 1001 ನೇ ಬಾರಿ ಹೇಳುತ್ತಿದ್ದಾರೆ. ಶಿಶಿಲರು ಯಾರ ಮನೆಯಲ್ಲೆಲ್ಲ ಅನ್ನ ತಿಂದಿದ್ದಾರೆಂಬ ಲೆಕ್ಕಾಚಾರ ಕೊಟ್ಟುಬಿಡಲೇ ಎನಿಸುತ್ತದೆ. ಆದರೆ ನನ್ನ ಗುರುಗಳ ಘನತೆಗೆ ಕುತ್ತು ಬರುವಂತೆ ನಾನು ಇಳಿಯಬಾರದು ಎಂದು ಸುಮ್ಮನಿದ್ದೇನೆ. ಶಿಶಿಲರ ಈ ಪ್ರವೃತ್ತಿಯ ಬಗ್ಗೆ ನೋವು ಇದೆ. ಆದರೆ ದ್ವೇಷ ಇಲ್ಲ. ಹೀಗೆಲ್ಲ ಹೇಳಿ ನನ್ನ ಬಾಯಿ ಮುಚ್ಚಿಸುತ್ತೇನೆಂದು ಭಾವಿಸಿದರೆ ಅದವರ ಭ್ರಮೆ. ಉಬರಡ್ಕರಿಗೆ ಅಧ್ಯಕ್ಷತೆ ಕೊಡಿಸುವ ಉದ್ದೇಶ (ಹಾಗೆ ಕೊಡಿಸಲು ಅದೇನು ಬಸ್ಟ್ಯಾಂಡ್ ಟಿಕೆಟ್ ಡೆಯಾ?) ನನಗಿಲ್ಲ, ಆದರೆ ಉಬರಡ್ಕರಿಗೆ ಅಪಮಾನ ಮಾಡಿದ್ದಾರೆ. ಅದಕ್ಕೆ ಪಶ್ಚಾತ್ತಾಪ ಪಟ್ಟು ಕ.ಸಾ.ಪ ಅಧ್ಯಕ್ಷರೂ-ಶಿಶಿಲರೂ ಉಬರಡ್ಕರ ಬಳಿ ಹೋಗಿ ಕ್ಷಮೆ ಕೇಳಬೇಕು. ಮತ್ತು ಆಗಿರುವ ಆಯ್ಕೆ ವಿಧಾನದ ಅಚಾತುರ್ಯವನ್ನು ಒಪ್ಪಿಕೊಂಡು ಮುಂದೆಂದೂ ಕ.ಸಾ.ಪ ಕಾರ್ಯಕಾರಿ ಸಮಿತಿಯವರೇ ಸಮ್ಮೇಳನಾಧ್ಯಕ್ಷ ರಾಗುವಹಾಗೆ ನೋಡಿಕೊಳ್ಳುವುದಾಗಿ ಕ.ಸಾ.ಪ. ಅಧ್ಯಕ್ಷರು ಪತ್ರಿಕಾ ಹೇಳಿಕೆ ನೀಡಬೇಕು.

ಒಬ್ಬ ಬರಹಗಾರನಾಗಿ ನಾನು ಟೀಕಿಸಿದ್ದು ಸರಿಯೇ ಆದರೂ ಶಿಶಿಲರ ವಿದ್ಯಾರ್ಥಿಯಾಗಿ ಶಿಶಿಲರಿಗೆ ಹರ್ಟ್ ಆಗಿರುವ ಬಗ್ಗೆ ನನಗೆ ನನ್ನ ಬಗ್ಗೆಯೇ ಬೇಸರವಿದೆ. ಅದಕ್ಕಾಗಿ ಶಿಶಿಲರ ಬಳಿ ನಾನು ಕ್ಷಮೆ ಕೇಳಬಲ್ಲೆ. ಆದರೆ ಇವರು ಉಬರಡ್ಕರೇನು ಮಹಾ, ಕಸಾಪ ಜನತಾಂತ್ರಿಕ ವಾಗಿರಬೇಕೆಂದು ಹೇಳಲು ಇವರು ಯಾರು ಎಂದು ದುರಹಂಕಾರದಿಂದಲೇ ವರ್ತಿಸುತ್ತಾ ಹೋದರೆ ಶಿಶಿಲರ ನಿರೀಕ್ಷೆಯ ಹಾಗೆ ಸಮ್ಮೇಳನ ನಡೆಯಲು ಬಿಡುವುದಿಲ್ಲ ಎನ್ನುವವರಲ್ಲಿ ನಾನೂ ಒಬ್ಬ. ಆದರೆ ಅದರ ಉದ್ದೇಶ ಕ.ಸಾ.ಪ. ಜನತಾಂತ್ರಿಕವಾಗಿ ವರ್ತಿಸಬೇಕು ಎಂಬ ಅರಿವನ್ನು ಬೆಳೆಸುವುದಾಗಿರುತ್ತದೆ ಹೊರತು ಸಮ್ಮೇಳನವನ್ನು ಕೆಡಿಸುವುದಲ್ಲ. ಶಿಶಿಲರು ಆಧಾರರಹಿತ ಆರೋಪ ಎನ್ನುತ್ತಿರುವುದರಿಂದ ನನ್ನ ಟೀಕೆಗಳ 'ಶಿಶಿಲ ರಸ್ತೆ' 'ನಂಬರ್ ಸೆವೆನ್' 'ಪೂರ್ವಾಧ್ಯಕ್ಷರ ಪತ್ರ'ಗಳೆಲ್ಲದರ ದಾಖಲೆಗಳನ್ನು ಇದರೊಂದಿಗೆ ಕಳಿಸುತ್ತಿದ್ದೇನೆ.

ಅರವಿಂದ ಚೊಕ್ಕಾಡಿ ■

ಲಂಕೇಶ್
ಏಜಂಟರು ಬೇಕಾಗಿದ್ದಾರೆ
ಹಿರೇಕೆರೂರು, ಎಚ್.ಬಿ.ಹಳ್ಳಿ, ಸಂಡೂರು, ಕೂಡ್ಲಿಗಿ, ನೆಲಮಂಗಲ, ಹೊಸೂರು, ಗುಂಡ್ಲುಪೇಟೆ, ಕೆ.ಆರ್. ಪೇಟೆ, ಮೂಡಬಿದಿರೆ, ಹುಕ್ಕೇರಿ, ಬಾಲ್ಕಿ, ಹುಮನಾಬಾದ್, ವಾಡಿ, ಎನ್.ಆರ್.ಪುರ ಮತ್ತು ಕೊಲ್ಹಾಪುರ, ಚಿಂಚೋಳಿ ಮತ್ತು ವಿರಾಜಪೇಟೆ
ಸಂಪರ್ಕಿಸಿ:
080-26676427,
98803 02817

ಜೆ.ಟಿ. ದ್ಯಾವೇಗೌಡ ರೇವಣ್ಣನ ಹೆಡ್ತಿಗೆ ಚಾಡಿ ಹೇಳಿದ್ದನಂತೆ!

ಸಂಜೆಯಾಯಿತೆಂದರೆ ಚಳಿ. ಬೆಳಗಾಯ್ತೆಂದರೆ ಕೊರೆಗೆ ನಡುಗಿಹೋಗಿದ್ದ ಕಾಳಮಾವ ಹರುಕಲು ಸ್ವೆಟರ್ ಇಕ್ಕಿ, ತಲೆಗೆ ರುಮಾಲು ಬಿಗಿದು, ದಗ್ಗೊದ್ದುಕೊಂಡು ಕುಳಿತಿದ್ದ. ಅವನ ಅವತಾರ ನೋಡಿದ ಜುಮ್ಮಿ,

"ಇದ್ಯಾಕೊ ಮಾವ ಬಗೇಸಿಗಂಡು ಕುಂತಿದ್ದೀ?" ಎಂದಳು.

"ಚಳಿಕಂತ್ಲೆ, ನೈನ್ನೆದಿನಂತು ನಡಿಗೋದೆ. ಅದ್ಕೆ ನಿಮ್ಮತ್ತೆ ಅದೆಲ್ಲೊ ಇದ್ದ ಸ್ವೆಟರ್ ತಗುದು ಕೊಟ್ಟು ಹಿಕ್ಕೊ ಅಂತವ" ಎಂದು ಆಂಜನೇಯ ರಾಮನಿಗೆ ಎದೆ ಬಗೆದು ತೋರಿದಂತೆ ಕಾಳಮಾವ ಸ್ವೆಟರ್ ತೋರಿದ. ಅದರ ಅಂಗೈಯಗಲದ ತೂತು ನೋಡಿದ ಜುಮ್ಮಿ,

"ಅದೇನಾಟೊಂತರ ತೂತಾಗ್ಯದೆ?" ಎಂದಳು.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಇಲಿ ಕಡುದುಬುಟ್ಟವೆ. ಅದ ವಲಿಯಕ್ಕೂ ಬರದಿಲ್ಲ ತ್ಯಾಪೆ ಹಾಕಕ್ಕೂ ಬರದಿಲ್ಲ" ಎಂದ.

"ಮುದ್ಕೆ ತಗಬವುದಿತ್ತಪ್ಪ."

"ಇನ್ನೆನಾಯ್ತಲ್ಲ ತಗೊ. ಸಳಿಯೇಟು ದಿನಿದ್ದಳೂ" ಎಂದು ಕಾಳಮಾವ ಹೇಳುವಾಗ ಉಗ್ರಿ,

"ಜನ ಇದ್ದೋಟ ದಿನವೆ ಆಯ್ತು ಅಂತ ಮಾಡಬಾರದ್ದೆ ಮಾತ್ತ ಇರುವಾಗ ನೀನೊಂದು ಸ್ವೆಟರ್ ತಗಳಕ್ಕೆ ಹಿಂದುಮುಂದೆ ನೋಡ್ತಿಯಪ್ಪ" ಎಂದ.

"ಅವ್ರಿವ್ರು ಮಾಡ್ತರೆ ಅಂತ ನಾವು ಮಾಡಕ್ಕಾದತ್ಲ?"

"ನೋಡಾ ಬಿಜೆಪಿ ಬಡ್ಡೆತ್ತವು, ಏಟು ದಿನಿರತವೊ ಏನೊ, ವಿಧಾನಸೌಧದ ವಳಗಡೆ ಹೋಮ ಹವನ ಮಾಡಿ ವಗೆ ಎಬ್ಬಿಸಿ ಗೂರ್ಲು ಗುರುಗ್ಲು ಇದ್ದ ಅಧಿಕಾರಿಗಳ್ನೆಲ್ಲ ಮುಕಳರಿಯ ಕೆಮ್ಮಂಗೆ ಮಾಡಿದ್ದವಂತೆ" ಎಂದ ಉಗ್ರಿ.

"ಅವುಕೇನು ಬತ್ತ ಮಲ್ಲಾಗ್ರು?"

"ಅವುಕೆ ಮಲ್ಲಾಗ್ರು ಇವತ್ತಲ್ಲ ಕಣೆ ಬಂದಿರದು. ಅವು ಹುಟ್ಟದಾಗ್ಲೆ ಬಂದದೆ. ಈಗ ಕ್ಕಳಿಸಿಗಂಡಿದ್ದೆ ಅಷ್ಟೆಯ."

"ಅಂಗರೆ ಇದಾನ ಸುಭೆಲಿ ಅಂಗ್ಯಲ್ಲ ಮಾಡಂಗಿಲವೇನ್ಲ?" ಎಂದ ಸೀರ.

"ಪೂಜೆ ಮಾಡಿಕಬುವುದು ಕಣಮಾವ. ಆದ್ರು ಜನಗಳ ಗೋಳು ನೋಡಿದ್ರೆ ಅದ್ನ ಮಾಡಕ್ಕೆ ಯಾವನಿಗೂ ಮನುಸು ಬರದಿಲ್ಲ. ಆದ್ರೆ ಈ ಹಗುಲು ಗ್ಯಾಪಾಳದ ನನ್ನ ಮಕ್ಕಳಿಗೆ ಅದೇ ಒಂದಿದು. ಅದ್ಕೆ ಹೋಗ್ಲೊ ಬಾಗ್ಲು, ಕೂರೊ ಕುರ್ಚಿಗ್ಯಲ್ಲ ಪೂಜೆ ಮಾಡಿಕತ್ತವೆ. ಇನ್ನೇನಾರ ಅಲ್ಲೇ ಪರಮನೆಂಟಾಗಿ ಇರಂಗಿದ್ರೆ ಇನ್ನೇನೇನು ಕಟ್ಟು ಕರಾರು ಮಾಟಮಂತ್ರ ಮಾಡುಸ್ತಿದ್ರೊ ಏನೊ?"



"ಅದ್ನ ಮಾಡುಸ್ತರಂತಲ್ಲ, ದ್ಯಾವೇಗೌಡ ದಿನ ಮಾಡುಸ್ತನಂತೆ" ಎಂದ ಸೀರ.

"ಅವುನೇ ಅಂಗೆ ಮಾಡಿದ ಮ್ಯಾಲೆ ಇನ್ನ ಇವು ಬುಟ್ಟವೆ?-ಆದ್ರು ದ್ಯಾವೇಗೌಡ ಇದಾನ ಸೌಧದ ವಳಗಡೆ ಅಂತದನ್ನೆಲ್ಲ ಮಾಡತಿರಲಿಲ್ಲ."

"ಅವುನ್ನೆಲ್ಲ ಮನೆಲೆ ಮಾಡತಿದ್ದ ಅನ್ನು?"

"ಪಾರ್ಟಿ ಆಪೀಸಿನ ಮುಂದೂ ಮಾಡತಿದ್ದ."

"ಅವುನ್ನೆಲ್ಲ ಲೋಕ ಕಲ್ಯಾಣಕ್ಕಾಗಿ ಮಾಡತಿದ್ನೊ ಅಥವಾ ಕುಟುಂಬ ಕಲ್ಯಾಣಕ್ಕಾಗಿ ಮಾಡತಿದ್ನೊ ಉಗ್ರಿ?" ಎಂದುಕೊಂಡು ವಾಟಿಸೆ ಹಾಜರಾದ.

"ಅವುನ ತಲೆ ವಳಗಡೆ ಯಾವತ್ತು ಲೋಕ ಕಲ್ಯಾಣ ಸುಳದಿತ್ತೊ?"

"ನಿಜವೆಯ. ಆದ್ರು ಹಿರಿಯಳ್ಳನ ಚಾಳಿ ಮನಿಮಂದಿಗ್ಯಲ್ಲ ಅಂತ ಆ ರೇವಣ್ಣನ ಹಣೆ ನೋಡಿದ್ರೆ ದ್ಯಾವೇಗೌಡನ ಹಣೆ ನೋಡಿದಂಗಾಯ್ತದೆ ಕಣೊ. ಕ್ಯಾಣನ ತಲಿಗೆ ನೀರ್ಯಾಕೊ ಪೂಜಾರಿ ಹಣೆ ತರ ಯಾವಾಗ್ಲು ಗದಗರಿತದೆ" ಎಂದ ವಾಟಿಸ್ಸೆ.

"ಏನೇನೊ ಅವುರ ನಂಬುಕೆ ಬುದಿರ್ಲ, ಹೋಗಲತ್ತಗೆ" ಎಂದ ಕಾಳಮಾವ.

"ದ್ಯಾವೇಗೌಡನೂ ರೇವಣ್ಣನೂ ಜಗಳಾಡಿದರಂತಲ್ಲಾ ಯಾಕ್ಲ?" ಎಂದಳು ಜುಮ್ಮಿ.

"ನಿನಿಗ್ಯಾರಕ್ಕ ಹೇಳಿದೋರು?"

"ಪಂಚಾತಿ ಆಪೀಸಲ್ಲಿ ಮಾತಾಡತಿದ್ರು ಕಂಡ್ಯ. ದ್ಯಾವೇಗೌಡ ರೇವಣ್ಣನ ಹೆಡತಿಗೆ ಚಾಡಿ ಹೇಳಿದ್ನಂತೆ. ಅದೇನು ನನ್ನೆಡ್ತಿ ಹತ್ರ ಚಾಡಿ ಹೇಳ್ತಿ, ಹೇಳೊದಿದ್ರೆ ನನಿಗೇ ಹೇಳು ಅಂದನಂತೆ ರೇವಣ್ಣ. ಅಂಗೇ ಮಾತಿಗೆ ಮಾತು ಬ್ಯಳದು ಭಾರಿ ಜಗಳವೇ ಆಯ್ತಂತೆ" ಎಂದಳು ಜುಮ್ಮಿ.

"ಥೂ, ಆ ದ್ಯಾವೇಗೌಡಲ್ಲ ಕಣಕ್ಕಾ, ಜೆ.ಟಿ. ದ್ಯಾವೇಗೌಡ ಅಂತ ಮೈಸೂರಲ್ಲೊಬ್ಬ ಅವುನೆ. ಅವುನು ರೇವಣ್ಣನ ಹೆಡತಿತಕ್ಕೆ ಹೋಗೀ ಚಾಡಿ ಹೇಳಿದ್ದನಂತೆ."

"ಏನಂತ ಹೇಳಿದಾ?"

"ರೇವಣ್ಣ ಅಂಗೆ, ಹಿಂಗೆ. ನೀನೊಸಿ ಬುದ್ಧಿಹೇಳು ಅಂತ ಹೇಳಿದನಂತೆ. ಅದ್ಕೆ ರೇವಣ್ಣ ಸಿಟ್ಟಾಗಿ, ಬಾಯಿಗೆ ಬಂದಂಗೆ ಬೋದವುನಂತೆ ಕಣಕ್ಕ."

"ಏನಂತ ಬೋದುನ್ಲ?"

"ರೇವಣ್ಣ ಬೈಯಂದು ನಿನಿಗೊತ್ತಿಲವೇನಕ್ಕ, ಬೋಳಿಮಕ್ಕಳು ಮಾತಾಡದಿದ್ರೆ ನನ್ನತ್ರ ಮಾತಾಡಬೇಕು. ನನ್ನೆಡ್ತಿ ಅತ್ರಕ್ಯಾಕೋಗಬೇಕು? ನಾವೇನು ಇವುರೆಡ್ತಿರತ್ರ ಹೋಗಿ ಮಾತಾಡ್ತಿವ? ಮನಿಯಾಳ ನನ್ನಮಕ್ಳು ಗಂಡ ಹೆಡ್ತಿರ್ನೆ ಬ್ಯಾರೆ ಮಾಡ್ತರೆ. ಇವುರೇನು ವಂಶೀಕರ ಮಕ್ಕಳ? ಅಂದಿರತನೆ."

"ಅವುನೇಳದು ಸರಿ ಕಂಡ್ಯ. ಈ ಬೋಳಿ ಮಕ್ಕಳ್ಯಾಕೆ ಅವುನೆಡ್ತಿತಕ್ಕೋಗಿ ಮಾತಾಡಬೇಕು?" ಎಂದ ಕಾಳಮಾವ.

"ರೇವಣ್ಣನೆಡ್ತಿ ಕೈ ತ್ವಳಕಂಡು ಮುಟ್ಟಂಗವುಳೆ ಕಣಮಾವ. ಅಂಥೋಳು ಈ ರೇವಣ್ಣನ್ನ ಯಂಗೊಪ್ಪಿದ್ಲೊ ಏನೋ?" ಎಂದಳು ಜುಮ್ಮಿ.

"ದ್ಯಾವೇಗೌಡ ಒಪ್ಪಿಸಿರತನೆ ಕಣೆ. ಅವುನ ರಾಜಕಾರಣಕ್ಕೆ ಇಡೀ ಕರ್ನಾಟಗನೆ ಕಾಲುಮುರಕೊಂಡು ಬದ್ದಿರುವಾಗ ರೇವಣ್ಣನ ಹೆಡ್ತಿ ಮನಿಯೋರು ಮರುಳಾಗಿರದಿಲವೆ?" ಎಂದ ಉಗ್ರಿ.

"ಅದೇನಾರ ಆಗ್ಲಿ, ರೇವಣ್ಣನ ಹೆಡ್ತಿತಕ್ಕೋಗಿ ಚಾಡಿ ಹೇಳ್ತನೆ ಅಂದ್ರೆ ಅಂತ ಮನುಸುನ್ನ ಯಾರೂ ಮನಿಗೆ

ಬರಲಿದೆ ವಿಧಾನಸೌಧಕೆ ಶಾಶ್ವತ ಯಜ್ಞ ಕುಂಡ

ಭೇಷ್ ಯಡಿಯೂರಪ್ಪ ಭೇಷ್!

ಇದುವರೆವಿಗೂ ಯಾವ ಮುಖ್ಯಮಂತ್ರಿಯೂ ಸಾಧಿಸಲಾಗದ್ದನ್ನು ನೀವು ಸಾಧಿಸಿದಿರಿ. ವಿಧಾನಸೌಧವನ್ನು ಯಜ್ಞ ಶಾಲೆಯನ್ನಾಗಿ ಪರಿವರ್ತಿಸಿದಿರಿ. ಯಜ್ಞ ಕುಂಡವನ್ನು ಸ್ಥಾಪಿಸಿ ಹೋಮ ಹವನ ಸಾಂಗವಾಗಿ ನೆರವೇರಿಸಿದಿರಿ! ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದಿರಿ!

ರಾಜಪುರೋಹಿತರ ಶ್ರದ್ಧಾ ಭಕ್ತಿಗಳನ್ನೂ ಅಲ್ಲಗಳೆಯುವಂತಿಲ್ಲ. ಹನ್ನೆರಡು ಘಂಟೆಗೆ ಪಟ್ಟಾಭಿಷೇಕ ಮುಹೂರ್ತ ನಿಶ್ಚಯಿಸಿದರು. ಮುಂಜಾವಿನಿಂದಲೇ ಯಜ್ಞವನ್ನು ಪ್ರಾರಂಭಿಸಿದರು. ಹಲಾಲುಕೋರ ಗ್ರಹಗಳು ಯಾವ ಯಾವ ಗ್ರಹದಲ್ಲಿ ಅಡಗಿಕೊಂಡು ರಾಜ್ಯಾಧಿಕಾರವನ್ನು ತಮ್ಮಿಂದ ಕಿತ್ತುಹಾಕಲು ಪ್ರಯತ್ನಿಸಿದ್ದವೋ, ಅವೆಲ್ಲವನ್ನೂ ಹೋಮ ಹವನದ ಮೂಲಕ ಸಂತುಷ್ಟಿಗೊಳಿಸಲು ಸಾಕಷ್ಟು ಶ್ರಮಪಟ್ಟರು ಪುರೋಹಿತರುಗಳು. ಹನ್ನೆರಡು ಗಂಟೆ ವೇಳೆಗೆ ಅವೆಲ್ಲವನ್ನೂ ಯಾವ ಯಾವ ಮನೆ ಸೇರಿಸಬೇಕೋ ಅಲ್ಲಲ್ಲಿಗೆ ಸೇರಿಸಿದರು. ಅಲ್ಲಿಗೆ ಅವರಿಗೆ ಸಂತೃಪ್ತಿಯಾಯಿತು. ಕೇವಲ ಇಪ್ಪತ್ತು ತಿಂಗಳು ಯಾಕೆ ಇಪ್ಪತ್ತು ವರ್ಷಗಳು ಮುಖ್ಯಮಂತ್ರಿಯಾಗಿ ತಾವು ಖಂಡಿತ ಇರುವಂತೆ ಯಜ್ಞ ನೆರವೇರಿಸಿದರಂತೆ! ಮುಖ್ಯ ಪುರೋಹಿತರ ಬಾಯಿಂದಲೇ ಈ ಅಮೃತವಾಣಿ ಹೊರಬದ್ದಿತು. ಆಹಾ, ಖಾಯಂ ಮುಖ್ಯಮಂತ್ರಿಯಾಗಿರಲು ಎಂತಹ ಸುಲಭ ಮಾರ್ಗ!



ಈ ಪರಿಯಾಗಿ ದೇವಾನುದೇವತೆಗಳನ್ನು ಸಂತುಷ್ಟಿಗೊಳಿಸಿದ್ದನ್ನು ತಮ್ಮ ಪಕ್ಷದ ಅಧ್ಯಕ್ಷ ಹಲ್ಮುಖಿ ಗೌಡರು ಮುಕ್ತಕಂಠದಿಂದ ಹೊಗಳಿದರು. ಭಾರತೀಯ ಪರಂಪರೆಯಲ್ಲಿ ಯಜ್ಞಗಳಿಗೆ ಪವಿತ್ರ ಸ್ಥಾನವಿದೆ; ಅದನ್ನು ಸಾಂಗವಾಗಿ ನಡೆಸುತ್ತಿರುವುದರಿಂದಲೇ ಹಿಂದೂ ಸಂಸ್ಕೃತಿ ಇನ್ನೂ ಉಳಿದಿರುವುದು ಎಂಬುದಾಗಿ ಸಾರಿದರು. ಇದನ್ನು ವಿರೋಧಿಸುವವರಿಗೆ ಹಿಂದೂ ಸಂಸ್ಕೃತಿಯ ಜ್ಞಾನ ಇಲ್ಲ ಎಂದು ವ್ಯಾಖ್ಯಾನಿಸಿದರು. ವೈದಿಕ ಸಂಸ್ಕೃತಿಯೇ ಹಿಂದೂ ಸಂಸ್ಕೃತಿ ಎಂಬುದನ್ನು ಘಟಿಸಿದರು!

ಯಜ್ಞ ಯಾಗಾದಿಗಳನ್ನು ವಿರೋಧಿಸುವ ಅಜ್ಞಾನಿಗಳ ಮಾತಿಗೆ ತಾವೇನೂ ಧೃತಿಗೆಡಲಿಲ್ಲ, ರಾಜ ಗಾಂಭೀರ್ಯದಿಂದ ಮುಖ್ಯಮಂತ್ರಿ ಕೊಠಡಿ ಪ್ರವೇಶ ಮಾಡಿದ ನೀವು ಸಿಂಹಾಸನಕ್ಕೆ ಪೂಜೆಯಂಗೈದಿರಿ. ಏನು ನಯ, ಏನು ವಿನಯ, ಏನು ಭಯ, ಏನು ಭಕ್ತಿ! ನೀವು ನಂಬಿರುವ ದೇವರು ತಾವು ಸಾಯುವವರೆಗೂ ಅದರಿಂದ ಬೇರ್ಪಡಿಸಬಾರದು!

ತಮ್ಮ ಹೃದಯ ವಿಶಾಲವಾದದ್ದು. ಶಾಸನಸಭೆಯಲ್ಲಿ ಶಾಸಕರ ಬೆಂಬಲ ಸಾಬೀತುಪಡಿಸದೆ ಒಂದು ನಿಮಿಷವೂ ಅಧಿಕಾರದಲ್ಲಿ ಇರುವುದಿಲ್ಲ ಎಂದು ಬಹಿರಂಗಗೊಳಿಸಿದಿರಿ. ಅದಕ್ಕೆ ಮೊದಲೇ ಕೆಲವು ರಾಜಕೀಯ ನಿರ್ಧಾರ ತೆಗೆದುಕೊಂಡಿರಿ. ಆದರೂ ಅವು ಜಾರಿಗೆ ಬಾರದಂತೆ ರಾಜಧರ್ಮ ಕಾಪಾಡಿದಿರಿ!

ಬಹುಮತ ಸಾಬೀತುಪಡಿಸಲು ಇನ್ನೂ ಕಾಲಾವಕಾಶ ಇತ್ತು, ತಾವು ಇದರ ಸದ್ಬಳಕೆ ಮಾಡಿಕೊಳ್ಳಲು ಬಯಸಿದಿರಿ. ದೇವಸ್ಥಾನಗಳಿಗೆ, ಮಠಾಧೀಶರ ಬಳಿಗೆ ಯಾತ್ರೆ ಹೋಗಲು ನಿರ್ಧರಿಸಿದಿರಿ! ಮುಖ್ಯಮಂತ್ರಿಯವರ ಸಮಯದ ಸದ್ಬಳಕೆ ಅಂದರೆ ಹೀಗಿರಬೇಕು! ತಾವೇ ಇದಕ್ಕೆ ಮಾದರಿ!

ತಾವು ರಾಜರ್ಷಿಗಳ ಮಾರ್ಗದರ್ಶನದಲ್ಲಿ ರಾಜ್ಯವನ್ನು ಮುನ್ನಡೆಸಲು ಬಯಸಿದ್ದೀರಿ. ಇವರು ಯಾರೆಂಬುದರಲ್ಲಿ ಯಾರಿಗೂ ಸಂಶಯ ಇಲ್ಲ, ಸಂಘ ಪರಿವಾರದ ಮುಖ್ಯಸ್ಥರು ಎಂದೇ ಹೇಳಬಹುದಾಗಿತ್ತು, ಸಮ್ಮಿಶ್ರ ಸರ್ಕಾರದ ರಾಜಧರ್ಮ ಕಾಪಾಡಲು ತಾವು ಇದನ್ನು ಬಹಿರಂಗಪಡಿಸದೇ ಇರುವುದು ಸರಿಯಾಗಿಯೇ ಇದೆ. ಇವರ ಮಾತೇ ತಮಗೆ ವೇದವಾಕ್ಯ ಆಗಬಹುದಾದರೂ ನಮ್ಮ ಒಂದು ಚಿಕ್ಕ ಸಲಹೆ ಇದೆ.

ಸಲಹೆ ಒಂದು: ತಾವು ತಮ್ಮ ಕುರ್ಚಿಯ ಭದ್ರತೆಗಾಗಿ ಯಜ್ಞ ನಡೆಸಿದಿರಿ. ನೌಕರರೂ ತಮ್ಮ ತಮ್ಮ ಕುರ್ಚಿಯ ಭದ್ರತೆಗಾಗಿ ತಮ್ಮ ದಾರಿಯನ್ನೇ ಅನುಸರಿಸಲು ಬಯಸಬಹುದು. ಆದುದರಿಂದ ವಿಧಾನಸೌಧದಲ್ಲಿ ಒಂದು ಶಾಶ್ವತ ಯಜ್ಞ ಕುಂಡ ಸ್ಥಾಪಿಸುವುದು.

ಸಲಹೆ ಎರಡು: ವೈದಿಕ ಧರ್ಮದ ಆಚರಣೆಯೇ ಹಿಂದೂ ಧರ್ಮದ ಆಚರಣೆ ಎಂದು ತಮ್ಮ ಪರಿವಾರ ಭಾವಿಸಿದೆ. ಇದರ ಸಂಕೇತವಾಗಿ ವಿಧಾನಸೌಧಕ್ಕೆ ಮಾತ್ರ ಅಲ್ಲ, ಎಲ್ಲ ಸರ್ಕಾರಿ ಕಚೇರಿಗಳಿಗೂ ಪವಿತ್ರ ಯಜ್ಞೋಪವೀತವನ್ನು ತೊಡಿಸುವುದು.

ಸಲಹೆ ಮೂರು: ಅಧಿಕಾರ ಲಭಿಸಿರುವುದು ಜ್ಯೋತಿಷಿಗಳ, ಪುರೋಹಿತರ, ಮಠಾಧೀಶರ, ದೇವರ ದಯದಿಂದ ಎಂದು ತಾವು ನಂಬಿದ್ದೀರಿ. ಅವರು ಇರುವ ಜಾಗವೇ ಪುಣ್ಯಸ್ಥಳ. ವಿಧಾನಸೌಧದಿಂದ ಪ್ರತಿಗಳಿಗೆಗೂ ಒಂದೊಂದು 'ಯಾತ್ರಾ ವಿಶೇಷ' ಬಸ್ಸನ್ನು ಹೊರಡಿಸುವುದು. ಇವುಗಳಲ್ಲಿ ಮುಫತ್ತಾಗಿ ಸಂಚರಿಸುವ ಭಕ್ತರು ತಮ್ಮ ದೈವಭಕ್ತಿಯನ್ನು ಕೊಂಡಾಡುವುದಲ್ಲದೆ, ಪುಣ್ಯಕ್ಷೇತ್ರಗಳವರೂ ತಮ್ಮನ್ನು ಹರಸುವುದರಲ್ಲಿ ಸಂಶಯ ಇಲ್ಲ.

ತಾವು ತಮ್ಮ ಸಂಘ ಪರಿವಾರದವರು ಅಮೂರ್ತ ಗ್ರಹಗಳನ್ನು, ದೇವರುಗಳನ್ನು ಒಲಿಸಿಕೊಳ್ಳುವ ವಿದ್ಯೆಯಲ್ಲಿ ಪರಂಪರಾಗತವಾದ ಜ್ಞಾನ ಹೊಂದಿದ್ದು ಮೂರ್ತ ಗ್ರಹಗಳನ್ನು ದೇವರುಗಳನ್ನು ಒಲಿಸಿಕೊಳ್ಳುವ ಪರಿ ತಿಳಿದಿರುವ ಸಾಧ್ಯತೆ ಬಗ್ಗೆ ಯಾರಿಗೂ ಸಂಶಯ ಇಲ್ಲ. ಹಲವು ಸಲ ಅಮೂರ್ತಗಳಿಗಿಂತಲೂ ಮೂರ್ತದ ದಂಧೆಯೇ ಹೆಚ್ಚು ಆಗಿರುವುದುಂಟು. ಬಹುಮತ ಸಾಬೀತುಪಡಿಸುವ ಮುನ್ನ ಸಿಗುವ ಬಿಡುವಿನ ಸಮಯದಲ್ಲಿ ದೇವರ, ಮಠಗಳ ಯಾತ್ರೆ ಮಾಡಲು ನಿರ್ಧರಿಸಿದ್ದ ನೀವು ದಿಢೀರನೆ ದೆಹಲಿ ಯಾತ್ರೆ ಕೈಗೊಂಡಿದ್ದು ಇದಕ್ಕೆ ಪುರಾವೆ ಒದಗಿಸುತ್ತದೆ. ಒಟ್ಟಿನಲ್ಲಿ ನಿಮ್ಮ ಯಾತ್ರೆ ಫಲ ನೀಡಲಿ!

ಯಡಿಯೂರಪ್ಪನವರು ಹೀಗೆ ಯಾವ ಯಾತ್ರೆ ಮಾಡಲಿ; ದೇವರ ಯಾತ್ರೆ ಮಾಡಲೋ ದೆಹಲಿಯಾತ್ರೆ ಮಾಡಲೋ ಎಂಬುದಾಗಿ ಗೊಂದಲಕ್ಕೆ ಬಿದ್ದು ಕೊನೆಗೆ ದೇವರ ಯಾತ್ರೆಗಿಂತ ದೆಹಲಿ ಯಾತ್ರೆಯೇ ತಮ್ಮ ಕುರ್ಚಿಯ ಭದ್ರತೆಗೆ ಸಹಾಯಕಾರಿ ಎಂದು ಭಾವಿಸಿ ತೀರ್ಮಾನ ಕೈಗೊಂಡರು. ಆದರೆ ಹರದನಹಳ್ಳಿಯ ಮಾಜಿ ಪ್ರಧಾನಿ ದೇವೇಗೌಡರು ಇನ್ನೊಂದು ರೀತಿಯ ಗೊಂದಲಕ್ಕೆ ಬಿದ್ದಿದ್ದರು. ತಾವು ಮಾಡಿದ ವಿವಿಧ ದೇವರ ಪೂಜೆ, ತರಾವರಿ ಯಜ್ಞ, ಕೈ ತೋರಿಸಿದ ಜ್ಯೋತಿಷರು ಎಲ್ಲವೂ

ಅಣಕ

ಎಚ್.ಎಲ್. ಕೇಶವಮೂರ್ತಿ

ವ್ಯರ್ಥ ಆಯಿತಲ್ಲ, ಈ ಯಡಿಯೂರಿ ಯಾವ ದೇವರನ್ನು ಹಿಡಿದ, ಎಂತಹ ಯಾಗ ಮಾಡಿದ, ಎಲ್ಲಿಯ ಜ್ಯೋತಿಷಿ ಹಿಡಿದ ಎಂದೆಲ್ಲ ಯೋಚಿಸುತ್ತಾ ಯೋಚಿಸುತ್ತಾ ತಲೆ ಗೊಬ್ಬರ ಆಯಿತು. ಇದನ್ನು ಕಂಡುಹಿಡಿದು ಅಭಯ ನೀಡಿದವರಿಂದಲೇ ತಿರುಮಂತ್ರ ಹೇಳಿಸಬೇಕೆಂದು ಅವರ ತಲಾಪಿಯಲ್ಲಿ... ಪತ್ತೇದಾರಿ ಕಾರ್ಯಕ್ಕೆ ಇಳಿದರು. ತಮ್ಮ ಅಸಂಖ್ಯಾತ ರಕ್ತಸಂಬಂಧಿಗಳೆಲ್ಲರನ್ನೂ ಇದನ್ನು ಪತ್ತೆಹಚ್ಚುವ ಕೆಲಸಕ್ಕೆ ಹಚ್ಚಿದರು!

ತಮ್ಮ ತಂದೆ ಪತ್ತೇದಾರಿ ಕೆಲಸದಲ್ಲಿ ಯಶಸ್ಸು ಗಳಿಸಿ ಯಡಿಯೂರಿ ಕೈಗೆ ಕುರ್ಚಿ ಸಿಗದಂತೆ ಮಾಡುವುದರಲ್ಲಿ ಏನೂ ಸಂಶಯವಿಲ್ಲ ಎಂದು ನಂಬಿದ್ದರಿಂದಲೋ... ಅಥವಾ ಶಿವಪಾರ್ವತಿಯರು ತಮ್ಮ ಮಕ್ಕಳಾದ ಗಣೇಶ, ಷಣ್ಮುಖರಿಗೆ ಮೂರು ಲೋಕವನ್ನೂ ಯಾರು ಮೊದಲು ಸುತ್ತ ಬರುತ್ತಾರೋ ನೋಡೋಣ ಎಂದು ಹೇಳಿದಾಗ ಪೆದ್ದ ಷಣ್ಮುಖ ಮೂರು ಲೋಕವನ್ನೂ ಸುತ್ತಿ ಸುಸ್ತಾಗಿ ಬುಸುಬುಸು ಅಂತ ಬಂದನಂತೆ. ಈ ಗಣೇಶ ಅನ್ನೋನು ಸೋಮಾರಿ ತರಹ ಕುಳಿತೇ ಇದ್ದವನು ಇನ್ನೇನು ಷಣ್ಮುಖ ಬಂದೇ ಬಿಡ್ತಾನೆ ಅನ್ನೋದರ ಒಳಗೆ ಶಿವಪಾರ್ವತಿಯರನ್ನು ಒಂದು ಸುತ್ತುಹಾಕಿ ಬಂದನಂತೆ. ನಾನೇ ಗೆದ್ದೆ ಅಂತಾನೂ ಅಂದನಂತೆ. ಇದ್ಯಾಗೋ ಮಗನೆ ಅಂದದ್ದಕ್ಕೆ ಮೂರು ಲೋಕಾನೂ ನಿಮ್ಮೊಳಗೇ ಇದೆಯಲ್ಲ ಅಂದನಂತೆ. ಹಾಗೇನೋ ನಂ ಮೇಧಾವಿ ರೇವಣ್ಣನವರು ಅಧಿಕಾರ

ಹೇರುಸಬಾರ್ದು ಕಂದ್ನ" ಎಂದ ಕಾಳಮಾದ.

"ನಿನನೇನಕರ ಆಗಬಿಲ್ಲ ದ್ವಡಪ್ಪ ಹೆಂಗುಸರ ಮುಖಾಂತರ ರಾಜಕಾರಣ ಮಾಡೋರ್ನ ಯಾರೂ ತಡಿಯಕ್ಕಾಗದಿಲ್ಲ. ಕೆಲವು ಹೆಂಗುಸರ ಅದಕ್ಕೆ ಎಸ್‌ಕ್ಯೂಸ್ ಮಾಡುವಾಗ ಯಂಗೆ ತಡಿತೀ? ಪರೆಗ್‌ಜಾಂಪಲ್ ದೇವರಾಜ ಅರಸು ಕಾಲ್ದಲ್ಲಿ ಕೆಲವು ರಾಜಕಾರಣಿಗಳು ಹೆಂಗಸರಿದಕಂಡು ತಮ್ಮ ಕ್ಯಲಸ ಮಾಡಿಸಿಗತ್ತಿದ್ರಂತೆ. ಹ್ಯಗಡೆ ಕಾಲದಲ್ಲೂ ಅಂಗೆ ಇತ್ತು, ಪಟೇಲು ಕಾಲ್ದಲ್ಲೂ ಇತ್ತು."

"ದ್ಯಾವೇಗೌಡನ ಕಾಲ್ದಲ್ಲಿ ಇರಲಿಲ್ಲ ಕಂದ್ನ."

"ದ್ಯಾವೇಗೌಡನ ಕಾಲ್ದಲ್ಲಿ ಚನ್ನಮ್ಮನ ಹಾವಳಿ, ಅನಿತಕ್ಕನ ಹಾವಳಿ, ಭವಾನಿ, ಇನ್ನೊಬ್ಬಳು ಆ ಬಾಲಕೃಷ್ಣನ ಹೆಡತಿ, ರಾಜಕಾರಣಕ್ಕೆ ಸಿಕ್ಕಿ ನಜ್ಜೆ ಗುಜ್ಜಾಗಿರೋರ ಕರಕಂಡು ಬಂದು ತೋರುಸ್ಲೆ?"

"ಸುಳ್ಳೆಳ್ಳಬ್ಯಾಡ ಹೋಗ್ಲ."

"ಸುಳ್ಯಾಕೇಳನ ದ್ವಡಪ್ಪ? ಜಯದೇವ ಆಸುಪತ್ರೆಲಿ ಕ್ಯಲಸ ಮಾಡೊ ಡಾಕ್ಟರ್‌ಗಳನ್ನೆ ಚೆನ್ನಮ್ಮ ವರ್ಗ ಮಾಡಿಸಿದ್ಲು, ಅದ ಕ್ಯಾನ್ಸಲ್ ಮಾಡಸಕ್ಕೆ ಎಚ್.ಟಿ. ಕೃಷ್ಣಪ್ಪ ಎಷ್ಟು ಕಷ್ಟಬಿದ್ರು ಅಂತ ಹೇಳುಸ್ಲ."

"ಏನಪ್ಪ ಯಾರ ಮಾತು ಕೇಳನ ಹೋಗು."

"ಏನು ಬ್ಯಾಡ ದ್ವಡಪ್ಪ ಅಧಿಕಾರದಲ್ಲಿದ್ದೊರ ಹತ್ತು ಮೈಲಿ ದೂರದ ಸಮಂದಿಗಳೇ ಕಂಡಾಟ ಆಡುವಾಗ ಇನ್ನು ಕಳ್ಳುಬಳ್ಳಿ ಜನ ಸುಮ್ಮನಿದ್ದರೆ? ಸುಮ್ಮನಿರಕ್ಕೆ ಇದೇನು ವಿಶ್ವೇಶ್ವರಯ್ಯನ ಕಾಲವೆ?"

"ರಾಜಕಾರಣದಲ್ಲಿ ಹೆಂಗುಸರ ಮಾತು ಕೇಳಬಾರ್ದು" ಎಂದ ಉಗ್ರಿ.

"ಕೇಳಬಾರ್ದು ಅಂತ ಅಲ್ಲ ಕಣೊ ಉಗ್ರಿ. ಎಷ್ಟು ಬೇಕೋ ಅಷ್ಟು ಕೇಳಬೇಕು. ಕೇಳಿಕಂಡು ಸುಮ್ಮನಿರಬೇಕು. ಅದು ಬುಟ್ಟು ಒಂದು ಸಭೇಲಿ ನನ್ನೆದ್ತಿ ಹತ್ರಕೋಗಿ ಏನೇಳಿದ್ದಿರಿ ಅಂತ ಕೇಳಬಾರ್ದು. ಈ ದ್ಯಾವೇಗೌಡ ರೇವಣ್ಣನ ಹೆಡ್ತಿ ಹತ್ರಕೋಗಿ ಇನ್ನೇನಾರ ಹೇಳಿದ್ರೆ ಗತಿಯೇನು ಅಂತ ಯೋಚ್ನೆ ಮಾಡೂ" ಎಂದ ಉಗ್ರಿ.

"ಅಂತೂ ರಾಜಕಾರಣ ದ್ಯಾವೇಗೌಡನ ಮನೆಲಿರೊ ಸೊಸೆರ ಕ್ವಾಣೆವಳಗೂ ನ್ಯಡಿತಾ ಅದೆ ಅಂದಂಗಾಯ್ತು" ಎಂದ ಸೀರ.

"ಅದೆ ಚಿಗಪ್ಪ ಟ್ರ್ಯಾಜಿಡಿ."

"!!"

■

ಹೇಗಿದ್ರೂ ಇರೋದು ನಿನ್ನತ್ರ ತಾನೆ ಅಂತ ಅವರಪ್ಪನ ಬಳೀನೆ ಕುಂತು ಕಂಡ್ರೋ ಏನು ಕತೆಯೋ. ದೆಹಲಿಗೆ ಹೋಗಿ ರಾಷ್ಟ್ರಪತಿ ಎದುರು ಪರೇಡ್ ಮಾಡಿದ ಶಾಸಕರನ್ನೆಲ್ಲ ಕುರಿತು 'ಅಧಿಕಾರ ಕೊಡಿ ಅಂತ ನಾನು ಯಾರ್‍ಯಾರ್ರೋ ಮನೆ ಬಾಗಿಲಿಗೆ ಅಲೀಲಾ. ಅದೆಲ್ಲ ನನ್ನ ಕೈಲಾಗೋದಿಲ್ಲ' ಅಂದೆಲ್ಲ ಗೇಲಿ ಮಾಡಿದ್ದರು. ಆದರೆ ಎಲ್ಲ ಅಡೆತಡೆಗಳನ್ನೂ ಮೀರಿ ಹಾಳಾದ ಯಡ್ಡಿ ಮುಖ್ಯಮಂತ್ರಿ ಗದ್ದುಗೆಗೆ ಏರಿಯೇ ಬಟ್ಟ. ಕುಂಟಕೊಂಡು ತೆವಳಿಕೊಂಡು ಒಂದಷ್ಟು ದಿವಸ ಮಂತ್ರಿಮಂಡಲ ಅನ್ನುವುದು ಇರುತ್ತೆ ಎಂಬುದು ಖಾತರಿ. ಡಿಸಿಎಂ ಆಗೋಣ ಅಂದರೆ ಶಾಸಕರೇ ಡಿಸ್‌ಮಿಸ್ ಮಾಡ್ತಾರೆ! ಆಗ ಪದ್ಮನಾಭನಗರದ ಕ್ಯಾಂಪಿನಲ್ಲಿ ನಡೆದದ್ದರ ಪ್ರತಿಫಲ ಅಂದರೆ....

ಜೆಡಿಎಸ್ ಯುವ ಶಾಸಕರ ಸಭೆ.

ಉದ್ದೇಶ: ಹೊಸಬರಿಗೆ ಮಂತ್ರಿಮಂಡಲದಲ್ಲಿ ಅವಕಾಶ ನೀಡಿ.

ಹಳಬರು? ಅನುಭವಸ್ಥರು?

ಬೇಡ. ಅವರು ಪಕ್ಷದ ಸಂಘಟನೆ ಮಾಡಲಿ!

ಇದು ಹೇಗೆ ಸಾಧ್ಯ?

ಪುಣೆಯ ರೆಸಾರ್ಟ್‌ನಲ್ಲಿ ಕುಮಾರಸ್ವಾಮಿಯವರೇ ಹೀಗೆ ಹೇಳಿದ್ದಾರೆ!

ಗಾಂಧೀಜಿ- ಡಾ. ಅಂಬೇಡ್ಕರ್ ನಡುವೆ 'ಪೂನಾ ಒಪ್ಪಂದ' ಪ್ರಸಿದ್ಧ. ಅದು ಯರವಾಡ ಜೈಲಿನಲ್ಲಿ ಆಗಿತ್ತು. ಈಗ? ಜೆಡಿಎಸ್ ಶಾಸಕರು-ಕುಮಾರಸ್ವಾಮಿ ನಡುವೆ ಆದ ಒಪ್ಪಂದ- 'ರೆಸಾರ್ಟ್ ಒಪ್ಪಂದ!'

ವಿಶ್ವಾಸ ದ್ರೋಹ, ನಂಬಿಕೆ ದ್ರೋಹ ಅಂತ ಈಗಾಗಲೇ ಬಿಜೆಪಿಯಿಂದ ಊರೂರಲ್ಲಿ, ಕೇರಿ ಕೇರೀಲಿ ಉಗಿಸಿಕೊಂಡು ಆಗಿದೆ. ಈಗಲಾದರೂ ಅವಕ್ಕೆ ಪ್ರಾಶಸ್ತ್ಯ ನೀಡಬಾರದೆ?

ಹಾಗಾದರೆ ಹಳಬರನ್ನೆಲ್ಲ ಕೈಬಿಡಬೇಕೆ?

ಕುಮಾರಸ್ವಾಮಿ?

ಹೇಗೆ ಬಿಡುತ್ತೀರಿ. ಅವರೇ ಉಪಮುಖ್ಯಮಂತ್ರಿ!

ಎಂ.ಪಿ. ಪ್ರಕಾಶ್?

ಅವರೂ ಇರಲಿ. ಹೇಗಿದ್ದರೂ ಮಂತ್ರಿ ಮಂಡಲ ಸೇರುವುದಿಲ್ಲ ಅಂದಿದ್ದಾರಲ್ಲ!

ಎಚ್.ಡಿ. ರೇವಣ್ಣ?

ಬಿಡಬಹುದೆ? ಕ್ರಿಯಾಶೀಲ ಮಂತ್ರಿ ಅವರು!

ಹಾಗಾದರೆ ಬಿಡುವುದು ಯಾರನ್ನ?

ಡಿಸಿಎಂ ಆಕಾಂಕ್ಷಿ ದಾರಾಳಿಗನನ್ನ! ಅವನ ಹಿಂಬಾಲಕರನ್ನ!

■

ರಾಜಕಾರಣಿಗಳೆಂಬ ಕೇಡಿಗಳು

"ಏನು ಸರ್, ಕುಟುಂಬ ಸಮೇತ ಎಂಟು ದಿನದ ಪ್ರವಾಸ ಕೈಗೊಂಡಿದ್ದಿರಿ" ಅಂತ ಕೇಳಿದೆ.

"ಹೌದು, ಪ್ಲಾಸ್ಟಿಕ್ ಕಾರ್ಪೊರೇಷನ್ನಿನ ನನ್ನ ಸ್ನೇಹಿತರು ಕರಕೊಂಡು ಹೋಗಿದ್ದರು. ತುಂಬ ಚೆನ್ನಾಗಿತ್ತು."

"ಸಂದರ್ಭ ಏನು ಸರ್?"

"ಏನಿಲ್ಲ, ಅವರು ನನಗೆ ಚೆನ್ನಾಗಿ ಗೊತ್ತು, ನನ್ನ ಬೆಂಬಲಿಗರು, ಅಭಿಮಾನಿಗಳು; ಫ್ಯಾಮಿಲಿ ಫ್ರೆಂಡ್ಸ್ ಅನ್ನಬಹುದು."

-ಇದು ಇಲ್ಲಿ ಭಾರತದಲ್ಲಿ ಅಥವಾ ಅಲ್ಲಿ ಅಮೆರಿಕದಲ್ಲಿ ನಡೆದಿರಬಹುದಾದ ಸಂಭಾಷಣೆ. ಮೇಲುನೋಟಕ್ಕೆ ಸಹಜವಾದ ಹರಟೆ. ಆದರೆ ಮೇಲಿನ ಪ್ರವಾಸ ಅಥವಾ ಪಿಕ್‌ನಿಕ್ ಆದ ಹತ್ತೇ ದಿನದಲ್ಲಿ ಪ್ಲಾಸ್ಟಿಕ್ ಕಂಪನಿಗೆ ವಿಶೇಷ ಪರವಾನಗಿ, ಪರ್ಮಿಟ್‌ಗಳು ದೊರೆತಿವೆ; ಕುಟುಂಬದೊಂದಿಗೆ ಪಿಕ್‌ನಿಕ್‌ನಲ್ಲಿ ಭಾಗವಹಿಸಿದ ರಾಜಕಾರಣಿಗೆ ಲಕ್ಷಾಂತರ ಡಾಲರ್‌ಗಳ ಉಡುಗೊರೆ, ನಗದು ಹಣ ದೊರೆತಿದೆ.

ಪ್ಲಾಸ್ಟಿಕ್ ಕಂಪನಿಯ "ಗೆಳೆಯರ" ಬಗ್ಗೆ ತನಿಖೆ ನಡೆದು ಕೋಟ್ಯಂತರ ಡಾಲರ್‌ಗಳ ಅವ್ಯವಹಾರ ಪತ್ತೆಯಾಗಿ ಆ ಗೆಳೆಯರ ದಸ್ತಗಿರಿ ಆಗುತ್ತದೆ. ಇದಕ್ಕೆಲ್ಲ ಕಾರಣನಾದ ರಾಜಕಾರಣಿ ತನಗೂ ಅದಕ್ಕೂ ಸಂಬಂಧವಿಲ್ಲ ಎಂದು ಹೇಳತೊಡಗುತ್ತಾನೆ. ರಾಜಕಾರಣಿಯ ಅಪರಾಧಕ್ಕೆ ಎಲ್ಲೂ ದಾಖಲೆಗಳಿಲ್ಲ; ಈತನ ಬೆಂಬಲ ಪಡೆದವನು ಸಿಕ್ಕಿಹಾಕಿಕೊಂಡಿದ್ದಾನೆ.

ಮೊನ್ನೆ ಅಮೆರಿಕದ ಸೆನೆಟ್‌ನ ಸ್ಪೀಕರ್ ಜಿಮ್‌ರೈಟ್ ಮೇಲೆ ಭ್ರಷ್ಟತೆಯ ಆಪಾದನೆಗಳು ಬಂದು ರಾಜೀನಾಮೆ ನೀಡಿದ. ಅಮೆರಿಕದ ಅಧ್ಯಕ್ಷ, ಉಪಾಧ್ಯಕ್ಷ, ಮುಖ್ಯ ನ್ಯಾಯಾಧೀಶರ ತರುವಾಯದ ಅತ್ಯುನ್ನತ ಸ್ಥಾನದ ಈ ಜಿಮ್‌ರೈಟ್ ಲಂಚ ಪಡೆದಿದ್ದ; ಇರುವ ಕಾನೂನುಗಳಿಂದ ತಪ್ಪಿಸಿಕೊಂಡು ತನ್ನ ಪುಸ್ತಕಕ್ಕೆ ಸಂಭಾವನೆ ಪಡೆಯುವ ನೆಪದಲ್ಲಿ ಅಪಾರ ಹಣ ಪಡೆದು ಖದೀಮರಿಗೆ ನೆರವಾಗಿದ್ದ.




ಮರೆಯುವ ಮುನ್ನ

ಪಿ. ಲಂಕೇಶ್ -ಜೂನ್ 25, 1989

ಇದನ್ನು ಕಂಡ ಅಮೆರಿಕದ ಪತ್ರಕರ್ತರು ಅಮೆರಿಕದ ರಾಜಕಾರಣಿಗಳ ಭ್ರಷ್ಟತೆಯ ಬಗ್ಗೆ ಬರೆದರು. ಚುನಾವಣೆಗೆ, ಆ ತರುವಾಯದ ಮೋಜಿಗೆ ಪಡೆದ ಹಣಕ್ಕೆ ಮಿತಿಯೇ ಇಲ್ಲ. ಹೆಸರುಗಳನ್ನೆಲ್ಲ ಬಯಲಿಗೆಳೆದ ಪತ್ರಕರ್ತರು ಕಂಡುಕೊಂಡದ್ದು-ಅಮೆರಿಕದ ಬಹುಪಾಲು ರಾಜಕಾರಣಿಗಳು ಭ್ರಷ್ಟರಾಗಿದ್ದಾರೆ; ಅವರನ್ನು ಪ್ರಾಮಾಣಿಕವಾಗಿಡಲು ಕಟ್ಟುನಿಟ್ಟಾದ ಕಾನೂನು ರಚಿಸಬೇಕು.

ಇದು ಮೂರ್ಖತನ. ದೇಶಕ್ಕಾಗಿ ಕಾನೂನು ರಚಿಸುವ, ಆ ಕಾನೂನುಗಳ ಅನುಷ್ಠಾನ ನೋಡಿಕೊಳ್ಳುವ ರಾಜಕಾರಣಿಗಳನ್ನು ಪ್ರಾಮಾಣಿಕವಾಗಿಡಲು ಕಾನೂನು ರಚಿಸುವುದು ನಾಚಿಕೆಗೇಡಿನ ವಿಷಯ. ಯಾಕೆಂದರೆ ಕಳ್ಳನೊಬ್ಬ ತನ್ನ ಕಳ್ಳತನ ಕುರಿತು ಕಾನೂನು ಮಾಡಲಾಗುವುದಿಲ್ಲ; ರಾಜಕಾರಣಿ ಕಳ್ಳನಲ್ಲದಿದ್ದರೆ ಆತನಿಗಾಗಿ ವಿಶೇಷ ಕಾನೂನು ಅನಗತ್ಯ. ಒಂದು ವೇಳೆ ಕಾನೂನು ಮಾಡಿದರೂ ಅವುಗಳಲ್ಲಿ ಕಳ್ಳಕಿಂಡಿಗಳನ್ನು, ಸುರಂಗಮಾರ್ಗಗಳನ್ನು ಆತ ಇಟ್ಟುಕೊಂಡಿರುತ್ತಾನೆ. ಅಥವಾ ದಾಖಲೆಗಳೇ ಇಲ್ಲದಂತೆ ಲಂಚ ತಿಂದಿರುತ್ತಾನೆ. ಆದ್ದರಿಂದ ಹೇಳುತ್ತಿದ್ದೇನೆ; ರಾಜಕಾರಣಿಗೆ ಅಪಾರ ಅಧಿಕಾರವಿರುತ್ತದೆ. ಅದನ್ನು ಆತ ಪ್ರಾಮಾಣಿಕವಾಗಿ, ನಿಷ್ಠುರವಾಗಿ ಬಳಸಬೇಕು; ವಿಶ್ವಾಸಾರ್ಹ ವ್ಯಕ್ತಿಯಾಗಿ ಕಾಣುವುದು ಮಾತ್ರವಲ್ಲ, ವಿಶ್ವಾಸದಿಂದ, ನಿಯತ್ತಿನಿಂದ ಆಡಳಿತ ನಡೆಸಬೇಕು.

ಕಾನೂನಿನ ಪ್ರಕಾರ ಪ್ರಾಮಾಣಿಕವಾಗಿದ್ದೇನೆ ಎನ್ನುವ ಪ್ರತಿಯೊಬ್ಬ ರಾಜಕಾರಣಿಯೂ ದುಷ್ಟನಾಗಿರುತ್ತಾನೆ.



ಜಪಾನ್: ಎರಡು ಅಂಶ

ಜಪಾನ್ ಬಗ್ಗೆ ಒಂದು ವರ್ಣರಂಜಿತ ಪುಸ್ತಕ ಓದುತ್ತಾ ಹೋದೆ. ನಿಮ್ಮೊಂದಿಗೆ ಎರಡು ವಿಷಯಗಳನ್ನು ಮಾತ್ರ ಹಂಚಿಕೊಳ್ಳುತ್ತೇನೆ.

ಜಪಾನ್ ಇವತ್ತು ಅತ್ಯಂತ ಮುಂದುವರಿದ ರಾಷ್ಟ್ರ ಎಂಬುದನ್ನು ನಾವೆಲ್ಲ ಬಲ್ಲೆವು. ಇದೊಂದು ಕ್ಲೀಷೆ ಎನ್ನಿಸಿಕೊಳ್ಳುವ ಮಟ್ಟಿಗೆ ಹಳೆಯ ಮಾತಾಗಿದೆ. ನೈಸರ್ಗಿಕ ಸಂಪತ್ತಿಲ್ಲದ, ನದಿಗಳಿಲ್ಲದ, ವಿಸ್ತೀರ್ಣದಲ್ಲಿ ಕರ್ನಾಟಕದ ಎರಡರಷ್ಟಿರುವ ದೇಶ ಇದು. ಇರುವ ಮೂರು ಮುಖ್ಯ ದ್ವೀಪಗಳಲ್ಲಿ ಒಂದು ಬಂಜರು; ದೇಶದ ಶೇ. ಐದು ಭಾಗದಷ್ಟು ಜನ ಈ ದೊಡ್ಡ ಹೊಕ್ಕೈಡೋ ಎಂಬ ದ್ವೀಪದಲ್ಲಿ ಜೀವಿಸುತ್ತಾರೆ. ಈ ಪುಟ್ಟ ಜಪಾನ್ ದೇಶ ಇವತ್ತು ತನ್ನ ವಿಸ್ತೀರ್ಣದ ಮಿತಿ, ಪ್ರಕೃತಿ ಸಂಪತ್ತಿನ ಮಿತಿಯನ್ನು ಮೀರಿ ಅಮೆರಿಕಾ, ಜರ್ಮನಿಯೊಂದಿಗೆ ಕೈಗಾರಿಕೆ, ಉದ್ಯಮದಲ್ಲಿ ಯಶಸ್ವಿಯಾಗಿ ಸ್ಪರ್ಧಿಸುತ್ತಿದೆ. ಇದೆಲ್ಲ ದೇಶಾವರಿ ಮಾತಾಯಿತು.



ನಾನು ಹೇಳಬೇಕೆಂದಿದ್ದ ಎರಡು ವಿಷಯಗಳಲ್ಲಿ ಒಂದು, ಇವತ್ತು ಜಗತ್ತಿನಲ್ಲಿಯೇ ಅತ್ಯುತ್ತಮ ದೇಶವಾಗಿರುವ ಜಪಾನಿನ ಶಿಕ್ಷಣ ಕುರಿತದ್ದು. ಜಪಾನ್ ತನ್ನ ಮಕ್ಕಳಿಗೆ ನೀಡುವ ಶಿಕ್ಷಣ ಅತ್ಯಂತ ಕಟ್ಟುನಿಟ್ಟಾದ, ಉಪಯುಕ್ತವಾದ ಶಿಕ್ಷಣ. ವಾರಕ್ಕೆ ಐದು ದಿನ ಕಡ್ಡಾಯವಾಗಿ ಶಾಲೆಗೆ ಹೋಗಬೇಕು, ವರ್ಷದಲ್ಲಿ 240 ದಿನ ಶಾಲೆ ನಡೆಯಲೇಬೇಕು. ಶೇ. ನೂರು ಭಾಗ ಸುಶಿಕ್ಷಿತರಾದ ಮಕ್ಕಳು ಬರೀ ನೆನಪಿನ ಶಕ್ತಿ ಪರೀಕ್ಷಿಸದೆ ಉಪಯುಕ್ತ ವಿಷಯ ಕಲಿಯುತ್ತಾರೆ; ಕೆಲಸ ಮಾಡಿ ಕಲಿಯುತ್ತಾರೆ. ಪ್ರತಿಯೊಬ್ಬ ಮಗುವೂ ಒಂಭತ್ತು ವರ್ಷ ಶಾಲೆ, ಹೈಸ್ಕೂಲು ಕಲಿಯಲೇಬೇಕು.

ಈ ಶಿಕ್ಷಣದ ಬಗ್ಗೆ ರಾಜೀಗೀಜಿ ಜಪಾನ್‌ನಲ್ಲಿ ಇಲ್ಲ. ಇದರಿಂದಾಗಿ ಜಗತ್ತಿನ ಹತ್ತೊಂಭತ್ತು ಮುಂದುವರಿದ ರಾಷ್ಟ್ರಗಳ 14 ವರ್ಷದ ಮಕ್ಕಳು ಪರೀಕ್ಷೆಗೆ ಕುಳಿತಾಗ ಜಪಾನಿನ ಮಕ್ಕಳು ಎಲ್ಲರಿಗಿಂತ ಶ್ರೇಷ್ಠರೆಂದು ತೀರ್ಮಾನವಾಯಿತು.

ಶ್ರೇಷ್ಠ ರಾಷ್ಟ್ರದ ಗುಟ್ಟು ಇಲ್ಲಿದೆ.

ಇಲ್ಲಿ ಮಾತ್ರವಲ್ಲ, ಇನ್ನೊಂದು ಮುಖ್ಯ ಅಂಶದಲ್ಲಿದೆ. ಒಂದು ರಾಷ್ಟ್ರದ ಛಲ, ಸ್ವಾಭಿಮಾನ, ವಿವರಗಳಿಗೆ ಗಮನಕೊಟ್ಟು ದುಡಿಯುವ ಚಾಕಚಕ್ಯತೆ, ದುಡಿಯುವುದರಲ್ಲಿ ಸಂತೋಷ ಪಡೆಯುವ ಗುಣ-ಇವೆಲ್ಲ ಮುಖ್ಯ. ಇವೆಲ್ಲದರ ಕೇಂದ್ರದಲ್ಲಿ ಒಂದು ಮುಖ್ಯ ವಿಷಯವಿದೆ. ಜಪಾನೀಯರು ಏನನ್ನು ಮಾಡಿದರೂ ಅತ್ಯುತ್ತಮವಾದದ್ದು ಮಾಡಲು ಯತ್ನಿಸುತ್ತಾರೆ-ಜರ್ಮನ್ ಕಾರನ್ನು ಕದ್ದು ಕಾಪಿ ಹೊಡೆಯಲು ಯತ್ನಿಸುವಾಗ ಕೂಡ. ಜಪಾನಿಗೆ ಈ ಗುಣಮಟ್ಟದ ಗುರು ಒಬ್ಬನಿದ್ದಾನೆ. ಆತ ಅಮೆರಿಕನ್. ಅವನ ಹೆಸರು ಎಡ್ವರ್ಡ್ಸ್ ಡೆಮಿಂಗ್. ಈತ ನಲವತ್ತು ವರ್ಷದ ಹಿಂದೆ ಜಪಾನಿನಲ್ಲಿ ಕೆಲವು ಉಪನ್ಯಾಸ ನೀಡಿದ. ಜಪಾನೀಯರ ಚುರುಕು, ಗಾಂಭೀರ್ಯ, ವಿಚಕ್ಷಣೆಯನ್ನು ಅರಿತಿದ್ದ ಈತ ಅವರಿಗೆ ಒಂದು ಗುಟ್ಟು ಹೇಳಿದ: ನೀವು ಇನ್ನು ಮೇಲೆ ಒಂದು ವಿಷಯ ನೆನಪಿಡಬೇಕು. 'ಮೇಡ್ ಇನ್ ಜಪಾನ್' ಅಂದರೆ ಕಚಡಾ ಎಂಬ ಅರ್ಥ ಬರಕೂಡದು, ಶ್ರೇಷ್ಠ ಅನ್ನಿಸಬೇಕು. ನಿಮ್ಮ ವಸ್ತುವಿನ ಗುಣಮಟ್ಟ ಕಾಪಾಡಿ. ಏನನ್ನು ಮಾಡಿದರೂ ಚೆನ್ನಾಗಿ ಮಾಡಿ.

ಇದರಿಂದ ಆದದ್ದು ಏನು ಗೊತ್ತೆ? ಮೂರು ದಶಕದಲ್ಲಿ ಜಪಾನ್ ವಸ್ತುಗಳು ಎಲ್ಲೆಲ್ಲೂ ಜನಪ್ರಿಯವಾದವು; ಜಪಾನ್ ಸಂಪತ್ತಿನಿಂದ ತುಂಬ ತುಳುಕತೊಡಗಿತು. ಹಿತವಚನಕ್ಕೆ ಕೃತಜ್ಞವಾದ ಜಪಾನ್ ಎಡ್ವರ್ಡ್ಸ್ ಡೆಮಿಂಗ್ ಹೆಸರಲ್ಲಿ ಒಂದು ಪಾರಿತೋಷಕ ಇಟ್ಟಿತು. ಇದನ್ನು ವರ್ಷಕ್ಕೊಮ್ಮೆ ಶ್ರೇಷ್ಠ ಗುಣಮಟ್ಟದ ವಸ್ತುಗಳ ತಯಾರಕರಿಗೆ ಈಗಲೂ ಕೊಡುತ್ತಾರೆ.

ದೈತ್ಯ ಟ್ಯಾಂಕ್ ಎದುರು

ಇದು ನಿಮ್ಮಲ್ಲಿ ಸೂಕ್ಷ್ಮಜ್ಞರಾದವರನ್ನು ಕಾಡುತ್ತಿರಬಹುದಾದಂತೆಯೇ ನನ್ನನ್ನು ಸ್ವಲ್ಪಮಟ್ಟಿಗೆ ಕಾಡುತ್ತಿದೆ. ಈ ಜಗತ್ತಿನ ಕ್ರೌರ್ಯ ಮತ್ತು ದಬ್ಬಾಳಿಕೆಗೆ ಪರಿಹಾರ ವಿದೆಯೇ? ದೇಶ ಕಾಪಾಡಲು ಇರುವ ಸೈನ್ಯ ದೇಶದ ಜನರನ್ನೇ ಕೊಂದುಹಾಕುತ್ತದೆ. ಚೀನಾ ಸೈನ್ಯ ನೋಡಿ. ಮಾವೋ ಸೃಷ್ಟಿಸಲೆಳಸಿದ್ದು ಎಲ್ಲರಿಗೂ ಸುಖ, ನೆಮ್ಮದಿ ನೀಡಬಲ್ಲ ರಾಷ್ಟ್ರವನ್ನು; ಆತನೇ ಲಕ್ಷಾಂತರ ಜನರನ್ನು ಕೊಂದು ಆಡಳಿತ ನಡೆಸಬೇಕಾಯಿತು. ಲೆನಿನ್ ನೀಡಲೆಳಸಿದ್ದು ಕೂಡ ಹಿಂಸೆ, ಅನ್ಯಾಯವಿಲ್ಲದ ಆಡಳಿತವನ್ನು. ಆತ ಮಿಲಿಯನ್‌ಗಟ್ಟಲೆ ಕುಲಕ್‌ಗಳನ್ನು, ಪಾಳೆಗಾರರನ್ನು ಕೊಲ್ಲಲೇಬೇಕಾಯಿತು. ಆತನಿಗಿಂತ ಹಿಂದೆ ಇದೆಲ್ಲದರ ಗುರು ಕಾರ್ಲ್ ಮಾರ್ಕ್ಸ್ ನೀಡಲೆಳಸಿದ್ದು ಯಾವ ದಬ್ಬಾಳಿಕೆಯೂ ಇಲ್ಲದ ಮಾನವೀಯ ಸಮಾಜವಾದಿ ವ್ಯವಸ್ಥೆಯನ್ನು. ಈ ಗುರುವಿಗೆ ದೊರೆತ ಶಿಷ್ಯರು, ಈತನ ಥಿಯರಿಗೆ ದೊರೆತ ವ್ಯವಸ್ಥೆ ನೋಡಿದ್ದೀರಿ.

ಅದಕ್ಕಿಂತ ಮೂಲಭೂತವಾದ ಪ್ರಶ್ನೆಯನ್ನು ಆಗಾಗ ಕೇಳಿಕೊಳ್ಳುತ್ತೇನೆ-ಘೋರ ಹಿಂಸೆ, ಅನ್ಯಾಯಕ್ಕೆ ನಮ್ಮಲ್ಲಿ ಉತ್ತರವಿದೆಯೇ? ಪರಿಹಾರವಿದೆಯೇ? ನಲವತ್ತು ದಿನ ಟಿನಾನ್‌ಮೆನ್ ವೃತ್ತದಲ್ಲಿ ಉಪವಾಸ ಮಾಡಿದ ಅಮಾಯಕ ಯುವಕ, ಯುವತಿಯರನ್ನು ಕೊಲ್ಲಲಾಯಿತು. ಕೊಲ್ಲಲ್ಪಡದೆ ಉಳಿದವರು ಏನು ಮಾಡಬೇಕು-ನೀಚ ಸೈನಿಕರೆದುರು ನಿಂತು ಇಲ್ಲವಾಗಬೇಕೆ? ಅಥವಾ ತಲೆತಪ್ಪಿಸಿಕೊಂಡು ಹೇಗೋ ಬದುಕಿ ಸಾಯಬೇಕೆ?



ಟಿನಾನ್‌ಮೆನ್ ವೃತ್ತದಲ್ಲಿ ಸಾಲಾಗಿ ಬರುತ್ತಿರುವ ರಾಕ್ಷಸೀ ಟ್ಯಾಂಕುಗಳೆದುರು ಒಬ್ಬನೇ ಒಬ್ಬ ವಿದ್ಯಾರ್ಥಿ ನಿಂತು, ತಣ್ಣಗೆ ನಿಂತು 'ಕೊಲ್ಲಬೇಡಿ!' ಎನ್ನುತ್ತಿದ್ದಾನೆ.

ಆತನನ್ನು ಗೆಳೆಯರು ಎಳೆದುಕೊಂಡರು; ಟ್ಯಾಂಕ್ ಅವನ ಮೇಲೆ ಹರಿಯಲಿಲ್ಲ, ಅವನ ಫೋಟೋ ಇನ್ನು ಮೇಲೆ ಎಲ್ಲೆಲ್ಲೂ ಖ್ಯಾತವಾಗಬಹುದು.

ಆದರೆ ಟ್ಯಾಂಕ್ ಎದುರು ನಿಂತ ಆ ಕ್ಷಣದಲ್ಲಿ ಮನುಷ್ಯನ ಜೀವನದ ಅರ್ಥವಿದೆ.

'ಇಲಿಯಾಗಿ ನೂರುವರ್ಷ ಬದುಕುವುದಕ್ಕಿಂತ ಹುಲಿಯಾಗಿ ಒಂದುದಿನ ಬಾಳು' ಎಂದು ಹೇಳುತ್ತಾರೆ. ವಿಪರ್ಯಾಸವೆಂದರೆ, ಒಂದು ದಿನದಲ್ಲಿ ಹುಲಿ ರೂಪುಗೊಳ್ಳುವುದಿಲ್ಲ; ಅಲ್ಲದೆ, ಇಲಿಗಳೇ ಇಲ್ಲಿ ನೆಮ್ಮದಿಯಾಗಿದ್ದು ಬದುಕುತ್ತವೆ....

ಬಿಡಿ ಚಿತ್ರಗಳು

ಪಾರ್ವತೀಶ

ಲಕ್ಷ್ಮೀಗೆ ನಾಲ್ಕು, ಕುಮಾರಸ್ವಾಮಿಗೆ ಎಂಟು ಕೈ!

ಪುಸ್ತಕಗಳಲ್ಲಿ ಲಕ್ಷ್ಮೀಗೆ ನಾಲ್ಕು ಕೈ ಮತ್ತು ನಾಲ್ಕು ಕಾಲುಗಳಿದ್ದವು. ನಮ್ಮ ಸರ್ಜನ್‌ಗಳು ಬೇಡದಿದ್ದ ಕೈಕಾಲುಗಳನ್ನು ತೆಗೆದುಹಾಕಿದ್ದಾರೆ. ಲಕ್ಷ್ಮೀ ಈಗ ನಾರ್ಮಲ್ ಬೇಬಿ ರೀತಿ ಆಗಿದ್ದಾಳೆ.

ಈ ಸುದ್ದಿ ಕೇಳಿದ ಜೆಡಿಎಸ್ ಎಂಎಲ್‌ಎಗಳು "ಲಕ್ಷ್ಮೀಗಾದ್ರೆ ನಾಲ್ಕು ಕೈಯಿತ್ತು, ಆದ್ರೆ ನಂ ಕುಮಾರಸ್ವಾಮಿಗೆ ಎಂಟು ಕೈ ಇದೆಯಲ್ಲ, ಅದನ್ನು



ತೆಗೆದಾಕೋ ಸರ್ಜನ್‌ನ ಎಲ್ಲಿಂದ ಕರೆಸೋದು" ಅಂತ ಗೇಲಿ ಮಾತಾಡುತ್ತಿದ್ದಾರೆ.

ಕುಮಾರಸ್ವಾಮಿಗೆ ಈ ಎಂಟು ಕೈ ಹೇಗೆ ಅಂಟಿಕೊಂಡಿದೆ ಅಂತಲೂ ಇವರು ಹೇಳಿಕೊಂಡು ನಗುತ್ತಿದ್ದಾರೆ.

ಮಾಜಿ ಶಾಸಕ ಬಾಲಕೃಷ್ಣ, ಚೆಲುವರಾಯಸ್ವಾಮಿ ಹಾಗೂ ಜಮೀರ್ ಮೂವರೂ ಕುಮಾರಸ್ವಾಮಿ ಎಲ್ಲೇ ಇದ್ದರೂ, ನಿಂತರೂ ಹೋದರೂ ಅವರಿಗೆ ಅಂಟಿಕೊಂಡೇ ತಿರುಗುತ್ತಿರುತ್ತಾರೆ. ಟಿವಿ ಕ್ಯಾಮೆರಾಗಳೆದುರು ಕುಮಾರ್ ಮಾತಾಡುತ್ತಿದ್ದರೆ ಈ ಬೇಲಾಗಳು ಸಂದಿಯಲ್ಲಿ ಮುಖ ತೂರಿಸುವುದು, ಕೈ ಅಲ್ಲಾಡಿಸುವುದು, ಇಂತಹದ್ದೇ ಹಲವು ಚೇಷ್ಟೆಗಳನ್ನು ಮಾಡುತ್ತಿರುತ್ತಾರೆ.

ಈ ಗದ್ದಲದಲ್ಲಿ ರೇವಣ್ಣನಿಗಿಂತ ತಾವೇ ದೊಡ್ಡ ಲೀಡರ್‌ಗಳಂತೆ ಪೋಸ್ ಕೊಡುತ್ತಿರುತ್ತಾರೆ.

ಕುಮಾರಣ್ಣನ ಎಂಟು ಕೈ ಅಂದರೆ ಇದೇನೆ. ಅದಕ್ಕೇ ಇರಬೇಕು ಮೊನ್ನೆ ದಳ ಶಾಸಕರ ಸಭೆ ನಡೆದಾಗ ರೇವಣ್ಣ ಇವರಿಗೆಲ್ಲಾ ಬಾಯಿಗೆ ಬಂದಂಗೆ ಬಯ್ದು ಬಾಲ ಕಟ್ ಮಾಡಿದ್ದಾರೆ. ಈ ಸಾರಿ ಮಿನಿಸ್ಟರ್ ಆಗಬೇಕೆಂಬ ಆಸೆ ಇಟ್ಟುಕೊಂಡಿದ್ದ ಇವರ ಕೈ ಮುರಿದು ಕುಮಾರನಿಗೆ ಎರಡೇ ಕೈ ಉಳಿಯುವಂತೆ ಮಾಡಲು ರೇವಣ್ಣ ಟ್ರೈ ಮಾಡುತ್ತಿದ್ದಾರೆ.

ಸಾಹಿತ್ಯದಲ್ಲೊಂದು ವಿನಾಯಕ ಪ್ರಜ್ಞೆ

ಕನ್ನಡ ಸಾಹಿತ್ಯದಲ್ಲಿ ಬಂಡಾಯ, ದಲಿತ ಪ್ರಜ್ಞೆ, ಸ್ತ್ರೀವಾದ ಇವೆಲ್ಲಾ ನಮಗೆ ಗೊತ್ತು, ಆದರೆ ವಿನಾಯಕ ಪ್ರಜ್ಞೆ ಬಗ್ಗೆ ಕೇಳಿದ್ದೀರಾ, ಹೋಗಲಿ ಸುಬ್ರಮಣ್ಯ ಪ್ರಜ್ಞೆ?


ಪುಸ್ತಕ ಬಿಡುಗಡೆ ಪ್ರೋಗ್ರಾಂ ಒಂದರಲ್ಲಿ ನಮ್ಮ ಪ್ರಮುಖ ಸಾಹಿತಿಯೊಬ್ಬರು ಈ ಹೊಸ ಪ್ರಜ್ಞೆಗಳ ಬಗ್ಗೆ ಮಾತಾಡಿದ್ದಾರೆ. ಬಹುಶಃ ಅವರ ಪ್ರಕಾರ ವಿನಾಯಕ ಪ್ರಜ್ಞೆ ಅಂದರೆ ಕುಂತಲ್ಲೇ ಗಿರಿಕಿ ಹೊಡೆಯುವುದೆಂತಲೂ ಸುಬ್ರಮಣ್ಯ ಅಂದರೆ ಚಲನಶೀಲವಾದದ್ದೆಂದೂ ಇರಬಹುದು. ಒಟ್ಟರ್ಥದಲ್ಲಿ ಸ್ಥಾವರ-ಜಂಗಮ ಎಂಬ ವಿಶ್ಲೇಷಣೆ ಅದು. ಆದರೆ ತಾವು ಏನನ್ನಾದರೂ ಹೇಳಬಯಸಿದಾಗ ಹೊಸ ರೂಪಕ ಪರಿಭಾಷೆ ಬಳಸಲೇಬೇಕೆಂದು ಈ ವಿಚಿತ್ರ ರೀತಿಯ ಪ್ರಜ್ಞೆಗಳನ್ನು ಪ್ರತಿಪಾದಿಸಿದರೆ ಸಾಹಿತ್ಯ ವಿಮರ್ಶೆ ಬೆಳೆಸಿದಂತಾಗುತ್ತಾ ಎಂಬುದು ಚಾರ್ವಾಕ ಪ್ರಜ್ಞೆಯುಳ್ಳವರ ಪ್ರಶ್ನೆ!

ಮಹಿಮಾ ಮಹಿಮೆ

ಮಹಿಮಾ ಪಟೇಲರ ಸುವರ್ಣ ಯುಗ ಪಾರ್ಟಿಯ ಗುರಿ ಏನೇ ಇರಲಿ ಅದರ ಆಚರಣೆ ಮಾತ್ರ ಕಷ್ಟ ಸಾಧ್ಯ ಅಂತಾ ಕೇಳಿ ಬಂದಿದೆ.

ಮೊನ್ನೆ ತಲಕಾವೇರಿಯಲ್ಲಿ ಆಗಿದ್ದು ನೋಡಿದರೆ ಮಹಿಮಾ ಪಾರ್ಟಿಗೆ ಜನ ಸೇರುವುದು ಸ್ವಲ್ಪ ಡೌಟೇ ಅನ್ನಿಸುತ್ತೆ. ಬೆಳಿಗ್ಗೆ ತಲಕಾವೇರಿ ಪೂಜೆ ಮಾಡಿ ಪಾರ್ಟಿ ಲಾಂಚ್ ಮಾಡಿದ ಮಹಿಮಾ ಆಮೇಲೆ ಒಂದು ಸಭೆ ನಡೆಸಿ 'ಎಲ್ಲರೂ ಸ್ವಲ್ಪ ಹೊತ್ತು ಮೆಡಿಟೇಷನ್ ಮಾಡಿ' ಅಂದು ತಾವೂ ಕಣ್ಣುಮುಚ್ಚಿ ಕುಳಿತರಂತೆ. ಆದರೆ ಅರ್ಧ ಗಂಟೆಯ ಈ ಧ್ಯಾನ ಮುಗಿಯೊಷ್ಟರೊಳಗೆ ಇದ್ದ ಎರಡು ಸಾವಿರ ಜನರಲ್ಲಿ ಮುಕ್ಕಾಲು ಪಾಸಿ ಜನ ಮಹಿಮಾ ಕಣ್ತೆರೆಯುವಷ್ಟರಲ್ಲಿ ಕಣ್ಮರೆಯಾಗಿದ್ದಾರೆ.

ನಾವೆಲ್ಲಾ ಬಲ್ಲಂತೆ ಸಾರಾಯಿ, ದುಡ್ಡು ಹಂಚಲು ನಿರಾಕರಿಸಿ ಎಲೆಕ್ಷನ್ ಗೆದ್ದವರು ಮಹಿಮಾ. ಅದು ಮೆಚ್ಚಬೇಕಾದ ವಿಚಾರ ಬಿಡಿ. ಆದರೆ ಪವರ್ ಪಾಲಿಟಿಕ್ಸ್ ಮಾಡಲು ತೀರ್ಮಾನಿಸಿದವರು ಮೆಡಿಟೇಷನ್, ತಪಸ್ಸು ಅಂತೆಲ್ಲಾ ಹೊರಟರೆ ಜನ ಸೇರುವುದು ಕಷ್ಟ. ರಸ್ತೆ, ನೀರು, ಕೆಲಸ, ಆಸ್ಪತ್ರೆ, ಶಾಲೆ ಬೇಕು ಅಂತಾ ಸಾಯ್ತಿರೋ ಜನ ತಪೋನಿರತರ ಬಳಿ ಈ ಕಾಲದಲ್ಲಂತೂ ಹೋಗುವುದಿಲ್ಲ.



ರಾಜಕಾರಣಕ್ಕೆ ನೈತಿಕತೆ ಬೇಕು ನಿಜ. ಅದು ಹೇಗೂ ಮಹಿಮಾಗಿದೆ. ಆದರೆ ಆಧ್ಯಾತ್ಮದಿಂದ ಜನ ಬೆಂಬಲ ಸಿಗಲ್ಲ. ಮಹಿಮಾ ಈಗ ಎಚ್ಚೆತ್ತುಕೊಳ್ಳದೆ ಹೋದರೆ ಸುವರ್ಣ ಯುಗ ಪಾರ್ಟಿ ಕಟ್ಟೋ ಬದಲು ಸುವರ್ಣಾಶ್ರಮ ಬೆಳೆಯುತ್ತದಷ್ಟೆ.

ದೀಪಾವಳಿಯ ದಿನದಂದೇ ರಾಜ್ಯದ ಭವಿಷ್ಯ ಕಗ್ಗತ್ತಲು

ಹೊಗಳಿಕೆ ತೆಗಳಿಕೆ

"ಫ್ಯಾಸಿಸ್ಟ್ ಸರ್ಕಾರಕ್ಕೆ ಧಿಕ್ಕಾರ' ಎಂಬ ನಿಮ್ಮ ಪ್ರತಿಭಟನೆಯ ಮೌನದ ಸಂಪಾದಕೀಯ ಅತ್ಯಂತ ಸೂಕ್ತವಾಗಿದ್ದು ಹೇಸಿಗೆ ಹುಟ್ಟಿಸುತ್ತಿರುವ ಸ್ವಾರ್ಥಪರ ರಾಜಕೀಯಕ್ಕೆ ಕಪಾಲ ಮೋಕ್ಷದ ಉತ್ತರವಾಗಿದೆ. ಜನಪರ ನಿಲುವಿನ ಪ್ರಜೆಗಳ ಎಲ್ಲರ ದನಿಯೂ ಇಲ್ಲಿ ಸೇರಿಕೊಂಡಿದೆ. ಹೊಸ ಸರ್ಕಾರದ ಈ 'ಕರಾಳ ಅಧ್ಯಾಯ' ತನ್ನ ಯಾವ ವಿಷಬೀಜವನ್ನೂ ಬಿತ್ತದಂತೆ ರೋಗ ನಿರೋಧಕ ಪರ್ಯಾಯ ಶಕ್ತಿಯಾಗಿ ಕರ್ನಾಟಕ ಜನತೆ ಎಚ್ಚೆತ್ತುಕೊಳ್ಳಬೇಕಿದೆ. ಸಂವಿಧಾನಾತ್ಮಕ ಆಶಯಗಳಿಗೆ ಧಕ್ಕೆ ತರುವಂಥ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಡುವ 'ಲಂಕೇಶ್'. ಜೊತೆ ನಾನೂ ಇದ್ದೇನೆ ಎಂದು ಹೇಳಲು ಈ ಪತ್ರ.

-ಜ್ಯೋತಿ ಗುರುಪ್ರಸಾದ್, ಕಾರ್ಕಳ

'ಯಡಿಯೂರಪ್ಪ ಎಂಥ ಲಿಂಗಾಯತ?' (ಲಂಕೇಶ್, ನವೆಂಬರ್ 21) ಎಂಬುದನ್ನು ಬಸವಾದಿ ತತ್ವಗಳನ್ನು ಪಾಲಿಸುತ್ತಿರುವ ಎಲ್ಲರೂ ವಿವೇಚಿಸಬೇಕಾಗಿದೆ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುಂಚೆ ಮತ್ತು ನಂತರ ಯಡಿಯೂರಪ್ಪ ಹೋಮಹವನ, ಯಜ್ಞ ಯಾಗಾದಿಯಂತಹ ಕಂದಾಚಾರಗಳನ್ನು ನಡೆಸಿದ್ದು ಜನಸಾಮಾನ್ಯರಲ್ಲಿ ಭಯಭೀತಿ ಹುಟ್ಟಿಸಿದೆ. ಇದು ಮಹಾ ಮಾನವತಾವಾದಿ ಬಸವಣ್ಣನವರಿಗೆ ಯಡಿಯೂರಪ್ಪ ಬಗೆದ ಅಪಚಾರ. ಬಸವಣ್ಣನವರು "ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ ಕಿಚ್ಚೆದ್ದು ಸುಡುವಾಗ..." ಎಂಬ ವಚನದಲ್ಲಿ ಯಜ್ಞ ಯಾಗಾದಿ ಯಂತಹ ಮುಂದುವರೆಯದ ಮೂರ್ಖ ಕಾರ್ಯಗಳನ್ನು ಅತ್ಯಂತ ಉಗ್ರವಾಗಿ ಖಂಡಿಸಿದ್ದಾರೆ.

ಇದರ ಜೊತೆಗೆ ಜೆಡಿಎಸ್ ರಾಜ್ಯಾಧ್ಯಕ್ಷ ಮೆರಾಜುದ್ದೀನ್ ಪಟೇಲ ಎಂತಹ (ಅ)ಮುಸ್ಲಿಮ್ ಎಂಬುದನ್ನು ಅರಿಯಬೇಕಾಗಿದೆ. ಕುರಾನ್ "ಭೂಮಿಯಲ್ಲಿ ಅಶಾಂತಿ ಹರಡಬೇಡಿ" (7:56) ಎಂದು ಸಾರಿದೆ. ಗಾಂಧಿಯನ್ನು ಕೊಂದು, ಅದರಲ್ಲಿ ಪಾಲ್ಗೊಂಡ ವಿ.ಡಿ. ಸಾವರಕರರಂಥವರನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಬಿಂಬಿಸಿ, ಅವನ ತೈಲವರ್ಣದ ಚಿತ್ರವನ್ನು ಸಂಸತ್ತಿನಲ್ಲಿ ಅನಾವರಣಗೊಳಿಸಿದ ಬಜೆಪಿಗಳಿಗೆ ಬೆಂಬಲ ನೀಡುತ್ತಿರುವ ಜೆಡಿಎಸ್ ರಾಜ್ಯಾಧ್ಯಕ್ಷ ಮಿ. ಪಟೇಲ, ಅವಕಾಶ ಸಿಕ್ಕರೆ ಉಪಮುಖ್ಯಮಂತ್ರಿ ಆಗುವೆ ಎಂದು ಹಲ್ಲುಕಿಸಿಯುತ್ತಿದ್ದಾರೆ. ಇದು ಅವರು ಮುಸ್ಲಿಮರಿಗೆ ಮಾಡುತ್ತಿರುವುದು ಮಹಾದ್ರೋಹ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ 'ಲಂಕೇಶ'ನ ನಿಲುವಿಗೆ ನಾವೆಲ್ಲರೂ ಬದ್ಧರಾಗಬೇಕು. ಏಕೆಂದರೆ ಬರುವ ದಿನಗಳು ನಾವು ತಿಳಿದಷ್ಟು ಸುಲಭವಾಗಿಲ್ಲ. ಇಲ್ಲಿ ನಮ್ಮ ವ್ಯಕ್ತಿಗತ ವಿಚಾರಗಳು ಬೇರೆಬೇರೆಯಾದರೂ ನಮ್ಮ ನಿಲುವು ಕೋಮುವಾದ, ಮನುವಾದದ ವಿರುದ್ಧ, ಬಸವಣ್ಣ, ಮಹಮ್ಮದ ಪೈಗಂಬರ, ಗಾಂಧಿ, ಅಂಬೇಡ್ಕರ್ ಅಂತಹವರಲ್ಲಿ ನಾವು ಯಾರನ್ನು ಅನುಸರಿಸಿದರೂ ಅವರ ತತ್ವ "ಕೋಮು ಸೌಹಾರ್ದತೆಯುಳ್ಳ ಸಹೋದರತೆ" ಎಂಬುದನ್ನು ಮರೆಯಬಾರದು. ಅದಕ್ಕಾಗಿ ನಾವೆಲ್ಲರೂ 'ಲಂಕೇಶ್' ಘರ್ಜಿಸುವ 'ಸಿಂಹ ಘರ್ಜನೆಗೆ' ಸಿದ್ಧರಾಗಬೇಕಾಗಿದೆ. ಇದು ನಮ್ಮ ಕರ್ತವ್ಯ ಕೂಡ.

-ಅಬ್ದುಲ್ ರಝಾಕ್. ದಿ. ಟಪಾಲ, ಕೆರೂರ

ಗೌರಕ್ಕನ ಸಂಪಾದಕೀಯ 'ಫ್ಯಾಸಿಸ್ಟ್ ಸರ್ಕಾರಕ್ಕೆ ಧಿಕ್ಕಾರ' ತುಂಬಾ ಚೆನ್ನಾಗಿತ್ತು.

-ಶೂದ್ರ ಸಂತೋಷ್. ಅಜ್ಜಂಪುರ

ಈ ಸಲ 'ಫ್ಯಾಸಿಸ್ಟ್ ಸರ್ಕಾರಕ್ಕೆ ಧಿಕ್ಕಾರ' ಎಂಬ ಸಂಪಾದಕೀಯದಲ್ಲಿ ತುಂಬಾ ವಿಷಯ ಹೇಳಿಕೊಂಡಿದ್ದೀರಿ. ಹಾಗೆ ನಿಮ್ಮ ಜವಾಬ್ದಾರಿಯು ಕೂಡ ಇವತ್ತು ಹೆಚ್ಚಿದೆ. ಈ ಕುರಿತ ನಿಮ್ಮ ಹೋರಾಟಕ್ಕೆ ಸದಾ ನಮ್ಮ ಬೆಂಬಲ ಇದ್ದೇ ಇದೆ.

-ರವಿ ಪುತ್ತೂರು. ಪುತ್ತೂರು

ಎಷ್ಟೋ ಮನೆಗಳ, ಮನಗಳ ಬೆಳಕನ್ನು ಶಾಶ್ವತವಾಗಿ ನಂದಿಸಿದ ಬಜೆಪಿ ಬೆಳಕಿನ ಹಬ್ಬದಂದು ಅಧಿಕಾರಕ್ಕೇರಿದ್ದು ಈ ರಾಜ್ಯದ ದುರಂತವಲ್ಲದೆ ಇನ್ನೇನು?

-ಶಶಿಧರ. ಈ ಮೇಲ್ ಮೂಲಕ

ದುರದೃಷ್ಟಕರವಾಗಿ, ದುರಂತಮಯವಾಗಿ ರಾಷ್ಟ್ರಪತಿ ಆಡಳಿತವನ್ನು ಹಿಂತೆಗೆದುಕೊಂಡು ನಮ್ಮ ರಾಜ್ಯದಲ್ಲಿ ಬಜೆಪಿಗೆ ಅಧಿಕಾರ ಸಿಗುವಂತೆ ಮಾಡಲಾಗಿದೆ. ಈ ರಾಜ್ಯದ ಭವಿಷ್ಯ ದೀಪಾವಳಿಯ ದಿನದಂದೇ ಕಗ್ಗತ್ತಲಲ್ಲಿ ಸಿಲುಕಿದೆ.

-ಪಟ್ಟಾಭಿರಾಮ. ಈ ಮೇಲ್ ಮೂಲಕ


ಮಂತ್ರಿಗಿರಿಗೆ 25 ಕೋಟಿ ಡೀಲ್

"ಆ ರೇವಣ್ಣ ಯಾವೋನ್ರಿ, ನಾನು ದೇವೇಗೌಡ್ರಿಗೇ 25 ಕೋಟಿ ಕೊಟ್ಟು ಇಂಡಸ್ಟ್ರಿ ಮಿನಿಸ್ಟ್ರಾಗ್ತೀನಿ ನೋಡ್ತೀರಿ"

1999ರಲ್ಲಿ ಜುಜುಬಿ ಮೋಟಾರ್ ಬೈಕ್‌ನಲ್ಲಿ ಓಡಾಡಿಕೊಂಡಿದ್ದ ರಾಜಕಾರಣಿಯೊಬ್ಬ ಈ ಮಾತು ಹೇಳುತ್ತಾನೆಂದರೆ ಅದು ಹುಡುಗಾಟ ಅಲ್ಲ.

ಆ ಮಹಾಶಯ ಚೆಲುವರಾಯಸ್ವಾಮಿ.

ಇವತ್ತು ಜೆಡಿಎಸ್‌ನಲ್ಲಿ ಕುಮಾರಸ್ವಾಮಿ ಬಿಟ್ಟರೆ ಮೀಡಿಯಾಗಳಲ್ಲಿ ಅತೀ ಹೆಚ್ಚು ಮಿಂಚುತ್ತಿರುವ ಎರಡನೇ ಪಂಕ್ತಿ ನಾಯಕನೀತ. ಎಂ.ಪಿ. ಪ್ರಕಾಶ್, ಡಿ. ಮಂಜುನಾಥ, ಕೊನೆಗೆ ಗೌಡರ ಸುಪುತ್ರ ರೇವಣ್ಣನೂ ಹೊಟ್ಟೆಕಿಚ್ಚು ಪಡುವಷ್ಟು ಮೆರೆಯುತ್ತಿರುವ ಚೆಲುವರಾಯಸ್ವಾಮಿ ಹೊಸ ಮೈತ್ರಿ ಸರ್ಕಾರದಲ್ಲಿ ಮತ್ತೆ ಮಂತ್ರಿಯಾಗಲು ಯಾವ ಲೆವೆಲ್ಲಿಗೆ ಬೇಕಾದರೂ ಹೋಗಲು ರೆಡಿಯಾಗಿಬಿಟ್ಟಿದ್ದಾನೆ. ಸದ್ಯಕ್ಕೆ ರೇವಣ್ಣನ ಕೋಪಕ್ಕೆ ತುತ್ತಾಗಿ ತಣ್ಣಗಾದಂತೆ ಕಾಣಿಸಿದರೂ ಚೆಲುವರಾಯಸ್ವಾಮಿ ಮಾತ್ರ ಧೈರ್ಯ ಕಳೆದುಕೊಂಡಿಲ್ಲ. ಆಶ್ಚರ್ಯ ಏನೆಂದರೆ ಯಡ್ಡಿಗಿನ್ನೂ ವಿಶ್ವಾಸಮತವೇ ಸಾಬೀತಾಗಿಲ್ಲ, ಆಗಲೇ ನಾಗಮಂಗಲ ಸುತ್ತಮುತ್ತ 'ಮುಂದಿನ ಬೃಹತ್ ಕೈಗಾರಿಕಾ ಸಚಿವ ಚೆಲುವರಾಯಸ್ವಾಮಿಯುವರಿಗೆ ಅಭಿನಂದನೆಗಳು' ಎಂಬ ಬ್ಯಾನರ್ ಕಟೌಟ್‌ಗಳು ಕಾಣಿಸಿಕೊಂಡಿವೆ.



'ಗೌಡನಿಗೆ ದುಡ್ಡು ಬಿಸಾಕಿ ಮಿನಿಸ್ಟ್ರಾಯ್ತೀನಿ' ಎಂದು ಚೆಲುವ ಹೇಳಿಕೊಂಡು ತಿರುಗುತ್ತಿರುವುದರ ಹಿನ್ನೆಲೆಯೂ ಇಂಟರೆಸ್ಟಿಂಗಾಗಿದೆ. ಕೆಲಕಾಲ ಆರೋಗ್ಯ ಇಲಾಖೆ ಆಮೇಲೆ ಸಾರಿಗೆ ಮಂತ್ರಿಯಾಗಿ ಚೆನ್ನಾಗಿ ದುಡಿದಿರುವ ಚೆಲುವ ಬೆಂಗಳೂರೊಂದರಲ್ಲೇ ಕನಿಷ್ಠ 150 ಕೋಟಿ ಆಸ್ತಿ ಮಾಡಿಕೊಂಡಿದ್ದಾನೆ.

ರಾಜಾಜಿನಗರದ ರಾಜ್‌ಕುಮಾರ್ ರೋಡಿನ ಈ ಸಂಜೆ ಪತ್ರಿಕೆ ಆಫೀಸ್ ಪಕ್ಕ ಕಣ್ವಾ ಲ್ಯಾಬ್ ಅಂತ ಒಂದು ದೊಡ್ಡ ಕಟ್ಟಡವನ್ನು ನೀವು ನೋಡಿರಬಹುದು. ಕೇವಲ 40 ಕೋಟಿ ಬಿಸಾಕಿ ಅದರ ಪಕ್ಕದಲ್ಲಿರುವ ಭೂಮಿಯನ್ನು ಖರೀದಿಸಿದ್ದಾನೆ ಚೆಲುವರಾಯಸ್ವಾಮಿ. ಅದೇತರ ಮಲ್ಲೇಶ್ವರದಲ್ಲೊಂದು ಬೃಹತ್ ಖಾಲಿ ಜಾಗವೊಂದು ಇವನ ಕೈ ಸೇರಿದೆ. ಹತ್ತಾರು ಕೋಟಿ ಬೆಲೆಬಾಳುವ ಜಾಗ ಅದು. ನಾಳೆ ಅಲ್ಲೊಂದು ಬಿಲ್ಡಿಂಗ್ ಎಬ್ಬಿಸಿದರೆ ನೂರು ಕೋಟಿಯ ಆಸ್ತಿ!

"ನನಗೆ ದುಡ್ಡು ಕೊಡೋದು ಗೊತ್ತು, ಮಾಡೋದು ಗೊತ್ತು" ಎಂದು ಧೈರ್ಯವಾಗಿ ಹೇಳಿಕೊಳ್ಳುವ ಚೆಲುವರಾಯಸ್ವಾಮಿಗೆ ಸದ್ಯಕ್ಕೆ ರೇವಣ್ಣನೊಬ್ಬನನ್ನು ಹೇಗೋ ಸರಿ ಮಾಡಿಕೊಂಡು ಬಿಟ್ಟರೆ ಸಾಕು 'ಕೈಗಾರಿಕಾ ಮಂತ್ರಿ' ಸ್ಥಾನ ಗ್ಯಾರಂಟಿ ಅಂತಾ ಕನಸು ಕಾಣುತ್ತಿದ್ದಾನೆ.

ಬಜೆಪಿಯ ಕಟ್ಟಾ ನಾಯ್ಡು ಅಲ್ಲಿ ಕೂತು ಹೇಗೆ ಸಾವಿರಾರು ಕೋಟಿ ಬಾಚಿಕೊಂಡನೆಂಬುದನ್ನು ಚೆಲುವನೂ ನೋಡಿದ್ದನಲ್ಲ, ಆದರೆ ಗೌಡರ ಕಿಚನ್ ಕ್ಯಾಬಿನೆಟ್ ಮೆಂಬರ್ ಪಾಂಡವಪುರ ಪುಟ್ಟರಾಜು ಚೆಲುವನ ಆಸೆಗೆ ನೀರೆರಚಲು ರೆಡಿಯಾಗಿದ್ದಾರೆ. ರೇವಣ್ಣನ ಸಪೋರ್ಟ್ ಪುಟ್ಟರಾಜುವಿಗಿದೆ. ಇನ್ನೂ ಮೇಲಾಗಿ ಇದೇ ಚೆಲುವರಾಯಸ್ವಾಮಿ, ಮಾಗಡಿ ಬಾಲಕೃಷ್ಣ ಮತ್ತು ಚೆನ್ನಿಗಪ್ಪನ್ನ ಸೇರಿಸಿಕೊಂಡು ದಳ ವಿಭಜಿಸಿ ಬಜೆಪಿ-ಕಾಂಗ್ರೆಸ್ ಯಾವುದಾದರೂ ಸರಿ ಅಂತಾ ಬೆಂಬಲಿಸಲು ಹೊರಟಿದ್ದನ್ನು ಗೌಡರು ತಾನೆ ಹೇಗೆ ಮರೆಯುತ್ತಾರೆ?

ಹಾಗಾಗಿ 25 ಕೋಟಿಗೆ ಕೈಗಾರಿಕಾ ಮಂತ್ರಿ ಪದವಿ ಖರೀದಿಸಲು ಚೆಲುವ ರೆಡಿಯಾಗಿದ್ದರೂ ಅದು ಸಿಗುವುದು ಕಷ್ಟಸಾಧ್ಯ ಅನಿಸೋಲ್ಲವಾ?



ಅಡೂರರ 'ನಾಲ್ಕು ಮಹಿಳೆಯರು'

ಭಾರತದ ಪ್ರಖ್ಯಾತ ನಿರ್ದೇಶಕರಾದ ಅಡೂರ್ ಗೋಪಾಲಕೃಷ್ಣನ್ ನಿರ್ದೇಶಿಸಿರುವ ಹೊಸ ಚಿತ್ರವೊಂದು ಈಗಾಗಲೇ ಅಂತಾರಾಷ್ಟ್ರೀಯ ಮಟ್ಟದಲ್ಲೂ, ಕೇರಳದ ಚಿತ್ರ ಪ್ರೇಮಿಗಳಲ್ಲೂ ಸಂಚಲನವನ್ನು ಉಂಟುಮಾಡಿದೆ. ವಿಮರ್ಶಕರಿಂದ 'ನೋಡಲೇಬೇಕಾದ ಚಿತ್ರ' ಎನಿಸಿಕೊಂಡಿರುವ ಈ ಚಿತ್ರ ಸದ್ಯದಲ್ಲೇ ಗೋವಾದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸ್ಪರ್ಧೆಯಲ್ಲಿರುವ ಚಿತ್ರಗಳ ಪಟ್ಟಿಗೆ ಸೇರ್ಪಡೆಗೊಂಡಿದೆ.

ಜ್ಞಾನಪೀಠ ಪ್ರಶಸ್ತಿ ವಿಜೇತ ಶಿವಶಂಕರ ಪಿಳ್ಳೈರವರ ನಾಲ್ಕು ಕಿರುಕತೆಗಳನ್ನು ಆಧರಿಸಿ ನಿರ್ಮಿಸಲಾಗಿರುವ ಈ ಚಿತ್ರದ ಹೆಸರು 'ನಾಲ್ಕು ಮಹಿಳೆಯರು' (ನಾಲು ಪೆಣ್ಣುಂಗಳ್) 1940ರಿಂದ 1960ರವರೆಗಿನ ಕಾಲಘಟ್ಟದಲ್ಲಿನ ಈ ಕತೆಗಳು ಕೇರಳದ ಸಾಂಸ್ಕೃತಿಕ ಮತ್ತು ಸಾಮಾಜಿಕ ವಲಯಗಳಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಮಹಿಳೆಯರು ನಡೆಸುವ ಹೋರಾಟಗಳನ್ನು ಬಿಂಬಿಸುತ್ತವೆ.

ಚಿತ್ರದಲ್ಲಿ ನಾಲ್ಕೂ ಕತೆಗಳನ್ನು ಪ್ರತ್ಯೇಕವಾಗಿ ತೋರಿಸಿದ್ದರೂ ಅದರಲ್ಲಿನ ಮಹಿಳೆಯರು ಚಿತ್ರಕ್ಕೆ ಒಂದು ಸೂತ್ರವನ್ನು ನೀಡುತ್ತಾರೆ.

ಮೊದಲಿನ ಕತೆ ಓರ್ವ ವೇಶ್ಯೆಯದ್ದು. ಜೀವನೋಪಾಯಕ್ಕಾಗಿ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಕುಂಜು ಪೆಣ್ಣು ಅದೃಷ್ಟವಶಾತ್ ಪಪ್ಪು ಕುಟ್ಟಿಯನ್ನು ಭೇಟಿಯಾಗಿ ಅವರಿಬ್ಬರ ನಡುವೆ ಪ್ರೇಮಾಂಕುರವಾಗುತ್ತದೆ. ಆತ ಅವಳನ್ನು ಮದುವೆಯಾಗಲು ಮುಂದಾದಾಗ ಕುಂಜು ಪೆಣ್ಣು ತನ್ನ ವೇಶ್ಯಾವೃತ್ತಿಯನ್ನು ತ್ಯಜಿಸಿ ಆತನೊಂದಿಗೆ ಸಾಂಪ್ರದಾಯಿಕ ಮಹಿಳೆಯಂತೆ ಜೀವಿಸಲಾರಂಭಿಸುತ್ತಾಳೆ. ಆದರೆ ಅವರ ಈ ಸಂಬಂಧಕ್ಕೆ ಸಾಮಾಜಿಕ ಮನ್ನಣೆ ಸಿಗುವುದಿಲ್ಲ- ಮಾತ್ರವಲ್ಲ ತಾವಿಬ್ಬರು ಮದುವೆಯಾಗಿದ್ದೇವೆಂದು ಹೇಳಿದರೂ ಸಮಾಜ ಅದನ್ನು ಒಪ್ಪಿಕೊಳ್ಳುವುದಿಲ್ಲ, ಕೊನೆಗೆ ಅವರಿಬ್ಬರನ್ನೂ ಪೊಲೀಸರು ಬಂಧಿಸುತ್ತಾರಲ್ಲದೆ, ನ್ಯಾಯಾಲಯ ಕೂಡ ಕುಂಜು ಪೆಣ್ಣಿನಂತಹ ಅನೈತಿಕ ಹಿನ್ನೆಲೆಯ ಮಹಿಳೆಯನ್ನು ಯಾರಾದರೂ ಪ್ರೀತಿಸುವುದಾಗಲಿ, ಮದುವೆಯಾಗುವುದಾಗಲಿ ಸಾಧ್ಯವಿಲ್ಲ ಎಂದು ತೀರ್ಪು ನೀಡುತ್ತದೆ. ನೈಜ ಪ್ರೇಮಿಗಳಾದ, ಸಂತೋಷವಾಗಿದ್ದ ಒಂದು ಜೋಡಿಯನ್ನು ಸಾಮಾಜಿಕ ವ್ಯವಸ್ಥೆ ಹೀಗೆ ಶಿಕ್ಷೆಗೆ ಗುರಿಪಡಿಸುತ್ತದೆ.

ಎರಡನೆ ಕತೆ 'ಕನ್ಯೆ'. ಇದರಲ್ಲಿ ಕುಮಾರಿ ಹೊಲ-ಗದ್ದೆಗಳಲ್ಲಿ ದುಡಿಯುತ್ತಾ ತನ್ನ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿರುತ್ತಾಳೆ. ಎಲ್ಲ ಪೋಷಕರಂತೆ ಆಕೆಯ ತಂದೆತಾಯಿ ಕೂಡ ಒಂದು ದಿನ 'ಸೂಕ್ತ' ಹುಡುಗನೊಂದಿಗೆ ಕುಮಾರಿಯ ಮದುವೆ ಮಾಡಿಸುತ್ತಾರೆ. ಯಾವುದೇ ಕೆಟ್ಟಚಟಗಳನ್ನು ಹೊಂದಿರದ ಆತನಿಗೆ ತನ್ನ ನವ ಮಡದಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಷ್ಟು ತನ್ನ ಕೆಲಸದಲ್ಲಿ ಆಸಕ್ತಿ, ಒಂದು ದಿನ ತವರಿಗೆ ಹಿಂದಿರುಗುವ ಕುಮಾರಿ ಮತ್ತೆ ತನ್ನ ಗಂಡನ ಮನೆಗೆ ಹೋಗದೆ ಅಲ್ಲೇ ಉಳಿದುಬಿಡುತ್ತಾಳೆ. ತನಗೆ ಮದುವೆಯೇ ಆಗಿಲ್ಲ ಎಂಬಂತೆ, ಆದದ್ದೆಲ್ಲ ಒಂದು ಕೆಟ್ಟ ಕನಸೆಂಬಂತೆ ಜೀವಿಸಲಾರಂಭಿಸುತ್ತಾಳೆ.


ಮೂರನೇ ಕತೆ 'ಗೃಹಿಣಿ'. ಇದು ಅಪ್ಪಟ ಪತಿವ್ರತೆಯೊಬ್ಬಳ ಜೀವನದಲ್ಲಿ ಸಂಭವಿಸಬಹುದಾಗಿದ್ದ ತಪ್ಪಿನ ವೃತ್ತಾಂತವನ್ನು ಬಿಡಿಸಿಡುತ್ತದೆ. ಚಿನ್ನು ಅಮ್ಮಳನ್ನು ಅವಳ ಗಂಡ ಬಹಳ ಪ್ರೀತಿಸುತ್ತಿದ್ದರೂ ಅವರಿಗೆ ಹುಟ್ಟಿದ ಮಕ್ಕಳು ಅಕಾಲಿಕವಾಗಿ ಸಾವಿಗೀಡಾಗಿದ್ದಾರೆ. ಹಾಗಾಗಿ ದಂಪತಿಗಳ ನಡುವೆ ವಿರಸ ಉಂಟಾಗಿದೆ. ಅದೇ ಸಮಯಕ್ಕೆ ಎಂಟು ಮಕ್ಕಳ ತಂದೆಯಾದ,



ತಮಿಳುನಾಡಿನಲ್ಲಿ ಯಶಸ್ವಿ ವ್ಯವಹಾರವನ್ನು ನಡೆಸುತ್ತಿರುವ ಆಕೆಯ ಹಳೇ ಸ್ನೇಹಿತ ಊರಿಗೆ ಹಿಂದಿರುಗುತ್ತಾನೆ. ಮಕ್ಕಳಿಲ್ಲದ ಚಿನ್ನು ಅಮ್ಮಳ ಪರಿಸ್ಥಿತಿಯನ್ನು ಕಂಡು ತಮ್ಮಿಬ್ಬರ ನಡುವೆ ಸಂಬಂಧ ಏರ್ಪಟ್ಟರೆ ಆಕೆಗೆ ಮಕ್ಕಳಾಗಬಹುದು ಎಂಬ ಆಶೆ ಹುಟ್ಟಿಸುತ್ತಾನೆ. ಈ ಆಶೆಗೆ ಇನ್ನೇನು ಚಿನ್ನು ಅಮ್ಮ ಬಲಿಯಾಗಬೇಕು, ಆಗ ತನ್ನ ಗಂಡ ತನ್ನನ್ನು ನಿಜವಾಗಲು ಪ್ರೀತಿಸುತ್ತಾನೆಂದು ಅರಿಯುವ ಚಿನ್ನು ಅಮ್ಮ ಹಿಂಜರಿಯುತ್ತಾಳೆ. ಕೊನೆ ಕ್ಷಣದಲ್ಲಿ ತಾನು ಮಾಡಲಿದ್ದ ತಪ್ಪಿನ ಅರಿವು ಅವಳಿಗಾಗುತ್ತದೆ.

ನಾಲ್ಕನೆ ಮತ್ತು ಕೊನೆ ಕತೆ 'ನಿತ್ಯಕನ್ಯೆ.' ಇದರಲ್ಲಿ ಕಪ್ಪಗಿರುವ ಹಿರಿಯಕ್ಕನನ್ನು ನೋಡಲು ಬಂದಿರುವ ವರ ಅವಳನ್ನು ತಿರಸ್ಕರಿಸಿ ಆಕೆಯ ತಂಗಿಯನ್ನು ಆಯ್ಕೆ ಮಾಡುತ್ತಾನೆ. ತಂಗಿಯ ಮದುವೆಯಿಂದಾಗಿ ತಾನು ಶಾಶ್ವತವಾಗಿ ಕನ್ಯೆಯಾಗಿ ಉಳಿಯುವ ಅಪಾಯವನ್ನು ಆಕೆ ವಿಧಿ ಇಲ್ಲದೆ ಎದುರಿಸಬೇಕಾಗುತ್ತದೆ. ತಂಗಿಯ ಮದುವೆಯ ನಂತರ ಆಕೆಯೊಂದಿಗೆ ಜೀವಿಸಲು ಹಿರಿ ಅಕ್ಕ ಹೋಗುತ್ತಾಳಾದರೂ ಅಂತಿಮವಾಗಿ ಒಬ್ಬಂಟಿಯಾಗಿ ಬದುಕಬೇಕೆಂದು ನಿರ್ಧರಿಸುತ್ತಾಳೆ.

ಸಮಾಜದ ವಿವಿಧ ಸ್ತರಗಳಿಂದ ಬಂದ ನಾಲ್ವರು ಮಹಿಳೆಯರ ಬದುಕನ್ನು, ಸಂಕಷ್ಟಗಳನ್ನು ಹೋರಾಟಗಳನ್ನು ಬಿಚ್ಚಿಡುವ ಈ ಚಿತ್ರ ಈಗಾಗಲೇ ಹಲವಾರು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಎಲ್ಲರ ಮೆಚ್ಚುಗೆ ಪಡೆದಿದೆ. ■



ಹಿಂದಿಯಲ್ಲಿ ತೋಪೆದ್ದ 'ಆಪ್ತಮಿತ್ರ'

ನಿಮಗೀಗಾಗಲೇ ಗೊತ್ತಿರುವಂತೆ ಮಲೆಯಾಳಂನಲ್ಲಿ ಹಿಟ್ ಆಗಿದ್ದ 'ಮಣಿಚಿತ್ರತ್ತಾಳ್' ಎಂಬ 1993ರ ಸಿನಿಮಾವನ್ನು ಕುಳ್ಳ ದ್ವಾರಕೀಶ್ ಕನ್ನಡಕ್ಕೆ ತಂದು 'ಆಪ್ತಮಿತ್ರ' ಮಾಡಿದ್ದರು. ಅಷ್ಟೊತ್ತಿಗಾಗಲೇ ಪಾಪರ್ ಆಗಿದ್ದ ದ್ವಾರಕೀಶರಿಗೆ ಈ ಚಿತ್ರ ಹಿಟ್ ಆಗಿ ಅಪಾರ ಲಾಭ ತಂದಿತ್ತು.

ಈ ಹಿಟ್ ಚಿತ್ರ ತಮಿಳಿನ ರಜನಿಕಾಂತ್ ಕಣ್ಣಿಗೂ ಬಿತ್ತು. ಅದೇ ಹೊತ್ತಿಗೆ ಅವರ 'ಬಾಬಾ' ಎಂಬ ಚಿತ್ರ ದೊಡ್ಡ ಫ್ಲಾಪ್ ಆಗಿದ್ದರಿಂದ ಅವರಿಗೂ ಒಂದು ಹಿಟ್‌ನ ಅಗತ್ಯತೆ ಇತ್ತು. ಅವರು ಇದರ ಕತೆಯನ್ನು ತಮಿಳಿನಲ್ಲಿ 'ಚಂದ್ರಮುಖಿ'ಯಾಗಿ ತೆರೆಗೆ ತಂದರು. ಅವರ ಅದೃಷ್ಟವೂ ಚೆನ್ನಾಗಿತ್ತು, ಚಂದ್ರಮುಖಿ ಸೂಪರ್ ಹಿಟ್ ಆಯಿತು. ಅದನ್ನೇ ತೆಲುಗಿಗೂ ಡಬ್ ಮಾಡಿ ಬಿಡುಗಡೆ ಮಾಡಿದರೆ ಆಂಧ್ರದಲ್ಲೂ ಚೆನ್ನಾಗಿ ನಡೆಯಿತು.

ಈ ಎಲ್ಲ ಯಶಸ್ಸುಗಳನ್ನು ಕಂಡು ಉತ್ಸುಕನಾದ ಪ್ರಿಯದರ್ಶನ್ ಎಂಬ ನಿರ್ದೇಶಕ ಅದನ್ನು ಹಿಂದಿಯಲ್ಲಿ 'ಭೂಲ್ ಭುಲಯ್ಯ' ಎಂದು ರೀಮೇಕ್ ಮಾಡಿದ. ಅದರಲ್ಲಿ ಸೌಂದರ್ಯಳ ಪಾತ್ರವನ್ನು ವಿದ್ಯಾಬಾಲನ್, ವಿಷ್ಣು ಪಾತ್ರವನ್ನು ಅಕ್ಷಯ್ ಕುಮಾರ್, ದ್ವಾರಕೀಶರ ಪಾತ್ರವನ್ನು ಪರೇಶ್ ರಾವಲ್ ನಿರ್ವಹಿಸಿದ್ದರೂ ಅದು ಯಾಕೋ ಬಾಕ್ಸ್ ಆಫೀಸಿನಲ್ಲಿ ಅಷ್ಟು ಯಶಸ್ಸನ್ನು ಕಂಡಿಲ್ಲ.

ಅಂದರೆ 'ಮಣಿಚಿತ್ತಿರತ್ತಾಳ್' ಅನ್ನು ಭಾರತದ ಇತರೆ ಭಾಷೆಗಳಿಗೆ ಭಟ್ಟಿ ಇಳಿಸುವ ಪ್ರಕ್ರಿಯೆಗೆ ಸದ್ಯಕ್ಕೆ ಬ್ರೇಕ್ ಬಿದ್ದಿದೆ!



ಚಳಿಚಳಿ ತಾಳೆನು ಈ ಚಳಿಯಾ!

ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಿನಲ್ಲಿನ ಮೈನಸ್ ಡಿಗ್ರಿ ಉಷ್ಣಾಂಶದಲ್ಲಿ ಚಿತ್ರೀಕರಣ ಮುಗಿಸಿ ಬಂದಿರುವ 'ಗಂಗಾ ಕಾವೇರಿ' ತಂಡದಲ್ಲಿ ತಾರಾ ಕೂಡಾ ಇದ್ದರು. ಆಕೆಯ ಪತಿ ವೇಣು ಆ ಚಿತ್ರದ ಛಾಯಾಗ್ರಾಹಕ ಆದ ಮೇಲೆ ಅವರೂ ಅಲ್ಲಿದ್ದರು. ಹೀಗಾಗಿ ಝೀರೋ ಡಿಗ್ರಿ ಚಳಿಯಲ್ಲಿ ತಂಡದ ಇತರೆ ಸದಸ್ಯರು ಗಡಗಡನೆ ನಡುಗುತ್ತಿದ್ದರೆ, ಈ ತಾರಾ ದಂಪತಿಗಳು ಪರಿಸ್ಥಿತಿಯ ಸದುಪಯೋಗ ಪಡೆದಿರಬಹುದೇ? ಎಂಬುದು ಪತ್ರಕರ್ತರ ಕುತೂಹಲ. ಈ ಬಗ್ಗೆ ತಾರಾರನ್ನು ಸುತ್ತಿ ಬಳಸಿ ಪ್ರಶ್ನಿಸಿದರೆ ತಾರಾ ಹೇಳಿದ್ದು ಇಷ್ಟು: "ವೇಣು ಬೆಳಗಿನ ಜಾವ ಲೊಕೇಷನ್ ಹುಡುಕಲು ಹೋಗುತ್ತಿದ್ದ, ರಾತ್ರಿ ಬಂದ ನಂತರ ಮರುದಿನದ ಶೂಟಿಂಗ್ ಚರ್ಚೆಯಲ್ಲಿ ಇರುತ್ತಿದ್ದ. ಹೀಗಾಗಿ ನೀವು ಅಂದುಕೊಂಡದ್ದೇನೂ ನಡೆದಿಲ್ಲ, ವಿರಾಮದ ಸಂದರ್ಭದಲ್ಲಿ ನಾನು ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದೆ."

"ಹಾಗಾದರೆ ನೀವು ದೇವರಲ್ಲಿ ಏನು ಬೇಡಿದಿರಿ?" ಎಂದು ಪತ್ರಕರ್ತರ ಕುಹಕ ಪ್ರಶ್ನೆ ಆಕೆಗೆ ಎದುರಾಯಿತು.

"ಹೊಸದಾಗಿ ಮದುವೆಯಾದವರು ದೇವರಲ್ಲಿ ಇನ್ನೇನು ಕೇಳುತ್ತಾರೆ?" ಎಂದು ಪತ್ರಕರ್ತರಿಗೇ ಮರುಪ್ರಶ್ನೆ ಹಾಕಿ ತಾರಾ ಅಲ್ಲಿಂದ ಕಾಲ್ಕಿತ್ತರು.

ಮನೋಜ್‌ಕುಮಾರ್‌ಗೆ 'ಸಾರಿ' ಅಂದ ಶಾ ರು ಖ್

ಶಾರುಖ್ ಖಾನ್ ನಟಿಸಿ, ನಿರ್ಮಿಸಿರುವ 'ಓಂ ಶಾಂತಿ ಓಂ' ಚಿತ್ರದಲ್ಲಿ 70ರ ದಶಕದ ಸಿನಿಮಾಗಳನ್ನು, ಅವುಗಳ ನಟರನ್ನು ಗೇಲಿ ಮಾಡಲಾಗಿದೆ. ಈ ಗೇಲಿ ಚಿತ್ರದ ನಿರ್ದೇಶಕ ಫರ್ಹಾ ಖಾನ್‌ಳ ತುಂಟಾಟ ಅಷ್ಟೇ ಎಂದು ಬಹಳಷ್ಟು ಜನ ಸುಮ್ಮನಾಗಿದ್ದಾರೆ.


ಆದರೆ ಮನೋಜ್ ಕುಮಾರ್ ಎಂಬ ಮಾಜಿ ನಟ/ನಿರ್ದೇಶಕ/ನಿರ್ಮಾಪಕ ಸುಮ್ಮನೆ ಕೂತಿಲ್ಲ. ಸಾಮಾನ್ಯ ಪ್ರತಿಭೆಯ ಮನೋಜ್‌ಕುಮಾರ್ ತನ್ನ ಎಲ್ಲ ಚಿತ್ರಗಳಲ್ಲಿ 'ಭರತ್' ಎಂದೇ ಹೆಸರಿಟ್ಟುಕೊಳ್ಳುತ್ತಿದ್ದರಲ್ಲದೆ, ಅವುಗಳಲ್ಲಿ ತನ್ನ ದೇಶ ಪ್ರೇಮವನ್ನೂ, ರಾಷ್ಟ್ರ ಭಕ್ತಿಯನ್ನೂ ಹಸಿಹಸಿಯಾಗಿ ತೋರಿಸುತ್ತಿದ್ದರು. ಇದೆಲ್ಲದರಿಂದ ಅಂದಿನ ಪತ್ರಕರ್ತರು ಇವರಿಗೆ 'ಮಿಸ್ಟರ್ ಇಂಡಿಯಾ' ಎಂದೇ ಅಡ್ಡ ಹೆಸರಿಟ್ಟಿದ್ದರು.


ಈಗ ಈ 'ಭಾರತ ಪುತ್ರ'ನನ್ನೇ ಗೇಲಿ ಮಾಡುವಷ್ಟು ಹುಂಬತನವನ್ನು ಶಾರುಖ್ ಮತ್ತು ಫರ್ಹಾ ಪ್ರದರ್ಶಿಸಿದರೆ ಆತ ಹೇಗೆ ಸುಮ್ಮನಿರಲು ಸಾಧ್ಯ?

ಅದಕ್ಕೇ ಆತ ಅವರಿಬ್ಬರ ವಿರುದ್ಧ ತೇಜೋವಧೆ ಮೊಕದ್ದಮೆಯನ್ನು ಹೂಡಲು ಸಜ್ಜಾಗಲಾರಂಭಿಸಿದರು. ಇದರ ಬಗ್ಗೆ ಕೇಳುತ್ತಿದ್ದಂತೆ ಗಾಬರಿಯಾದ ಶಾರುಖ್ ಕೂಡಲೇ ಕ್ಷಮೆಯಾಚಿಸಿದನು. "ನಾನು ತಪ್ಪು ಮಾಡಿದ್ದೇನೆ. ಬೇಕಿದ್ದರೆ ಆ ಭಾಗವನ್ನು ಕಿತ್ತು ಹಾಕುತ್ತೇನೆ. ನನ್ನನ್ನು ಕ್ಷಮಿಸಿ" ಎಂದು ಸಾರ್ವಜನಿಕವಾಗಿ ಹೇಳಿದ್ದಾನೆ.

ಇದನ್ನು ಕೇಳಿ ಮನೋಜ್ ಕುಮಾರ್ ಕೂಡ ಈಗ ಸುಮ್ಮನಾಗಿದ್ದಾರೆ. ಆದರೆ ಹಲವರ ಪ್ರಕಾರ ಮನೋಜ್ ಕುಮಾರ್‌ರವರಿಗೆ ಈ ಕ್ಷಮೆಯಿಂದ ಏನೂ ಸಿಗುವುದಿಲ್ಲ. ಬದಲಾಗಿ ಹಿಟ್ ಆಗಿರುವ 'ಓಂ ಶಾಂತಿ ಓಂ' ಚಿತ್ರದಿಂದ ಬಂದಿರುವ ಲಾಭದಲ್ಲಿ ಒಂದು ಭಾಗವನ್ನು ಕೇಳಿದರೆ ಅದೆಷ್ಟೊ ಹಣವಾದರೂ ಸಿಗುತ್ತದೆಯಂತೆ!

ಮಿ. ಭಾರತ್‌ಗೆ ಈ ಪುಕ್ಕಟೆ ಸಲಹೆ ಬಗ್ಗೆ ಏನನಿಸುತ್ತದೆಯೋ?!





ಬ್ಯುಸಿ ಓಲ್ಡ್ ಮ್ಯಾನ್ ಅನಂತ್!

ಯಾವತ್ತೂ ಸ್ಟಾರ್‌ಗಿರಿಗೆ ಸೊಪ್ಪು ಹಾಕದ, ತನ್ನ ಇಮೇಜ್ ಬಗ್ಗೆ ತಲೆಕೆಡಿಸಿಕೊಳ್ಳದ ಅಪರೂಪದ ನಟ ಅನಂತ್‌ನಾಗ್. ತನ್ನ ಪ್ರತಿಭೆಯೊಂದರಿಂದಲೇ ಎರಡು ದಶಕಗಳಿಂದ ಪ್ರೇಕ್ಷಕರ ಮನಸ್ಸನ್ನು ಗೆಲ್ಲುತ್ತಲೇ ಬಂದಿರುವ ಈ ಸಹಜ ನಟನಿಗೆ ಇವತ್ತು ಕನ್ನಡ ಚಿತ್ರರಂಗದಲ್ಲಿ ಆಗುತ್ತಿರುವ ಬದಲಾವಣೆಗಳ ಬಿಸಿ ತಾಕುತ್ತಿಲ್ಲ.

ಯಾಕೆಂದರೆ, ಇವರ ವಾರಿಗೆಯ ಇತರೆ ನಟರು ತಮ್ಮ ಸ್ಟಾರ್‌ಗಿರಿಯ ಅಹಂನಲ್ಲೇ ಉಳಿದುಕೊಂಡು ಇವತ್ತು ನಿರುದ್ಯೋಗಿಗಳಾಗಿದ್ದರೆ ಅನಂತ್ ಮಾತ್ರ ಅಂತಹ ಅಹಂ ಇಲ್ಲದೆ ಪರಿಸ್ಥಿತಿಯ ಲಾಭವನ್ನು ಪಡೆದು ತಮ್ಮ ತಲೆಮಾರಿನ ನಟರಲ್ಲೇ ಅತಿ ಬ್ಯುಸಿ ನಟರಾಗಿದ್ದಾರೆ!

ಒಂದೆಡೆ ಹೊಸ ಯುವ ನಟ/ನಟಿಯರಿರುವ ಚಿತ್ರಗಳಲ್ಲಿ ಅನಂತ್ ಅಪ್ಪನಾಗಿಯೋ, ಮಾವನಾಗಿಯೋ ಅನಿವಾರ್ಯವಾಗಿದ್ದಾರಲ್ಲದೆ, ಇನ್ನೊಂದೆಡೆ ಮೆಗಾ ಧಾರಾವಾಹಿಗಳಲ್ಲೂ ನಟಿಸುತ್ತ ಪ್ರತಿ ದಿನ ಸೀರಿಯಲ್ಲುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇವೆರಡರ ಮಧ್ಯೆ ಆಗೊಮ್ಮೆ ಈಗೊಮ್ಮೆ ಕಲಾತ್ಮಕ ಚಿತ್ರಗಳಲ್ಲೂ ನಟಿಸುತ್ತಾ ತಮ್ಮ ಸೃಜನಶೀಲತೆಯನ್ನು ಕಾಪಾಡಿಕೊಂಡಿದ್ದಾರೆ. ಇವೆಲ್ಲದರಿಂದ ಹೀರೋ ಆಗಿದ್ದಾಗಿಂತಲೂ ಇವತ್ತು ಇನ್ನೂ ಹೆಚ್ಚು ಬೇಡಿಕೆಯಲ್ಲಿದ್ದಾರೆ ಅನಂತ್‌ನಾಗ್!

ಸ್ಟಾರ್ ಒಬ್ಬ ಒಂದು ಕಾಲಕ್ಕೆ ಸೀಮಿತವಾಗಿರುತ್ತಾನೆ ಆದರೆ ನಿಜವಾದ ನಟ ಸರ್ವಕಾಲಕ್ಕೂ ವಿಜೃಂಭಿಸುತ್ತಾನೆ ಎಂಬುದನ್ನು ಅನಂತ್ ನಾಗ್ ಮತ್ತೆ ತೋರಿಸಿಕೊಟ್ಟಿದ್ದಾರೆ. ಅವರು ತೋರಿಸಿರುವ ಹಾದಿಯಲ್ಲಿ ಉಳಿದ ಹಿರಿಯ ನಟರು ಸಾಗಲು ಸಾಧ್ಯವೇ?

R R P LANKESH, Kannada Weekly Price Rs. 10/- 28-11-2007 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಮುಖ್ಯಮಂತ್ರಿಯ ಪ್ರೇಮ ಪ್ರಕರಣ





'ಮುಖ್ಯಮಂತ್ರಿ ಐ ಲವ್ ಯೂ' ಎಂಬ ವಿಚಿತ್ರ ಮತ್ತು ಕುತೂಹಲಕಾರಿ ಹೆಸರಿನ ಚಿತ್ರ ಮುಂದಿನ ವಾರ ಸೆಟ್ಟೇರುತ್ತಿದೆ. ಈ ಚಿತ್ರದ ಮುಖಾಂತರ ಫುಲ್ ಟೈಮ್ ಪತ್ರಕರ್ತ ಕಂ ಪಾರ್ಟ್ ಟೈಮ್ ನಟ ರವಿ ಬೆಳಗೆರೆ ಫಸ್ಟ್ ಟೈಮ್ ನಿರ್ದೇಶಕರಾಗುತ್ತಿದ್ದಾರೆ. ಅವರ ಬೆಂಬಲಕ್ಕೆ ಓರ್ವ ಟೆಕ್ನಿಕಲ್ ನಿರ್ದೇಶಕರೂ ಇರುತ್ತಾರೆಂಬ ಸುದ್ದಿ ಇದೆ.

ಗಾಂಧಿನಗರ ಚಿತ್ರದಲ್ಲಿ ಈಗಾಗಲೇ ರಮ್ಯಾಳ ಸ್ಥಾನವನ್ನು ಅಲಂಕರಿಸುತ್ತಿರುವ ಹರಿಪ್ರಿಯ ಎಂಬ ಹೊಸ ನಟ ಈ ಚಿತ್ರದಲ್ಲೂ ರಮ್ಯಾ ನಟಿಸಬೇಕಿದ್ದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾಳೆ. ಮತ್ತೊಂದು ನಾಯಕಿಯ ಪಾತ್ರದಲ್ಲಿ ಭಾವನಾ ಇದ್ದಾಳೆ. ನಾಯಕರಾಗಿ ವಿಜಯ್ ಮತ್ತು ಶ್ರೀನಗರ ಕಿಟ್ಟಿ ಇಬ್ಬರೂ ನಟಿಸುತ್ತಿದ್ದು ಪತ್ರಕರ್ತನ ಪಾತ್ರದಲ್ಲಿ ಸ್ವತಃ ಬೆಳಗೆರೆ ಇರುತ್ತಾರಂತೆ.

ಈ ಚಿತ್ರ ಒಂದು ಕಾಮಿಡಿಯೋ, ಪ್ರಸ್ತುತ ರಾಜಕೀಯದ ವಿಡಂಬನೆಯೋ, ಅಪ್ಪಟ ಕಮರ್ಷಿಯಲ್ ಚಿತ್ರವೋ ಎಂಬ ಕುತೂಹಲವಿದೆ. ಹಾಗೆಯೇ ಒಂದೆಡೆ ಪ್ರಸ್ತುತ ರಾಜಕೀಯದಲ್ಲಿರುವ ಜನರ ಹೆಸರುಗಳನ್ನೇ ಚಿತ್ರದ ಪಾತ್ರಗಳಿಗೆ ಇಟ್ಟುಕೊಂಡು ಜನರನ್ನು ಆಕರ್ಷಿಸುತ್ತಲೇ, ಇನ್ನೊಂದೆಡೆ ಕನ್ನಡೀಕರಣಗೊಂಡಿರುವ 'ಗಾಡ್‌ಫಾದರ್' ಎಂಬ ಇಂಗ್ಲಿಷ್ ಚಿತ್ರ/ಕಾದಂಬರಿಯ ಕಥಾವಸ್ತುವನ್ನೇ ಹೊಂದಿದ್ದು ಇದೊಂದು ಅಪ್ಪಟ ಕಮರ್ಷಿಯಲ್ ಚಿತ್ರ ಆಗಿರುತ್ತದೆ ಎಂಬ ಮಾತೂ ಕೇಳಿಬರುತ್ತಿದೆ.

ಅಂತೂ ಮುಖ್ಯಮಂತ್ರಿಯೋರ್ವನ ಪ್ರೇಮ ಪ್ರಕರಣ ತೆರೆಯ ಮೇಲೆ ಬರುತ್ತಿದೆ ಎಂದಷ್ಟೇ ಈಗ ಹೇಳಬಹುದು. ಆದರೆ ಆ ಮುಖ್ಯಮಂತ್ರಿ ಯಾರೆಂಬುದು ಮಾತ್ರ ನಿಗೂಢವಾಗಿದೆ. ಯಾಕೆಂದರೆ ಪ್ರಸ್ತುತ ರಾಜಕೀಯದಲ್ಲಿ ಎಲ್ಲವೂ 'ಎರಡೆರಡಾಗಿದೆ'!



■ 'ಮೊಗ್ಗಿನ ಮನಸು' ಚಿತ್ರದಲ್ಲಿ ಶುಭಾ ಪೂಂಜ

ತಾಯಿಯಾದ ಮಾಳವಿಕಾ

ಅವಿನಾಶ್-ಮಾಳವಿಕಾ ದಂಪತಿಗಳು ಈಗ ಅತ್ಯಂತ ಸಂಭ್ರಮದಲ್ಲಿದ್ದಾರೆ. ಕಾರಣವಿಷ್ಟೇ: ಮಾಳವಿಕಾ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಅದೂ ವಿಜಯ ದಶಮಿಯ ಶುಭದಿನದಂದು. ಅವಿನಾಶ್-ಮಾಳವಿಕಾ ಪ್ರೀತಿಸಿ ಮದುವೆಯಾದವರು. ಆ ನಂತರ ಇಬ್ಬರೂ ಸಿನಿಮಾ ಮತ್ತು ಟೀವಿಯಲ್ಲಿ ಬಿಜಿಯಾಗಿದ್ದರು. ಈ ಪ್ರತಿಭಾವಂತ ಜೋಡಿಯ ಚೊಚ್ಚಲ ಕುಡಿಯ ಆಗಮನ ಅವರ ಜೀವನದಲ್ಲಿ ಹೊಸ ಬೆಳಕನ್ನು ನೀಡಲಿ.





ಎಮ್‌ಎಲ್‌ಎ ರಮ್ಯಾ?

ರಕ್ಷಿತಾ ಮದುವೆಯಾಗಿ ನಿವೃತ್ತಿ ಘೋಷಿಸಿದ ಮತ್ತು ರಾಧಿಕಾ ಅಜ್ಞಾತವಾಸಕ್ಕೆ ದೂಡಲ್ಪಟ್ಟ ನಂತರ ಕನ್ನಡ ಚಿತ್ರರಂಗದಲ್ಲಿ ರಮ್ಯಾ ಸಿಕ್ಕಾಪಟ್ಟೆ ಬಿಜಿಯಾಗಿರುತ್ತಾಳೆ ಎಂದೇ ಚಿತ್ರಬ್ರಹ್ಮರು ನಿರೀಕ್ಷಿಸಿದ್ದರು.

ಆದರೆ ಎಲ್ಲರ ನಿರೀಕ್ಷೆಯನ್ನು ಹುಸಿ ಮಾಡುವುದರಲ್ಲಿ ಮೊದಲಿನಿಂದಲೂ ರಮ್ಯಾ ಎತ್ತಿದ ಕೈ. ಈಗ ಈ ರಮ್ಯಾ ಪಾತ್ರಗಳನ್ನು ಒಪ್ಪುವುದಕ್ಕಿಂತ ಅವುಗಳನ್ನು ತಿರಸ್ಕರಿಸುವುದರಲ್ಲೇ ಹೆಚ್ಚು ಸುದ್ದಿ ಮಾಡುತ್ತಿದ್ದಾಳೆ. ಈ ವರ್ಷವೇ ಕನಿಷ್ಠವೆಂದರೂ ಆರು ಚಿತ್ರಗಳನ್ನು ಒಪ್ಪಿಕೊಂಡಿದ್ದ ರಮ್ಯಾ ಆನಂತರ ಅವುಗಳನ್ನು ತಿರಸ್ಕರಿಸಿದ್ದಳು. ಈ ಮಧ್ಯೆ ಆಕೆಯ ಕೊನೆಯ ಚಿತ್ರ ಬಿಡುಗಡೆಯಾಗಿದ್ದು ಯಾವಾಗ ಎಂಬುದ... ಮರೆತುಹೋಗಿದೆ. ಪರಿಸ್ಥಿತಿ ಹೀಗಿರುವಾಗ ರಮ್ಯಾ ಈಗ ಏನು ಮಾಡುತ್ತಿದ್ದಾಳೆ? ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಇತ್ತೀಚೆಗೆ ಗಾಂಧಿನಗರದಲ್ಲಿ ಕೇಳಿಬಂದ ದಟ್ಟವಾದ ಗಾಳಿ ಸುದ್ದಿ ಏನೆಂದರೆ, ರಮ್ಯಾ ಮೊನ್ನೆ ದೆಹಲಿಗೆ ಹೋಗಿ ರಾಹುಲ್ ಗಾಂಧಿಯನ್ನು ಭೇಟಿಯಾದಳಂತೆ. ಅಂದರೆ ಸದ್ಯದಲ್ಲೇ ಆಕೆ ಚಿತ್ರರಂಗಕ್ಕೆ ವಿದಾಯ ಹೇಳಿ ರಾಜಕೀಯಕ್ಕೆ ಧುಮುಕಬಹುದೇ? ಎಂಬ ಮಾತು ಕೇಳಿಬರುತ್ತಿದೆ. ಇದಕ್ಕೆ ಕಾರಣವೂ ಇದೆ. ಅದೇನೆಂದರೆ ಆಕೆಯ ಬಹುತೇಕ ಗಾಡ್‌ಫಾದರ್‌ಗಳು ಕಾಂಗ್ರೆಸ್‌ನಲ್ಲೇ ಇರುವುದರಿಂದ ಈ ಸುದ್ದಿ ನಿಜವಿರಲೂ ಬಹುದು ಎನ್ನುವವರಿದ್ದಾರೆ.

ಆದರೆ ಇದು ನಿಜವೋ, ಸುಳ್ಳೋ ಎಂಬುದು ರಮ್ಯಳಿಗಷ್ಟೇ ಗೊತ್ತು. ನಿಜವಾಗಿದ್ದರೆ ಸದ್ಯದಲ್ಲೇ ಎಮ್‌ಎಲ್‌ಎ ರಮ್ಯಾ ಮೇಡಂ ಎಂದು ಕರೆಯಬೇಕಾಗುತ್ತದಾ ಎನಿಸುತ್ತಿದೆ.

ನಾಣಿಯ ಕುಂಟುನೆಪ — ಅಂಬಿಯಿಂದ ಬಚಾವ್!



ಚಿತ್ರರಂಗದ ಅನೇಕ ವಿವಾದಗಳನ್ನು ಅಂಬರೀಶ್ ಬಗೆಹರಿಸಿದ್ದಾರಲ್ಲದೆ, ಅವರು ಅಜಾತಶತ್ರುವಿನಂತಿರುವುದರಿಂದ ಮತ್ತು ಹಿರಿಯರಾಗಿರುವುದರಿಂದ ಅವರ ಮಾತನ್ನು ಗಾಂಧಿನಗರದ ಯಾರೂ ತಳ್ಳಿಹಾಕುವುದಿಲ್ಲ. ಆದರೆ ಎಸ್. ನಾರಾಯಣ್ ಎಂಬ ಭಟ್ಟಿ ಇಳಿಸುವ ನಿರ್ದೇಶಕ ಕಂ ಕಳಪೆ ನಟ ಕಂ ಕಪಟ ನಿರ್ಮಾಪಕ ಈಗ ಅಂಬಿ ಮಾತಿಗೆ ಸೆಡ್ಡು ಹೊಡೆದು ತನ್ನ ಭಂಡತನವನ್ನು ಮೆರೆದಿದ್ದಾನೆ.

ಫಿಲ್ಮ್ ಛೇಂಬರ್ ಮತ್ತು ಉದ್ಯಮದ ಅನೇಕರ ಒತ್ತಾಯದ ಮೇರೆಗೆ 'ಚಂಡ' ವಿಜಯ್ ಮತ್ತು ಭಂಡ ನಾಣಿ ನಡುವಿನ ಬೀದಿ ಕಾಳಗವನ್ನು ಬಗೆಹರಿಸಲು ಅಂಬಿ ಮುಂದಾಗಿದ್ದರು ಮಾತ್ರವಲ್ಲ ಒಂದು ರಾಜಿ ಸೂತ್ರವನ್ನೂ ಮುಂದಿಟ್ಟಿದ್ದರು. ಆದರೆ ಎಸ್. ನಾರಾಯಣ್ ಆ ಸೂತ್ರವನ್ನು ನಿರ್ಲಕ್ಷಿಸಿ ಅಂಬಿಯ ಕಣ್ಣು ಕೆಂಪಾಗಲು ಕಾರಣನಾಗಿದ್ದಾನೆ.



ಅಪ್ಪ-ಅಮ್ಮ ನಡುವಿನ ಜಗಳದಿಂದ ಕೂಸು ಬಡವಾಯಿತು ಎಂಬಂತೆ ಇವರಿಬ್ಬರ ಜಗಳದಿಂದಾಗಿ ಈಗ ರಾಜೇಂದ್ರಸಿಂಗ್‌ಬಾಬು ನಷ್ಟ ಅನುಭವಿಸುವಂತಾಗಿದೆ. ಬಾಬು ನಿರ್ದೇಶಿಸುತ್ತಿರುವ 'ತಿಪ್ಪಾರಳ್ಳಿ ತರ್ಲೆಗಳು' ಚಿತ್ರಕ್ಕೆ ಅಂಬರೀಶ್ ಮತ್ತು ನಾರಾಯಣ್ ಮುಖಾಮುಖಿಯ ಚಿತ್ರೀಕರಣ ಮೊನ್ನೆ ನಡೆಯಬೇಕಿತ್ತು. ಆದರೆ ಅದ್ಯಾವುದೋ ನೆಪ ಹೇಳಿ ನಾರಾಯಣ್ ಚಿತ್ರೀಕರಣವನ್ನು ಮುಂದೆ ಹಾಕಿಸಿದ್ದಾರೆ. ಅಂಬಿಯನ್ನು ಎದುರಿಸಲು ಆಗದ ನಾಣಿ ಈ ರೀತಿ ಕುಂಟು ನೆಪ ಹೇಳಿ ಬಾಬುವನ್ನು ಕಾಡುತ್ತಿದ್ದಾರೆ.






ರಾಜಕೀಯ ಕ್ಷೇತ್ರದಲ್ಲಿ ಹೇಗೆ ಜೀವನ ಪರ್ಯಂತ ವೈರಿಗಳಿರುವುದಿಲ್ಲವೋ ಹಾಗೆಯೇ ಸಿನಿಮಾ ರಂಗದಲ್ಲೂ ಎಂಬುದು ಎಲ್ಲರಿಗೆ ಗೊತ್ತಿರುವ ವಿಷಯ. ಇದನ್ನು ಸಾಬೀತುಪಡಿಸುವಂತೆ ಈಗ ಹಳೆ ವೈರಿಗಳಿಬ್ಬರು ಹೊಸ ಮಿತ್ರರಾಗಿ ಒಂದುಗೂಡಿರುವ ಸುದ್ದಿ ಗಾಂಧಿನಗರದಿಂದ ಬಂದಿದೆ.

'ನಲ್ಲ' ಚಿತ್ರ ನಿರ್ದೇಶನ ಮಾಡಿದ ನಂತರ ನಾಗೇಂದ್ರ ಪ್ರಸಾದ್ ಮತ್ತು ನಟ ಸುದೀಪ್ ನಡುವೆ ದೊಡ್ಡ ಮನಸ್ತಾಪ ಸೃಷ್ಟಿಯಾಗಿತ್ತು. ಅವರಿಬ್ಬರೂ ಪರಸ್ಪರ ಮಾತನಾಡುವುದನ್ನು ಬಿಟ್ಟುಬಿಟ್ಟಿದ್ದರು. ಇದೀಗ ನಾಗೇಂದ್ರ ಪ್ರಸಾದ್ ನಿರ್ದೇಶನದ 'ಮೇಘವೋ ಮೇಘ' ಚಿತ್ರದಲ್ಲಿ ಅತಿಥಿ ನಟನಾಗಿ ನಟಿಸಲು ಸುದೀಪ್ ಒಪ್ಪಿದ್ದಾರೆ ಎಂಬ ಸುದ್ದಿ ಬಂದಿದೆ. ಅಷ್ಟೇ ಅಲ್ಲ, ಬರುವ ದಿನಗಳಲ್ಲಿ ಸುದೀಪ್ ಅಭಿನಯದ ಚಿತ್ರವೊಂದನ್ನು ನಾಗೇಂದ್ರ ಪ್ರಸಾದ್ ನಿರ್ದೇಶಿಸುತ್ತಾರಂತೆ.

ಮತ್ತೆ ಶಂಕರ್ ನೆನಪು



ರಮೇಶ್ ನಿರ್ದೇಶನದ 'ಆಕ್ಸಿಡೆಂಟ್' ಮೊನ್ನೆ ಮುಹೂರ್ತಗೊಂಡಿತು. ಈಗ 'ಸೈನೈಡ್' ಖ್ಯಾತಿಯ ರಮೇಶ್ ನಿರ್ದೇಶನದ 'ಮಿಂಚಿನ ಓಟ' ಸೆಟ್ಟೇರಿದೆ. ಈ ಇಬ್ಬರೂ ರಮೇಶರು ತಮ್ಮ ಚಿತ್ರಕ್ಕೆ ಆಯ್ಕೆ ಮಾಡಿದ ಹೆಸರುಗಳಲ್ಲಿ ಒಂದು ಸಾಮ್ಯತೆ ಇದೆ. ಅದೇನೆಂದರೆ 'ಮಿಂಚಿನ ಓಟ' ಮತ್ತು 'ಆಕ್ಸಿಡೆಂಟ್' ಎರಡೂ ಶಂಕರ್ ನಾಗ್ ನಿರ್ದೇಶಿಸಿ ನಟಿಸಿದ್ದ ಚಿತ್ರಗಳು. ಇಲ್ಲಿ ಇನ್ನೊಂದು ವಿಶೇಷ... ಅಂದಿನ 'ಮಿಂಚಿನ ಓಟ'ದಲ್ಲಿ ಅನಂತ್ ನಾಗ್ ಮತ್ತು ಶಂಕರ್ ನಾಗ್ ಸಹೋದರರು ನಟಿಸಿದ್ದರೆ ಇಂದಿನ '...ಓಟ'ದಲ್ಲಿ ಸಹೋದರರು ವಿಜಯ್ ರಾಘವೇಂದ್ರ ಮತ್ತು ಮುರಳಿ ಮೊದಲ ಬಾರಿ ಜೊತೆಯಾಗಿ ನಟಿಸುತ್ತಿದ್ದಾರೆ.

ಇಬ್ಬರು ರಮೇಶರಿಗೆ ಶಂಕರ್ ನಾಗ್ ಸ್ಫೂರ್ತಿಯೋ ಅಲ್ಲವೋ ಗೊತ್ತಿಲ್ಲ. ಆದರೆ ಇವರಿಬ್ಬರಿಂದಾಗಿ ಮತ್ತೆ ಶಂಕರ್ ನೆನಪಾಗುತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail : lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4